ಸಂಪುಟ: 05 ಸಂಚಿಕೆ: 180 ಪುಟಗಳು: 08 ಶನಿವಾರ 13 ಸೆಪ್ಟೆಂಬರ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

# ಉದಯ ವಾಹಿನಿ

UV
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಮನುಷ್ಯನಿಗೆ ಜೀವನದಲ್ಲಿ ಬಹಳಷ್ಟು ಸಂಕಷ್ಟಗಳು ಬೇಕಾಗುತ್ತವೆ. ಏಕೆಂದರೆ ಯಶಸ್ಸನ್ನು ಸಂಭ್ರಮಿಸಲು ಅವು ಬೇಕಾಗುತ್ತವೆ

# ಮತ್ತೆ ಜಾತಿಗಣತಿ ಸದ್ದು ಜಾರಿಗೆ ತಂದ ಸಿದ್ದು

**ರಾಜ್ಯದಲ್ಲಿ ಸೆ.22ರಿಂದ ಜಾತಿ ಗಣತಿ**





**ಜಾತಿ ಗಣತಿ ಮರು ಸಮೀಕ್ಷೆಗೆ ಸುತ್ತೋಲೆ**

**ಮನೆ-ಮನೆಗೂ ಬರ್ತಾರೆ 60 ಪ್ರಶ್ನೆ ಕೇಳ್ತಾರೆ**

**ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ 60 ಪ್ರಶ್ನೆಗಳ ಗುಚ್ಚ**

**ಆಧಾರ್ ನಂಬರ್‌ಗೆ ಫೋನ್ ನಂ. ಲಿಂಕ್ ಮಾಡಿ ಸರ್ವೆ**

**ಡಿಸೆಂಬರ್‌ಗೆ ವರದಿ ಸಲ್ಲಿಕೆ**

• ಉದಯವಾಹಿನಿ, ಬೆಂಗಳೂರು

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಸೆ.22 ರಿಂದ ಅ.7ರವರೆಗೆ ನಡೆಯಲಿದ್ದು, ವೈಜ್ಞಾನಿಕವಾಗಿ ಜಾಗ್ರತೆಯಿಂದ ಸಮೀಕ್ಷೆ ನಡೆಸಲು ತಿಳಿಸಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ. ಗೃಹ ಕಚೇರಿ ಕೃಷ್ಣಾದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ, ಸೆ.22, 2025 ರಿಂದ ಅಕ್ಟೋಬರ್ 7ರರೊಳಗೆ ಸಮೀಕ್ಷೆ ಮುಗಿಸಲು ತೀರ್ಮಾನಿಸಲಾಗಿದ್ದು, ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಡಿಸೆಂಬರ್ ಒಳಗಡೆ ವರದಿ ಕೊಡುವುದಾಗಿ ಹೇಳಿದೆ ಎಂದು ತಿಳಿಸಿದರು. ಈ ಸಮೀಕ್ಷೆಯ ಅವಧಿಯಲ್ಲಿ ದಸರಾ ರಜೆ ಇದೆ. ಟೀಚರ್ಸ್‌ಗಳನ್ನು ಉಪಯೋಗಿಸಿ ಸಮೀಕ್ಷೆ ನಡೆಸಲಾಗುವುದು. 1,75,000 ಸರ್ಕಾರಿ ಶಾಲಾ ಶಿಕ್ಷಕರುಗಳನ್ನು ವಿಶೇಷ ಭತ್ಯೆ ನೀಡಿ ಸಮೀಕ್ಷೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದೇವೆ. ಮಧುಸೂದನ್ ಅವರ ಸಮಿತಿ ಮತ್ತು ಹಿಂದುಳಿದ ವರ್ಗಗಳ ಆಯೋಗ ವೈಜ್ಞಾನಿಕ ಮಾನದಂಡದಲ್ಲಿ ಸಮೀಕ್ಷೆ ನಡೆಸಿ ಡಿಸೆಂಬರ್ ಒಳಗೆ ವರದಿ ನೀಡಲಿದ್ದಾರೆ ಎಂದರು. ಎಲ್ಲಾ ಜಾತಿ – ಧರ್ಮದವರ ದತ್ತಾಂಶ ಅಂಗೈಯಲ್ಲಿದ್ದರೆ ಮಾತ್ರ ಸಾಮಾಜಿಕ ನ್ಯಾಯದ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯ. ಅಮೆರಿಕದಲ್ಲೂ ಕೆರಿಯರ್‌ಗೆ ಅಂತ ಇದೆ. ನಮ್ಮಲ್ಲಿ ಮೀಸಲಾತಿ ಇದೆ. ಹೊಸದಾಗಿ 7 ಕೋಟಿ ಜನರ ಸಾಮಾಜಿಕ, ಶೈಕ್ಷಣಿಕ ಸ್ಥಿತಿ ಗತಿ ಅರಿಯಲು ಈ ಸಮೀಕ್ಷೆ ನಡೆಸಲಾಗುತ್ತಿದೆ. ಆದಷ್ಟೂ ಜಾಗ್ರತೆಯಿಂದ ಸಮೀಕ್ಷೆ ನಡೆಸಿ ವರದಿ ಕೊಡಲು ಸೂಚನೆ ನೀಡಿದ್ದೇವೆ. ಸದ್ಯ 1574 ಜಾತಿಗಳು ಇವೆ. ಒಟ್ಟು 60 ಪ್ರಶ್ನೆಗಳನ್ನು ಸಿದ್ಧಪಡಿಸಲಾಗಿದ್ದು, ಈ ಪ್ರಶ್ನೆಗಳಿಗೆ ಉತ್ತರಿಸಬೇಕು ಎಂದು ಹೇಳಿದರು.

**ಸದ್ಯ 425 ಕೋಟಿ ರೂ. ನೀಡಲಾಗುವುದು :** ಗಣತಿದಾರರಗೆ ವಿಶೇಷ ಭತ್ಯೆ ನೀಡಲಾಗುತ್ತದೆ. ಗಣತಿದಾರರಿಗೆ 20,000 ರೂ.ವರೆಗೆ ಭತ್ಯೆ ನೀಡಲಾಗುತ್ತದೆ. ಬೆಸ್ಕಾಂ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತರಿಗೆ ತಲಾ 2,000 ರೂ. ಗೌರವಧನ ಕೊಡಲಾಗುತ್ತದೆ. 325 ಕೋಟಿಯಷ್ಟು ಭತ್ಯೆ ವೆಚ್ಚ ಬೀಳಲಿದೆ. 423 ಕೋಟಿ ರೂ. ಸದ್ಯಕ್ಕೆ ಕೊಡುವುದಾಗಿ ಹೇಳಿದ್ದೇವೆ. ಇನ್ನೂ ಅಗತ್ಯ ಬಿದ್ದರೆ ಹೆಚ್ಚಿನ ಹಣ ಕೊಡಲಾಗುತ್ತದೆ ಎಂದರು.

**ಆಧಾರ್ ನಂ.ಗೆ ಮೊಬೈಲ್‌ಗೆ ಲಿಂಕ್ ಮಾಡಿ ಸಮೀಕ್ಷೆ:** ಆರ್ ಆರ್ ನಂ. ಮೂಲಕ ಎಸ್ಕಾಂ ಸಿಬ್ಬಂದಿ ಮನೆ ಮನೆಗೆ ಜಿಯೋ ಟ್ಯಾಗ್ ಮಾಡುತ್ತಾರೆ. ಅವರು ಮನೆಗಳಿಗೆ ಯುಹೆಚ್‌ಐಡಿ ನಂ. ಇರುವ ಸ್ಟಿಕ್ಕರ್ ಕೊಡುತ್ತಾರೆ. ಸುಮಾರು 2 ಕೋಟಿ ಮನೆಗಳಿಗೆ ಇದನ್ನು ಅಂಟಿಸಲಾಗುತ್ತದೆ. ಈವರೆಗೆ 1.55 ಕೋಟಿ ಮನೆಗಳಿಗೆ ಈ ಸ್ಟಿಕ್ಕರ್ ಅಂಟಿಸಲಾಗಿದೆ. ಬಳಿಕ ಮನೆ ಮನೆಗೆ ಗಣತಿದಾರರು ಬಂದು ಸರ್ವೆ ಮಾಡುತ್ತಾರೆ. ಅವರು ಆಧಾರ್ ನಂಬರ್ ಹಾಗೂ ಪಡಿತರ ಚೀಟಿ ನಂಬರ್ ಅನ್ನು ಮೊಬೈಲ್‌ಗೆ ಲಿಂಕ್ ಮಾಡುತ್ತಾರೆ.

ಮೊಬೈಲ್ ಇಲ್ಲದೇ ಹೋದರೆ ಅಲ್ಲೂ ಸರ್ವೆ ಮಾಡಲಾಗುವುದು ಎಂದು ತಿಳಿಸಿದರು. ಸರ್ವೆಯನ್ನು ವೈಜ್ಞಾನಿಕವಾಗಿ ಮಾಡಬೇಕು. ಎಲ್ಲರೂ ಇದರಲ್ಲಿ ಪಾಲ್ಗೊಳ್ಳಬೇಕು. 60 ಪ್ರಶ್ನಾವಳಿ ಇದೆ. ಈ ಎಲ್ಲಾ 60 ಪ್ರಶ್ನೆಗಳಿಗೆ ಉತ್ತರ ಕೊಡಬೇಕು. ಇದರಲ್ಲಿ ಯಾರೂ ತಪ್ಪಿಸಿಕೊಳ್ಳಬಾರದು. ಮನೆಯಲ್ಲಿ ಇಲ್ಲವಾದರೆ ಆಯೋಗದ ಸಹಾಯವಾಣಿ 8050770004 ಕರೆ ಮಾಡಿ ಮಾಹಿತಿ ನೀಡಬಹುದು. ರಾಜ್ಯದ ಜನತೆ ಒಬ್ಬರೂ ತಪ್ಪಿಸಿಕೊಳ್ಳದೇ ಕಡ್ಡಾಯವಾಗಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬೇಕು ಎಂದು ಸಿಎಂ ವಿನಂತಿಸಿದರು.

**ಆಶಾ ಕಾರ್ಯಕರ್ತರಿಂದ ಮನೆಗಳಿಗೆ ಪ್ರಶ್ನಾವಳಿ ವಿತರಣೆ :** ಆಶಾ ಕಾರ್ಯಕರ್ತೆಯರು ಮನೆ ಮನೆಗೆ ಹೋಗಿ 60 ಪ್ರಶ್ನೆಗಳ ನಮೂನೆಯನ್ನು ಪ್ರತೀ ಮನೆಗೆ ತಲುಪಿಸುತ್ತಾರೆ. ಆ ಮೂಲಕ ಜನರಿಗೆ ಪ್ರಶ್ನಾವಳಿ ಬಗ್ಗೆ ಮುಂಚೆನೇ ತಿಳಿದುಕೊಳ್ಳಬಹುದಾಗಿದೆ. ಬಳಿಕ ಗಣತಿದಾರರು ಹೋಗಿ ಸಮೀಕ್ಷೆ ನಡೆಸಲಿದ್ದಾರೆ. ಯಾವುದೇ ನ್ಯೂನತೆಗಳು ಇಲ್ಲದಂತೆ, ಹಿಂದಿನ ಸಮೀಕ್ಷೆಗಳಲ್ಲಿ ಎದುರಾದ ಯಾವುದೇ ತಾಂತ್ರಿಕ ಸಮಸ್ಯೆ ಈ ಬಾರಿ ಇಲ್ಲದಂತೆ ಸಿದ್ಧತೆ ಮಾಡಿಕೊಂಡಿದ್ದೇವೆ ಎಂದರು. ಪ್ರತಿ ಗಣತಿದಾರನಿಗೆ 120–150 ಮನೆಗಳಲ್ಲಿ ಸಮೀಕ್ಷೆ ಮಾಡುವ ಟಾರ್ಗೆಟ್ ಕೊಡಲಾಗಿದೆ. ಟೀಚರ್‌ಗಳಿಗೆ ತರಬೇತಿ ನೀಡಲು ಆ್ಯಪ್ ಅಭಿವೃದ್ಧಿ ಮಾಡಲಾಗಿದೆ. ಅವರಿಗೆ ಮಾಹಿತಿ ಕಲೆ ಹಾಕುವ ಬಗ್ಗೆ ತರಬೇತಿ ನೀಡಲಾಗುತ್ತದೆ. ಗಣತಿದಾರರು ಕಡಿಮೆ ಮನೆಗಳನ್ನು ಸಮೀಕ್ಷೆ ಮಾಡಿದರೂ ಗೊತ್ತಾಗಲಿದೆ ಎಂದು ವಿವರಿಸಿದರು.

**ಜನರಲ್ಲಿ ಮನವಿ**

ವಿದ್ಯುತ್ ಸಿಬ್ಬಂದಿ ಅಂಟಿಸುವ ಸ್ಟಿಕ್ಕರ್‌ಗಳನ್ನು ಯಾವುದೇ ಕಾರಣಕ್ಕೂ ಜನರು ತೆಗೆದು ಹಾಕುವುದು, ಮುಚ್ಚುವುದು ಅಥವಾ ನಾಶ ಪಡಿಸುವ ಕೆಲಸಗಳನ್ನು ಮಾಡಬಾರದು. ಒಂದು ವೇಳೆ ಮಾಡಿದ್ದಲ್ಲಿ ಸಮೀಕ್ಷೆ ಕಾರ್ಯಕ್ಕೆ ಅಡಚಣೆ ಉಂಟಾಗಲಿದ್ದು, ಸಮೀಕ್ಷೆ ಕಾರ್ಯದ ಸಂಗ್ರಹಕ್ಕೂ ಅಡಚಣೆ ಆಗಲಿದೆ.

**ಮತಾಂತರ ಅಥವಾ ಜಾತಿ ಗೊಂದಲದ ಬಗ್ಗೆ ಆಯೋಗ ಪರಿಶೀಲನೆ**

ಮತಾಂತರಗೊಂಡವರು ಅಥವಾ ಜಾತಿ ಗೊಂದಲ ಇದ್ದದ್ದನ್ನು ಆಯೋಗ ವಿಶ್ಲೇಷಣೆ ಮಾಡಿ ತೀರ್ಮಾನಿಸುತ್ತಾರೆ ಎಂದು ಇದೇ ವೇಳೆ ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ಕ್ರಿಶ್ಚಿಯನ್ ಕುರುಬ, ಬ್ರಾಹ್ಮಣ ಕ್ರಿಶ್ಚಿಯನ್, ಲಿಂಗಾಯತ ಕ್ರಿಶ್ಚಿಯನ್ ಹೀಗೆ ಮತಾಂತರಗೊಂಡಿರುವವರನ್ನು ಪ್ರತ್ಯೇಕ ಕಾಲಂನಲ್ಲಿ ಗುರುತಿಸಲಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಅವರು ಕ್ರಿಶ್ಚಿಯನ್ ಅಂತಲೇ ಆಗಿರುತ್ತಾರೆ. ಎಲ್ಲಾ ಸೆನ್ಸಸ್‌ನಲ್ಲಿ ಇದನ್ನೇ ಮಾಡುವುದು ಎಂದು ತಿಳಿಸಿದರು. ವೀರಶೈವ ಲಿಂಗಾಯತರು ಧರ್ಮ ಅಂತ ಬರೆಸಲಿ, ವೀರಶೈವ ಧರ್ಮ ಅಂತನೇ ಬರೆಯಲಿ, ವೀರಶೈವ ಅಂತಾನೆ ಅಥವಾ ಲಿಂಗಾಯತನೇ ಅಂತಲಾದರೂ ಅಥವಾ ಬೇರೆ ಏನಾದರೂ ಬರೆದುಕೊಳ್ಳಲಿ. ನಮಗೆ ಬೇಕಾಗಿರುವುದು ಅವರ ಶೈಕ್ಷಣಿಕ, ಸಾಮಾಜಿಕ ಸ್ಥಿತಿಗತಿ ಮಾತ್ರ. ಅವರು ಏನು ಬೇಕಾದರು ಬರೆದುಕೊಳ್ಳಲಿ ಎಂದರು.

**ಎರಡು ಹಂತಗಳಲ್ಲಿ ಜಾತಿ ಸಮೀಕ್ಷೆ ಕಾರ್ಯ**

ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಸರಕಾರ ಈ ಸಮೀಕ್ಷಾ ಕಾರ್ಯಕ್ರಮವನ್ನು ಆರಂಭಿಸಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಈ ಪ್ರಕ್ರಿಯೆ ನಡೆಯುತ್ತಿದೆ. ಮೊದಲ ಹಂತದಲ್ಲಿ ಹೌಸ್ ಲಿಸ್ಟಿಂಗ್ ಎಕ್ಸರ್ ಸೈಸ್ ಮಾಡಲಾಗುತ್ತಿದೆ. ಪ್ರತಿ ಮನೆಯನ್ನು ಪಟ್ಟಿ ಮಾಡುವ ಕೆಲಸ.

## ಹಾಸನದಲ್ಲಿ ಘೋರ ದುರಂತ 10 ಮಂದಿ ಸಾವು

• ಉದಯವಾಹಿನಿ, ಹಾಸನ

ಗಣಪತಿ ಮೂರ್ತಿ ವಿಸರ್ಜನಾ ಮೆರವಣಿಗೆ ವೇಳೆ ಹಾಸನದಲ್ಲಿ ಭೀಕರ ದುರಂತ ಸಂಭವಿಸಿದೆ. ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ಹೋಗುತ್ತಿದ್ದ ಜನರ ಮೇಲೆ ಟ್ರಕ್ ಹರಿದಿದ್ದು, ಸಾವಿನ ಸಂಖ್ಯೆ 10ಕ್ಕೆ ಏರಿಕೆಯಾಗಿದೆ. ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಇನ್ನು ನಾಲ್ವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಇನ್ನು ಗಾಯಗೊಂಡಿರುವವರಿಗೆ ಚಿಕಿತ್ಸೆ ಮುಂದುವರೆದಿದ್ದು, ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆಗಳಿವೆ. ಹಾಸನ ತಾಲ್ಲೂಕಿನ ಮೊಸಳೆಹೊಸಳ್ಳಿ ಗ್ರಾಮದಲ್ಲಿ ಈ ದುರ್ಘಟನೆ ನಡೆದಿದ್ದು, ಗ್ರಾಮದಲ್ಲಿ ಜನರ ಆಕ್ರಂದನ ಮುಗಿಲು ಮುಟ್ಟಿದೆ. ರಸ್ತೆಯ ಒಂದು ಬದಿಯಿಂದ ಏಕಾಏಕಿ ಡಿವೈಡರ್ ಗುದ್ದಿ ಯಮನಂತೆ ಬಂದ ಟ್ರಕ್, ನೇರವಾಗಿ ಸಾವಿರಾರು ಜನರಿದ್ದ ಮೆರವಣಿಗೆಗೆ ನುಗ್ಗಿದೆ.

ಪರಿಣಾಮ ಸ್ಥಳದಲ್ಲೇ ನಾಲ್ವರು ಮೃತಪಟ್ಟಿದ್ದು, 20ಕ್ಕೂ ಹೆಚ್ಚು ಜನರಿಗೆ ಗಂಭೀರ ಗಾಯಗಳಾಗಿವೆ. ಇನ್ನು ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಮಾಜಿ ಸಚಿವ ಎಚ್ಡಿ ರೇವಣ್ಣ, ಪರಿಷತ್ ಸದಸ್ಯ ಸೂರಜ್ ರೇವಣ್ಣ, ಸಂಸದ ಶ್ರೇಯಸ್ ಪಟೇಲ್ ಭೇಟಿ ನೀಡಿದ್ದು, ಈ ವೇಳೆ ಪೊಲೀಸ್ ವೈಫಲ್ಯದಿಂದ ಅವಘಡ ಸಂಭವಿಸಿದೆ ಎಂದು ರೇವಣ್ಣ ಕಿಡಿಕಾರಿದರು. ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸಹ ದುರಂತ ನಡೆದ ಸ್ಥಳಕ್ಕೆ ದೌಡಾಯಿಸುತ್ತಿದ್ದಾರೆ.

**ಕೇಂದ್ರ ಸಚಿವ ಕುಮಾರಸ್ವಾಮಿ ಟ್ವೀಟ್:** ಈ ದುರಂತದ ಬಗ್ಗೆ ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಟ್ವೀಟ್ ಮಾಡಿದ್ದು, ಹಾಸನ ತಾಲ್ಲೂಕಿನ ಮೊಸಳೆಹೊಸಳ್ಳಿಯಲ್ಲಿ ಗಣಪತಿ ವಿಸರ್ಜನಾ ಮೆರವಣಿಗೆ ವೇಳೆ ಭೀಕರ ಅಪಘಾತ ಸಂಭವಿಸಿ ಹಲವರು ಜೀವ ಕಳೆದುಕೊಂಡು, 20ಕ್ಕೂ ಹೆಚ್ಚು ಜನ ಗಂಭೀರವಾಗಿ ಗಾಯಗೊಂಡಿರುವ ಸುದ್ದಿ ಕೇಳಿ ತೀವ್ರ ಆಘಾತ ಉಂಟಾಯಿತು. ಗಣಪತಿ ಮೆರವಣಿಗೆ ಹೋಗುತ್ತಿದ್ದವರ ಮೇಲೆ ಟ್ರಕ್ ಹರಿದು ಭಕ್ತರ ಸಾವುಂಟಾಗಿರುವುದು ನನಗೆ ಅತ್ಯಂತ ದುಃಖ ಉಂಟು ಮಾಡಿದೆ.

ಇದು ಅತೀ ದುರ್ದೈವದ ಘಟನೆಯಾಗಿದ್ದು, ಮೃತರ ಆತ್ಮಕ್ಕೆ ಭಗವಂತ ಸದ್ಗತಿ ಕರುಣಿಸಲಿ ಹಾಗೂ ದುಃಖತಪ್ತ ಕುಟುಂಬಗಳಿಗೆ ದುಃಖ ಭರಿಸುವ ಶಕ್ತಿಯನ್ನು ಕರುಣಿಸಲಿ. ಎಲ್ಲಾ ಗಾಯಾಳುಗಳು ಆದಷ್ಟು ಬೇಗ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ. ರಾಜ್ಯ ಸರಕಾರ ಗಾಯಾಳುಗಳಿಗೆ ಉತ್ತಮ, ಉಚಿತ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಬೇಕೆಂದಿದ್ದಾರೆ.

**ತಲಾ 5 ಲಕ್ಷ ರೂ. ಘೋಷಣೆ**

ದುರಂತದಲ್ಲಿ ಮೃತಪಟ್ಟ ಕುಟುಂಬಗಳಿಗೆ ತಲಾ 5 ಲಕ್ಷ ರೂ. ಪರಿಹಾರವನ್ನು ರಾಜ್ಯ ಸರ್ಕಾರ ಘೋಷಣೆ ಮಾಡಿದೆ. ಈ ಘಟನೆ ಟ್ವೀಟ್ ಮಾಡಿರುವ ಸಿದ್ದರಾಮಯ್ಯ, ಹಾಸನದಲ್ಲಿ ಗಣೇಶ ವಿಸರ್ಜನೆಗಾಗಿ ಮೆರವಣಿಗೆಯಲ್ಲಿ ತೆರಳುತ್ತಿದ್ದವರ ಮೇಲೆ ಲಾರಿ ಹರಿದು ಹಲವರು ಸಾವಿಗೀಡಾಗಿ, ಸುಮಾರು 20ಕ್ಕೂ ಹೆಚ್ಚು ಮಂದಿ ಗಂಭೀರ ಗಾಯಗೊಂಡ ಸುದ್ದಿ ತಿಳಿದು ಅತೀವ ದುಃಖವಾಯಿತು. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಗಾಯಾಳುಗಳು ಆದಷ್ಟು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಕುಟುಂಬಗಳಿಗೆ ಸರ್ಕಾರದ ವತಿಯಿಂದ ತಲಾ ರೂ.5 ಲಕ್ಷ ಪರಿಹಾರ ನೀಡಲಾಗುವುದು. ಘಟನೆಯಲ್ಲಿ ಗಾಯಗೊಂಡವರ ಚಿಕಿತ್ಸೆಯ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದು ತಿಳಿಸಿದ್ದಾರೆ.

## ಐಎಎಸ್ ಅಧಿಕಾರಿಗಳ ವರ್ಗಾವಣೆ ಆಡಳಿತ ಸುಧಾರಣಾ ಇಲಾಖೆ ಆದೇಶ

• ಉದಯವಾಹಿನಿ, ಬೆಂಗಳೂರು

ಐಎಎಸ್ ಅಧಿಕಾರಿ ತುಳಸಿ ಮದ್ದಿನೇನಿ ಅವರನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶಿಸಿದೆ. ತುಳಸಿ ಅವರಿಗೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ಅಧ್ಯಕ್ಷರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆಯನ್ನೂ ನೀಡಲಾಗಿದೆ. ಹುದ್ದೆ ನಿರೀಕ್ಷಣೆಯಲ್ಲಿದ್ದ ಪ್ರಶಾಂತ್ ಕುಮಾರ್ ಮಿಶ್ರಾ ಅವರಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆ ನೀಡಿ ಆದೇಶ ಹೊರಡಿಸಿದೆ. ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆ ಕಾರ್ಯದರ್ಶಿ ರಮಣದೀಪ್ ಚೌಧರಿ ಅವರಿಗೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಹೊಣೆ ನೀಡಲಾಗಿದೆ.

## ಕರ್ನಾಟಕದಲ್ಲಿ ಹೊಸದಾಗಿ 3500 ನ್ಯಾಯ ಬೆಲೆ ಅಂಗಡಿಗಳ ಆರಂಭ

### ಪ. ಜಾತಿ ಪಂಗಡದ ನಿರುದ್ಯೋಗ ವಿದ್ಯಾವಂತ ಯುವಕ, ಯುವತಿಯರಿಗೆ ಮೀಸಲು

• ಉದಯವಾಹಿನಿ, ಬೆಂಗಳೂರು

**ರಾಜ್ಯದಲ್ಲಿ ಉತ್ತಮ ಆಡಳಿತ**

ರಾಜ್ಯದಲ್ಲಿ ಹೊಸದಾಗಿ 3500 ನ್ಯಾಯ ಬೆಲೆ ಅಂಗಡಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯುವಕ ಯುವತಿಯರಿಗೆ ನೀಡಲು ರಾಜ್ಯ ಸರಕಾರ ತೀರ್ಮಾನಿಸಿದೆ ಎಂದು ಆಹಾರ ಮತ್ತು ನಾಗರೀಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗ ವಿದ್ಯಾವಂತರಿಗೆ 3500 ನ್ಯಾಯಬೆಲೆ ಅಂಗಡಿಗಳನ್ನು ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗಿದೆ. ಇದರಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದ ನಿರುದ್ಯೋಗ ವಿದ್ಯಾವಂತರಿಗೆ ಸ್ವ ಉದ್ಯೋಗ ನೀಡಿದಂತಾಗುತ್ತದೆ ಎಂದರು.

ಈಗಾಗಲೆ ರಾಜ್ಯದಲ್ಲಿ 20 ಸಾವಿರ ನ್ಯಾಯ ಬೆಲೆ ಅಂಗಡಿಗಳಿದ್ದು ಇವುಗಳಲ್ಲಿ 1500 ರಷ್ಟು ನ್ಯಾಯ ಬೆಲೆ ಅಂಗಡಿಗಳು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ನೀಡಿದ್ದು ಇವುಗಳ ಜತೆಗೆ ಹೆಚ್ಚುವರಿಯಾಗಿ 3500 ನ್ಯಾಯ ಬೆಲೆ ಅಂಗಡಿಗಳನ್ನು ಆರಂಭಿಸಲಾಗುವುದು ಎಂದು ತಿಳಿಸಿದರು. ಈಗಾಗಲೆ ಈ ಬಗ್ಗೆ ನೀತಿ ನಿಯಮಗಳನ್ನು ರೂಪಿಸುವ ಕಾರ್ಯ ಕಾರ್ಯಗತವಾಗಿದ್ದು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯಿತಿ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಉಪ ನಿರ್ದೇಶಕರ ತಂಡ ಈ ಬಗ್ಗೆ ರೂಪು ರೇಷೆ ತಯಾರಿಸಲಿದ್ದು ಅದಕ್ಕೆ ಸರಕಾರ ಅನುಮೋದನೆ ನೀಡಲಿದೆ ಎಂದು ವಿವರಿಸಿದರು. ಈ ಎಲ್ಲಾ ಪ್ರಕ್ರಿಯೆಗಳ ಮುಂದಿನ ಒಂದೂವರೆ ಎರಡು ತಿಂಗಳಲ್ಲಿಮುಗಿಯಲಿದೆ. ಇದರಿಂದ ಸಮಾಜದಲ್ಲಿಎಲ್ಲರಿಗೂ ಸಮಾನ ಅವಕಾಶಗಳು ಸಿಗಲಿ ಎನ್ನುವುದಷ್ಟೆ ಸರಕಾರದ ಸದುದ್ದೇಶ ಎಂದರು.

**ಎಲ್ಲವೂ ಸರಿಹೋಗಲಿದೆ:** ರಾಜ್ಯ ಸೇರಿದಂತೆ ಜಿಲ್ಲೆ ಹಾಗೂ ತಾಲ್ಲೂಕಿನಲ್ಲೂ ಉತ್ತಮ ಆಡಳಿತ ನಡೆಯುತ್ತಿದೆ. ಅಭಿವೃದ್ಧಿ ಕಾರ್ಯಗಳು ಕೂಡ ಸಾಗುತ್ತಿವೆ. ಸಣ್ಣ ಪುಟ್ಟ ಸಮಸ್ಯೆಗಳು ಸಹಜ, ಅವೆಲ್ಲವನ್ನೂ ಹಂತ ಹಂತವಾಗಿ ನಿವಾರಿಸಲಾಗುವುದು. ತಾಲ್ಲೂಕಿನಲ್ಲಿ ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗಲು ಮುಖಂಡ ಡಾಲ್ಫಿನ್ ಸ್ಕೂಲ್ ನಾಗರಾಜ್, ಟಿ.ಕೆ.ನಟರಾಜ್ ಅವರಿಗೆ ಜವಾಬ್ದಾರಿ ವಹಿಸಿದ್ದೇವೆ ಎಂದರು.

ಇನ್ನು ನಾಮ ನಿರ್ದೇಶನಗಳ ನೇಮಕಾತಿಯಲ್ಲಿ ಆಗುತ್ತಿರುವ ಗೊಂದಲ, ಬಣ ರಾಜಕೀಯದ ಬಗ್ಗೆ ಪ್ರಶ್ನಿಸಿದಾಗ ಅದೆಲ್ಲವನ್ನೂ ಜಿಲ್ಲಾಕಾಂಗ್ರೆಸ್ ಅಧ್ಯಕ್ಷರು ನೋಡಿಕೊಳ್ಳಬೇಕು, ನೋಡಿಕೊಳ್ಳುತ್ತಾರೆ, ನಾವು ಅದರಲ್ಲಿ ತಲೆ ಹಾಕುವುದಿಲ್ಲ ಎಂದಷ್ಟೆ ಉತ್ತರಿಸಿದರು. ಸ್ಥಳೀಯ ಮುಖಂಡರೊಂದಿಗೆ ಕೆಲ ಕಾಲ ರಾಜಕೀಯ ಬೆಳವಣಿಗೆ, ಅಭಿವೃದ್ಧಿ, ಸಮಸ್ಯೆಗಳ ಬಗ್ಗೆ ಚರ್ಚಿಸಿದರು. ಮುಖಂಡ ಚಿಕ್ಕಮುನಿಯಪ್ಪ, ಕದರಿಪ್ಪ, ಕೃಷ್ಣಪ್ಪ, ರಾಮಚಂದ್ರಪ್ಪ, ಎಸ್.ಎಂ.ರಮೇಶ್, ಕೆ.ನಾರಾಯಣಸ್ವಾಮಿ, ದ್ಯಾವಪ್ಪ, ನರಸಿಂಹಮೂರ್ತಿ ಇನ್ನಿತರರು ಹಾಜರಿದ್ದರು.



## ಸೀಟು ಬ್ಲಾಕಿಂಗ್ ರಹಸ್ಯ ಬಿಚ್ಚಿಟ್ಟ ಕೆಇಎ ನಿರ್ದೇಶಕ ಪ್ರಸನ್ನ

• ಉದಯವಾಹಿನಿ, ಬೆಂಗಳೂರು

ಇಷ್ಟದ ಕೋರ್ಸ್ ಮತ್ತು ಕಾಲೇಜು ನೀಡುತ್ತಿಲ್ಲವೆಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ(ಕೆಇಎ) ಕಚೇರಿ ಎದುರು ಪೋಷಕರು, ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ ಬಗ್ಗೆ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್. ಪ್ರಸನ್ನ ಮಾಹಿತಿ ನೀಡಿದ್ದಾರೆ. ಕೌನ್ಸೆಲಿಂಗ್‌ನಲ್ಲಿ 3 ಲಕ್ಷಕ್ಕೂ ಅತ್ಯಧಿಕ ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಇದುವರೆಗೆ 1.5 ಲಕ್ಷಕ್ಕೂ ಹೆಚ್ಚು ಸೀಟುಗಳನ್ನು ಹಂಚಿಕೆ ಮಾಡಿದ್ದೇವೆ. ಪ್ರಾದಿಕಾರದ ಕಚೇರಿ ಮುಂದೆ ಗೊಂದಲ ಸೃಷ್ಟಿ ಮಾಡುತ್ತಿರುವುದು ಕೇವಲ 200 ಜನ. ಕಳೆದ ಶೈಕ್ಷಣಿಕ ವರ್ಷದಲ್ಲಿ ಸೀಟು ಬ್ಲಾಕಿಂಗ್ ಹಗರಣ ಬೆಳಕಿಗೆ ಬಂದಿತ್ತು. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿಯೂ ಅದೇ ರೀತಿ ಮಾಡಲು ಕುತಂತ್ರ ನಡೆಸಿದ್ದರು. 12ನೇ ಸುತ್ತು ಪೂರ್ಣಗೊಳಿಸಿ ದೂರನೇ ಸುತ್ತಿನಲ್ಲಿ ಸೀಟು ಬೇಡವೆಂದರೆ ಹೇಗೆ ಇದನ್ನೇ ಸೀಟ್ ಬ್ಲಾಕಿಂಗ್ ಎಂದು ಕರೆಯಬಹುದು ಎಂದು ತಿಳಿಸಿದ್ದಾರೆ. ಕಳೆದ ವರ್ಷ ಹೊರಗೆ ನಿಂತು ಹಲವರು ಸೀಟು ಬ್ಲಾಕಿಂಗ್ ಮಾಡಿದ್ದರು. ಕೌನ್ಸೆಲಿಂಗ್‌ನಲ್ಲಿ ಭಾಗಿಯಾಗಿದ್ದ ಮಕ್ಕಳು, ಪೋಷಕರಿಗೆ ನಿಯಮ ತಿಳಿದಿದೆ. ಕೌನ್ಸೆಲಿಂಗ್‌ನ ಒಂದು, ಎರಡನೇ ಸುತ್ತಿನಲ್ಲಿ ಸೀಟು ಬೇಡವೆಂದು ಹೇಳಲು ಅವಕಾಶವಿತ್ತು. ಆದರೆ ದೂರನೇ ಸುತ್ತಿನಲ್ಲಿ ಆಯ್ಕೆ ಮಾಡಿಕೊಂಡ ಕಾಲೇಜು ಬೇಡವೆಂದರೆ ತಪ್ಪು. ಇಷ್ಟವಿಲ್ಲವೆಂದು ಮೊದಲೇ ಹೇಳಿದ್ದರೆ ಮತ್ತೊಬ್ಬರಿಗೆ ಅನುಕೂಲವಾಗುತ್ತಿತ್ತು. ಅವರಿಗೆ ಅನ್ಯಾಯ ಮಾಡಿ ಈಗ ಕೊಟ್ಟಿರುವ ಸೀಟು ಬೇಡವೆಂದರೆ ಏನರ್ಥ ಎಂದು ಪ್ರಶ್ನಿಸಿದ್ದಾರೆ.

## ಧರ್ಮಸ್ಥಳ ಪ್ರಕರಣ: ಮಹೇಶ್ ಶೆಟ್ಟಿ ತಿಮರೋಡಿ ದೂರು ಸ್ವೀಕಾರದ ಬಗ್ಗೆ ಎಸ್‌ಐಟಿ ನಿರ್ಧಾರ

### ಅನೇಕ ವಿಚಾರಗಳಲ್ಲಿ ಸಂಪೂರ್ಣ ಮಾಹಿತಿ ಬರುವವರೆಗೂ ಎಸ್‌ಐಟಿಯವರು ನಮಗೂ ಹೇಳುವುದಿಲ್ಲ

• ಉದಯವಾಹಿನಿ, ಬೆಂಗಳೂರು



ಧರ್ಮಸ್ಥಳದ ಮೂರು ಲಾಡ್ಜ್‌ಗಳಲ್ಲಿ ನಾಲ್ಕು ಅನುಮಾನಸ್ಪದ ಸಾವುಗಳಾಗಿವೆ ಎಂದು ಮಹೇಶ್ ಶೆಟ್ಟಿ ತಿಮರೋಡಿ ನೀಡಿರುವ ದೂರನ್ನು ತೆಗೆದುಕೊಳ್ಳಬೇಕೊ, ಬೇಡವೇ ಎಂಬುದನ್ನು ಎಸ್‌ಐಟಿಯವರು ಪರಿಶೀಲಿಸುತ್ತಾರೆ. ಪ್ರಕರಣ ಬೇರೆಬೇರೆ ದಿಕ್ಕಿಗೆ ಹೋಗುವಂತ ಪ್ರಯತ್ನ ನಡೆದರೆ, ಎಸ್‌ಐಟಿಯವರು ಬೇರೆ ತರ ತನಿಖೆ ಮಾಡುತ್ತಾರೆ ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ್ ಹೇಳಿದರು.

ಯಾರೋ ಕೊಟ್ಟ ಹೇಳಿಕೆ ಮೇಲೆ ನಾವು ತೀರ್ಮಾನ ಮಾಡುವುದಿಲ್ಲ. ಎಸ್‌ಐಟಿ ಮುಂದೆ ಏನು ದೂರು ಕೊಟ್ಟಿರುತ್ತಾರೆ. ಅದಕ್ಕೆ ಸಾಕ್ಷ್ಯ ಕೊಟ್ಟಿರುತ್ತಾರೆ.

ಅದೆಲ್ಲವನ್ನು ನೋಡಿ ಎಸ್‌ಐಟಿಯವರು ತೀರ್ಮಾನ ಮಾಡುತ್ತಾರೆ. ಸರ್ಕಾರದ ಅನುಮತಿ ಬೇಕೆಂದರೆ ಕೇಳುತ್ತಾರೆ. ಸದ್ಯಕ್ಕೆ ಯಾವುದೇ ಅನುಮತಿ ಕೇಳುವುದಕ್ಕೆ ಬಂದಿಲ್ಲ ಎಂದರು. ಪ್ರತಿನಿತ್ಯ ನಾವು ಏನು ಮಾಡುತ್ತಿದ್ದೇವೆ ಎಂದು ಎಸ್‌ಐಟಿಯವರು, ಮಾಧ್ಯಮಕ್ಕಾಗಲಿ ಅಥವಾ ಸಾರ್ವಜನಿಕರಿಗಾಗಲಿ ಹೇಳುವುದಿಲ್ಲ. ಅನೇಕ ವಿಚಾರಗಳನ್ನು ಸಾರ್ವಜನಿಕವಾಗಿ ಹಂಚಿಕೊಳ್ಳುವುದಿಲ್ಲ. ಇದರಿಂದ ಎಸ್‌ಐಟಿ ವೇಗ ಕಳೆದುಕೊಂಡು ಬಿಟ್ಟಿದೆ, ತನಿಖೆ ನಡೆಯುತ್ತಿಲ್ಲ ಅಂದುಕೊಳ್ಳಬಾರದು.

ಅನೇಕ ವಿಚಾರಗಳಲ್ಲಿ ಸಂಪೂರ್ಣ ಮಾಹಿತಿ ಬರುವವರೆಗೂ ಎಸ್‌ಐಟಿಯವರು ನಮಗೂ ಸಹ ಹೇಳುವುದಿಲ್ಲ ಎಂದರು.

ಧರ್ಮಸ್ಥಳ ಆರೋಪ ಪ್ರಕರಣದಲ್ಲಿ ಚಿನ್ನಯ್ಯನ ಬೆಂಬಲವಾಗಿ ನಿಂತವರನ್ನು ಬಂಧಿಸಿಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಯಾರನ್ನು ಬಂಧಿಸಬೇಕು, ಯಾವಾಗ ಬಂಧಿಸಬೇಕು ಎಂಬುದನ್ನು ನಾವು ಎಸ್‌ಐಟಿಯವರಿಗೆ ಹೇಳಕ್ಕಾಗುತ್ತದೆಯೇ ಮಾಧ್ಯಮದವರು ಹೇಳಿದನ್ನು ಗಣನೆಗೆ ತೆಗೆದುಕೊಂಡು ಕೂಡಲೇ ಬಂಧಿಸಲು ಆಗುವುದಿಲ್ಲ. ಅವರಿಗೆ ಏನು ಮಾಹಿತಿ ಇದೆ, ಬೇಕಾದ ಅಗತ್ಯ ಪುರಾವೆ, ಸಾಕ್ಷ್ಯ ಸಿಗಬೇಕಲ್ಲ. ಅದನ್ನು ನೋಡಿಕೊಂಡು ಆನಂತರ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳಿದರು.



**ಪ್ರಚೋದನಾಕಾರಿಯಾಗಿ ಭಾಷಣ ಸರಿಯಲ್ಲ:** ಯಾರೇ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿದ್ದರೆ ಅಂಥವರ ವಿರುದ್ಧ ಪೊಲೀಸರು ಕ್ರಮ ತೆಗೆದುಕೊಳ್ಳುತ್ತಾರೆ. ಅಲ್ಲಿಗೆ ಪ್ರಚೋದನಾಕಾರಿಯಾಗಿ ಭಾಷಣ ಮಾಡುವುದು ಸರಿಯಲ್ಲ ಎಂದು ಡಾ. ಜಿ.ಪರಮೇಶ್ವರ ಅವರು ಹೇಳಿದರು. ಮದ್ದೂರು ಘಟನೆಯ ವಿಚಾರದಲ್ಲಿ ನಾವು ಮೊದಲಿಂದ ಹೇಳುತ್ತಿದ್ದೇವೆ. ಇದರಲ್ಲಿ ರಾಜಕೀಯ ಮಾಡಬೇಡಿ. ಪೊಲೀಸರಿಗೆ ಬಿಡಿ, ಕಲ್ಲು ಹೊಡೆದವರನ್ನು ಹಿಡಿದು, ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ. ಮುಸಲ್ಮಾನ ಅಗಿರಲಿ, ಹಿಂದು ಆಗಿರಲಿ, ಮತ್ತೊಬ್ಬ ಆಗಿರಲಿ, ಯಾರೇ ಕಾನೂನು ವಿರುದ್ಧವಾಗಿ ನಡೆದುಕೊಂಡಿದ್ದರೆ ಕ್ರಮ ತೆಗೆದುಕೊಳ್ಳುತ್ತಾರೆ. ಈ ವಿಚಾರವನ್ನು ಪೊಲೀಸರಿಗೆ ಬಿಟ್ಟುಬಿಡಬೇಕು. ಅದೆಲ್ಲ ಬಿಟ್ಟು, ಇವರು ಹೋಗಿ ಪ್ರಚೋದನಾಕಾರಿಯಾಗಿ ಭಾಷಣ ಮಾಡಿ, ಮತ್ತೇ ಜನರನ್ನೆಲ್ಲ ಎಬ್ಬಿಸುವುದು ಸರಿಯಲ್ಲ ಎಂದರು.

ವೀರಾವೇಷದಲ್ಲಿ ಮಾತಾಡಿ, ಬಳಸಬಾರದ ಪದಗಳನ್ನು ಬಳಸುವುದರಿಂದ ಏನು ಸಾಧನೆ ಮಾಡುತ್ತಾರೋ ಒಂದಂತು ನಿಜ ರಾಜಕೀಯ ಕಾರಣಕ್ಕಾಗಿ ಇದೆಲ್ಲ ಮಾಡುತ್ತಿದ್ದಾರೆ ಎಂಬುದು ಸ್ಪಷ್ಟವಾಗಿ ಕಾಣುತ್ತಿದೆ. ಎಎಸ್‌ಪಿ ವರ್ಗಾವಣೆ ಮಾಡಿರುವ ಕುರಿತು ಮಾತನಾಡಿ, ಆಂತರಿಕವಾಗಿ ಎಲ್ಲಿ ಲೋಪ ಕಂಡಿದೆ, ಅದಕ್ಕೆ ಕ್ರಮ ತೆಗೆದುಕೊಳ್ಳಬೇಕಲ್ಲವೇ ಒಬ್ಬ ಇನ್‌ಸ್ಪೆಕ್ಟರ್ ಆಗಿರಬಹುದು, ಸಬ್ ಇನ್‌ಸ್ಪೆಕ್ಟರ್ ಆಗಿರಬಹುದು, ಅವರ ಕರ್ತವ್ಯ ಲೋಪ ಕಂಡು ಬಂದಾಗ ಇಲಾಖೆಯಿಂದ ಕ್ರಮ ತೆಗೆದುಕೊಳ್ಳುತ್ತಾರೆ ಎಂದರು.

**ವಯೋಮಿತಿ ಹೆಚ್ಚಳಕ್ಕೆ ಚರ್ಚೆ**

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿಯ ವಯೋಮಿತಿ ಸಡಿಲಿಕೆ ಬಗ್ಗೆ ಚರ್ಚೆ ಮಾಡಿದ್ದೇವೆ. ಬೇರೆಬೇರೆ ರಾಜ್ಯದಲ್ಲಿ ಏನಿದೆ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಸುಮಾರು ವರ್ಷಗಳಿಂದ ಕಾನಸ್ಟೇಬಲ್ ಹುದ್ದೆಗಳಿಗೆ ನೇಮಕಾತಿ ನಡೆದಿಲ್ಲ. ಎರಡು, ಮೂರು ವರ್ಷ ವಯೋಮಿತಿ ಹೆಚ್ಚಳ ಮಾಡಿಕೊಡುವಂತೆ ಬೇಡಿಕೆ ಇಟ್ಟಿದ್ದಾರೆ. ಅನೇಕ ಸಂದರ್ಭಗಳಲ್ಲಿ ನನ್ನನ್ನು ಭೇಟಿ ಮಾಡಿದ್ದಾರೆ. ಈ ಬಗ್ಗೆ ಡಿಜಿಯವರಿಗೆ ಸೂಚನೆ ಕೊಟ್ಟಿದ್ದೇನೆ ಎಂದರು. ಬೇರೆ ರಾಜ್ಯದಲ್ಲಿ ವಯೋಮಿತಿ ಎಷ್ಟು ವರ್ಷ ಇದೆ. ಪರಿಶೀಲನೆ ಮಾಡಿ, ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸುವಂತೆ ಸೂಚನೆ ಕೊಟ್ಟಿದ್ದೇನೆ. ಪ್ರಸ್ತಾವನೆ ಬಂದ ಬಳಿಕ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಪೊಲೀಸ್ ದಂಪತಿ ಅಂತರ್ ಜಿಲ್ಲಾ ವರ್ಗಾವಣೆ ಸರ್ಕಾರದ ಆದೇಶದಂತೆ ನಡೆಯುತ್ತಿದೆ ಎಂದು ತಿಳಿಸಿದರು

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹11,128/Gram24ct ₹10,200/Gram22ct | ಬೆಳ್ಳಿ: ₹132.00/Gram

# ಹೇಮೆ ಕಿಚ್ಚಿನ ನೆಲೆಗೆ ಡಿಸಿಎಂ ಡಿಕೆಶಿ ಭೇಟಿ

## ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಕಾಮಗಾರಿಗೆ ತುಮಕೂರಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ

• **ಉದಯವಾಹಿನಿ, ತುಮಕೂರು**

ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಕಿಚ್ಚು ಹತ್ತಿರುವ ನೆಲ ಗುಬ್ಬಿ ತಾಲ್ಲೂಕಿನ ಸುಂಕಾಪುರಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೆ.12 ರಂದು ಶುಕ್ರವಾರ ಭೇಟಿ ನೀಡಲಿದ್ದು ವಿವಾದಿತ ಎಕ್ಸ್ ಪ್ರೆಸ್ ಕೆನಾಲ್ ಕಾಮಗಾರಿ ಪರಿವೀಕ್ಷಣೆ ಮಾಡುವರು.

ಹೇಮಾವತಿ ಕೆನಾಲ್‌ನ 70 ನೇ ಕಿ.ಮೀ. ಸುಂಕಾಪುರ ಬಳಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಕಾಮಗಾರಿಗೆ ತುಮಕೂರಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಜಿಲ್ಲಾ ಬಂದ್ ಸೇರಿದಂತೆ ನಾನಾ ಮಾದರಿಯಲ್ಲಿ ಪ್ರತಿಭಟನೆಗಳೂ ನಡೆದಿವೆ. ವಿರೋಧ ಧಿಕ್ಕರಿಸಿ ಸರಕಾರ ಹಠಕ್ಕೆ ಬಿದ್ದು ಕಾಮಗಾರಿ ನಡೆಸಲು ಮುಂದಾಗಿದ್ದರ ಪರಿಣಾಮ ಮೇ 31ರಂದು ರೈತರು ಸುಂಕಾಪುರದಲ್ಲಿ ನಿಷೇಧಾಜ್ಞೆ ಮೀರಿ ಕಾಮಗಾರಿ ನಡೆಯುತ್ತಿದ್ದ ಸ್ಥಳಕ್ಕೆ ಪೊಲೀಸ್ ಭದ್ರತೆಗೇ ಸಡ್ಡು ಹೊಡೆದು ನುಗ್ಗಿದ್ದರು. ರಸ್ತೆ ತಡೆದು, ಟೈಯರ್ ಸುಟ್ಟು ಪ್ರತಿಭಟನೆ ನಡೆಸಿದ್ದರು. ನೂರಾರು ಪ್ರತಿಭಟನಾಕಾರರ ಮೇಲೆ ಎಫ್‌ಐಆರ್ ಆಗಿತ್ತು. ಪ್ರತಿಭಟನೆ ವಿಷಯ ವಿಧಾನಸೌಧದಲ್ಲೂ ಸದ್ದು ಮಾಡಿತ್ತು.

**ಸಿಎಂ ನೇತೃತ್ವದ ಸಭೆಗೆ ಆಗ್ರಹ:** ಎಕ್ಸ್‌ಪ್ರೆಸ್ ಕೆನಾಲ್ ಯೋಜನೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಕನಸಿನ ಯೋಜನೆ. ಕುಣಿಗಲ್ ಮೂಲಕ ಮಾಗಡಿ ಶ್ರೀರಂಗ ಏತನೀರಾವರಿಗೆ ಹೇಮಾವತಿ



ನೀರನ್ನು ತೆಗೆದುಕೊಂಡು ಹೋಗಲು ಯೋಜಿಸಿರುವುದು ಗುಟ್ಟೇನಲ್ಲ.

ಎಕ್ಸ್‌ಪ್ರೆಸ್ ಕೆನಾಲ್ ಮೂಲಕ ನೀರು ಹರಿದರೆ ತುಮಕೂರು, ತುಮಕೂರು ಗ್ರಾಮಾಂತರ, ಗುಬ್ಬಿ, ತುರುವೇಕೆರೆ ತಾಲ್ಲೂಕುಗಳಿಗೆ ಹೇಮಾವತಿ ನೀರಿನ ಕೊರತೆಯಾಗುತ್ತದೆ. ಜಿಲ್ಲೆಗೆ ಅನ್ಯಾಯ ಮಾಡಿ ಬೆಂಗಳೂರು ದಕ್ಷಿಣ ಜಿಲ್ಲೆಗೆ ಹೇಮಾವತಿ ನೀರು ಕೊಡಲು ಬಿಡುವುದಿಲ್ಲ. ಕುಣಿಗಲ್‌ಗೆ ನೀರು ತೆಗೆದುಕೊಂಡು ಹೋಗಲು ಅಡ್ಡಿಯಿಲ್ಲಎಂಬುದು ಎಕ್ಸ್‌ಪ್ರೆಸ್ ಕೆನಾಲ್ ವಿರೋಧಿ ಹೋರಾಟಗಾರರ ಸ್ಪಷ್ಟ ನಿಲುವು.

ಡಿ.ಕೆ.ಶಿವಕುಮಾರ್ ಮಾಗಡಿಗೆ ಹೇಮಾವತಿ ನೀರು ಕೊಂಡೊಯ್ಯಲೆಂದೇ ಮೂಲ ಯೋಜನೆಯನ್ನೇ ತಿರುಚಿದ್ದಾರೆನ್ನುತ್ತಿರುವ ಹೋರಾಟಗಾರರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲೇ ಸಭೆ ನಡೆಯಬೇಕೆಂದು ಆಗ್ರಹಿಸಿದ್ದಾರೆ.


### ಹೋರಾಟಗಾರರನ್ನು ಹೊರಗಿಟ್ಟು ಸಭೆ

**ಪ್ರತಿಭಟನೆಯಿಂದ ಎಚ್ಚೆತ್ತ ಸರಕಾರ ಕಾಮಗಾರಿ ಸ್ಥಗಿತಗೊಳಿಸಿತ್ತು. ಬಿಜೆಪಿ, ಜೆಡಿಎಸ್ ಶಾಸಕರು, ರೈತರು ಸೇರಿದಂತೆ ಎಕ್ಸ್‌ಪ್ರೆಸ್ ಕೆನಾಲ್ ವಿರೋಧಿ ಹೋರಾಟಗಾರರ ಒತ್ತಾಯದ ಮೇರೆಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶಾಸಕರ ಸಭೆ ನಡೆಸಿದ್ದರು. ತುಮಕೂರು ಗ್ರಾಮಾಂತರ ಶಾಸಕ ಬಿ.ಸುರೇಶ್ ಗೌಡ, ತುರುವೇಕೆರೆ ಶಾಸಕ ಎಂ.ಟಿ. ಕೃಷ್ಣಪ್ಪ ಮತ್ತಿತರರು ನೇರ ನೇರವಾಗಿ ಡಿಸಿಎಂ ಸಭೆಯಲ್ಲೂ ಎಕ್ಸ್‌ಪ್ರೆಸ್ ಕೆನಾಲ್ ಕಾಮಗಾರಿಗೆ ವಿರೋಧ ವ್ಯಕ್ತಪಡಿಸಿದ್ದರು.**

## ಮಕ್ಕಳ ಚಿಕಿತ್ಸೆ: 3 ದಿನ ಸಮ್ಮೇಳನ

• **ಉದಯವಾಹಿನಿ, ತುಮಕೂರು**

ಭಾರತೀಯ ಮಕ್ಕಳ ಚಿಕಿತ್ಸಾ ಅಕಾಡೆಮಿ (ಐಎಪಿ), ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ, ಸಿದ್ಧಾರ್ಥ ವೈದ್ಯಕೀಯ ಕಾಲೇಜು, ಸಿದ್ದಗಂಗಾ ವೈದ್ಯಕೀಯ ಕಾಲೇಜು ಆಶ್ರಯದಲ್ಲಿ ತೀವ್ರ ನಿಗಾ ಘಟಕದಲ್ಲಿ ಮಕ್ಕಳ ಚಿಕಿತ್ಸೆ ಕುರಿತ ವೈದ್ಯಕೀಯ ಸಮ್ಮೇಳನ ಸೆ. 12ರಿಂದ 14ರ ವರೆಗೆ ನಡೆಯಲಿದೆ. ರಾಜ್ಯ ಮಟ್ಟದ 16ನೇ ಸಮ್ಮೇಳನ ಮೂರು ದಿನಗಳು ಶ್ರೀದೇವಿ ಕಾಲೇಜಿನಲ್ಲಿ ನಡೆಯಲಿದ್ದು, 500ಕ್ಕೂ ತಜ್ಞರು ಭಾಗವಹಿಸಲಿದ್ದಾರೆ ಎಂದು ಐಎಪಿ ತುಮಕೂರು ಘಟಕದ ಅಧ್ಯಕ್ಷ ಡಾ.ಸಿ.ಅಶೋಕ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



ಹೈದರಾಬಾದ್, ಮುಂಬೈ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ ಸೇರಿದಂತೆ ವಿವಿಧೆಗಳಿಂದ ತಜ್ಞರು ಪಾಲ್ಗೊಳ್ಳಲಿದ್ದು, ವಿಚಾರ ಮಂಡನೆಯಾಗಲಿದೆ ಎಂದರು.

ಐಎಪಿ ಕಾರ್ಯದರ್ಶಿ ಡಾ.ಸಿ.ಕೆ. ಚಂದನ್, ವಿದೇಶಗಳಲ್ಲಿ ಮಕ್ಕಳ ತೀವ್ರ ನಿಗಾ ಘಟಕಗಳಲ್ಲಿ ಚಿಕಿತ್ಸೆ ನೀಡುತ್ತಿರುವ ನವೀನ ವಿಧಾನಗಳ ಬಗ್ಗೆ ಚರ್ಚೆ ನಡೆಯಲಿದೆ ಎಂದು ಹೇಳಿದರು.

ಶ್ರೀದೇವಿ ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ.ಎಂ. ಎಲ್.ಹರೇಂದ್ರಕುಮಾರ್, ಜಿಲ್ಲೆಯಲ್ಲಿ ಮೊಟ್ಟ ಮೊದಲ ಬಾರಿಗೆ ಇಂತಹ ಸಮ್ಮೇಳನ ನಡೆಯುತ್ತಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಹಿರಿಯ ತಜ್ಞ ವೈದ್ಯರು ಭಾಗವಹಿಸುತ್ತಿದ್ದಾರೆ ಎಂದು ತಿಳಿಸಿದರು.


## ರೈಲ್ವೆ ಕಾಮಗಾರಿ ಶೀಘ್ರ ಮುಕ್ತಾಯಕ್ಕೆ ಒತ್ತಾಯ

• **ಉದಯವಾಹಿನಿ, ಶಿರಾ**

ಕೇಂದ್ರ ಮತ್ತು ರಾಜ್ಯ ಸರ್ಕಾರ ವಿಳಂಬ ನೀತಿಯಿಂದ ಹಾಗೂ ಈ ಭಾಗದ ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯಿಂದ ತುಮಕೂರು ದಾವಣಗೆರೆ ನೇರ ರೈಲು ಮಾರ್ಗಗಳ ಮಂಜೂರಾಗಿ 14 ವರ್ಷಗಳು ಕಳೆದರೂ ಕಾಮಗಾರಿ ಕುಂಟಿತಗೊಂಡಿದೆ ಎಂದು ಶಿರಾ ತಾಲ್ಲೂಕು ರೈಲ್ವೆ ಯೋಜನಾ ಪ್ರೋತ್ಸಾಹ ಸಮಿತಿ ಅಧ್ಯಕ್ಷ ಬುರ್ಹಾನ್‌ವುದ್ದಿನ್ ಆರೋಪಿಸಿದ್ದಾರೆ.

ನಗರದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಡಿ.ಎಂ. ನಂಜುಂಡಪ್ಪ ವರದಿ ಪ್ರಕಾರ ಈ 3 ಜಿಲ್ಲೆಗಳು ಅತ್ಯಂತ ಹಿಂದುಳಿದ ಪ್ರದೇಶಗಳಾಗಿವೆ. ರೈಲ್ವೆ ಸಂಪರ್ಕ ವಿಲ್ಲದೆ ಬಡವರು, ರೈತ - ಕಾರ್ಮಿಕರು, ಶಾಲಾ ಕಾಲೇಜುಗಳ ಮಕ್ಕಳು ಉನ್ನತ ವಿಧ್ಯಾಭ್ಯಾಸಕ್ಕೆ ನಗರಕ್ಕೆ ಪ್ರತಿನಿತ್ಯ ಓಡಾಡಲು ತೊಂದರೆಯಾಗಿದೆ. ಸಾರ್ವಜನಿಕರು ಮೂರು ಜಿಲ್ಲೆಯ ರೈಲ್ವೆ ಹೋರಾಟ ಸಮಿತಿಯ ಹೋರಾಟದ ಫಲವಾಗಿ ಈ ಯೋಜನೆಯನ್ನು 2010 11 ನೇ ಸಾಲಿನಲ್ಲಿ ಕೇಂದ್ರ ಸರಕಾರ ಮಂಜೂರು ಮಾಡಿತ್ತು.

ಪತ್ರಿಕಾಗೋಷ್ಠಿಯಲ್ಲಿ ಜಿಯಾವುಲ್ಲಾ, ಖಜಾಂಚಿ ನಿರ್ದೇಶಕರಾದ ಫರೀದ್ ಅಹಮದ್‌ಖಾನ್, ಶಿವರಾಜು, ಮಹಮ್ಮದ್ ಸಲೆಹಾ ಸಲಾಮತ್, ಭರತ್ ರಾಜ್ ಸಿಂಗ್ ಹಾಜರಿದ್ದರು.



### ಮಾರ್ಗಕ್ಕೆ 2248 ಎಕರೆ ಭೂಮಿ

**199.5 ಕಿಮೀ ಉದ್ದವಿರುವ ಈ ಮಾರ್ಗಕ್ಕೆ 2248 ಎಕರೆ ಭೂಮಿ ಅಗತ್ಯವಿದ್ದು, 960 ಕೋಟಿ ಅಂದಾಜು ವೆಚ್ಚದೊಂದಿಗೆ ಅನುಮೋದನೆಗೊಂಡಿತ್ತು. 2017ಕ್ಕೆ ಕಾಮಗಾರಿ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡುವುದು ಯೋಜನೆಯ ಗುರಿಯಾಗಿತ್ತು. ಆದರೆ, ಕಾಮಗಾರಿ ವಿಳಂಬದಿಂದಾಗಿ 2027ಕ್ಕೆ ಸದರಿ ರೈಲು ಮಾರ್ಗ ಲೋಕಾರ್ಪಣೆ ಮಾಡುವ ಭರವಸೆ ನೀಡಿದ್ದಾರೆ. ಜನಪ್ರತಿನಿಧಿಗಳು ತಮ್ಮ ಇಚ್ಛಾಶಕ್ತಿ ಪ್ರದರ್ಶಿಸಿ, ಶೀಘ್ರ ನಿರ್ಮಾಣಕ್ಕೆ ಒತ್ತಾಯಿಸಿದ್ದಾರೆ.**

## ಗ್ಯಾರಂಟಿ ಸಮಿತಿ ಚೊಚ್ಚಲ ಸಭೆ ರದ್ದು

• **ಉದಯವಾಹಿನಿ, ಶಿಡ್ಲಘಟ್ಟ**

ತಾಲ್ಲೂಕು ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಪೊಲೀಸ್ ಬಂದೋಬಸ್‌ನಲ್ಲಿ ಆರಂಭವಾಗಬೇಕಿದ್ದ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆಯು ಕೊನೆಯ ಘಳಿಗೆಯಲ್ಲಿ ದಿಢೀರ್ ರದ್ದಾಗಿದೆ. ಇದರಿಂದಾಗಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗೆ ಗ್ರಹಣ ಹಿಡಿದಂತಾಗಿದೆ. ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ಮುನಿಯಪ್ಪ ಅವರ ಅಧ್ಯಕ್ಷತೆಯಲ್ಲಿ ಆರಂಭಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಚೊಚ್ಚಲ ಸಭೆಯಲ್ಲಿ ಗೃಹ ಲಕ್ಷ್ಮಿ ಯೋಜನೆ ಕುರಿತು ಚರ್ಚೆ ಆರಂಭಿಸಬೇಕಿರುವ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಸಭೆ ರದ್ದುಪಡಿಸಲಾಗಿದೆ ಎಂದು ಸಭೆಯಲ್ಲಿದ್ದ ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ತಾಲ್ಲೂಕು ಪಂಚಾಯಿತಿ ಇಒ ಆರ್. ಹೇಮಾವತಿ ಘೋಷಣೆ ಮಾಡಿದರು.

ಜಿಲ್ಲಾಧಿಕಾರಿ, ಕಾರ್ಯನಿರ್ವಹಣಾಧಿಕಾರಿ ಮತ್ತು ಮಾಜಿ ಸಚಿವ ಎಚ್.ಎಂ. ರೇವಣ್ಣ ಅವರಿಗೆ ಕರೆ ಮಾಡಿದ ಸಮಿತಿ ಅಧ್ಯಕ್ಷ ಎಚ್.ಎಂ.ಮುನಿಯಪ್ಪ, 'ಸಭೆ ಆರಂಭಿಸಲಾಗಿದೆ. ಸಭೆಗೆ ಎಲ್ಲ ಸದಸ್ಯರು



ಬಂದಿದ್ದು, ಏಕಾಏಕಿ ಸಭೆ ರದ್ದುಪಡಿಸಿದರೆ ಹೇಗೆ ಸಭೆ ಮುಂದುವರಿಸಲು ಅವಕಾಶ ನೀಡಬೇಕು' ಎಂದು ಮನವರಿಕೆ ಮಾಡಲು ಯತ್ನಿಸಿದರು. ಆದರೆ, ಈ ಯತ್ನ ಫಲ ನೀಡಲಿಲ್ಲ.

**ಪ್ರತಿಭಟನೆ:** ಮತ್ತೊಂದೆಡೆ ತಾಲ್ಲೂಕು ಪಂ. ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆ ನಡೆಯುತ್ತಿದೆ ಎಂಬುದನ್ನು ತಿಳಿದು, ಸ್ಥಳಕ್ಕಾಗಮಿಸಿದ ರಾಜೀವ್ ಗೌಡ ಅವರ ಬೆಂಬಲಿಗರು, ಪ್ರತಿಭಟನೆ ನಡೆಸಿದರು.

ಶೀಘ್ರವೇ ಹೊಸ ಸಮಿತಿ ರಚನೆಯಾಗಲಿದ್ದು, ಅದುವರೆಗೆ ಸಮಿತಿ ಸಭೆ ನಡೆಸಬಾರದು ಎಂದು ತಾಲ್ಲೂಕು ಪಂಚಾಯಿತಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯಲ್ಲಿ ಪಾಲ್ಗೊಂಡ ಐಎನ್‌ಟಿಯುಸಿ ರಾಜ್ಯ ಸಂಘಟನಾ ಕಾರ್ಯದರ್ಶಿ ಕುಂದಲಗುರ್ಕಿ ಮುನೀಂದ್ರ, ಯುವ ಕಾಂಗ್ರೆಸ್ ಅಧ್ಯಕ್ಷ ಜಯ್ಯದ್ ಅಸ್ಸಾನ್, ನಾಗನರಸಿಂಹ, ಮುತ್ತೂರು ವೆಂಕಟೇಶ್, ಕೆ. ನಾರಾಯಣಸ್ವಾಮಿ, ಅನೂರು ರವಿ, ದೇವರಮಳ್ಳೂರು ರವಿ ಸೇರಿದಂತೆ ಇತರರನ್ನು ಪೊಲೀಸರು ವಶಕ್ಕೆ ಪಡೆದರು.

> **ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯಲ್ಲಿ ಇರುವವರು ಪಕ್ಷದ ನಿಷ್ಠಾವಂತ ಕಾರ್ಯಕರ್ತರಲ್ಲ. ಸಮಿತಿಯಲ್ಲಿ ಜೆಡಿಎಸ್, ಬಿಜೆಪಿಯಿಂದ ವಲಸೆ ಬಂದಿರುವವರಿಗೆ ಅವಕಾಶ ನೀಡಲಾಗಿದ್ದು, ನಿಷ್ಠಾವಂತರನ್ನು ಕಡೆಗಣಿಸಲಾಗಿದೆ. ಈ ವಿಷಯವನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಗಮನಕ್ಕೆ ತರಲಾಗಿದ್ದು, ಹೊಸ ಸಮಿತಿ ರಚನೆಗಾಗಿ ಸಚಿವರಿಗೆ ಶಿಫಾರಸು ಮಾಡಿದ್ದಾರೆ ಎಂದು ಪ್ರತಿಭಟನಕಾರರು ಹೇಳಿದರು.**

## ಸೆ. 17ರಂದು ವಿಶ್ವಕರ್ಮ ಜಯಂತಿ ಆಚರಣೆ: ಸಿದ್ಧತೆಗೆ ಸೂಚನೆ

• **ಉದಯವಾಹಿನಿ, ರಾಮನಗರ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸೆ. 17ರಂದು ವಿಶ್ವಕರ್ಮ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಕಚೇರಿಯ ಸಹಾಯಕ ನಿರ್ದೇಶಕ ಜಯಂತ್ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ವಿಶ್ವಕರ್ಮ ಜಯಂತಿ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ನಗರದ ಕಾಳಿಕಾಂಭ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸುವ ಸಾರ್ವಜನಿಕರಿಗೆ ಊಟ, ಕುಡಿಯುವ ನೀರಿನ ವ್ಯವಸ್ಥೆ, ಆಹ್ವಾನ ಪತ್ರಿಕೆ ಮುದ್ರಣ, ಕಲಾತಂಡಗಳು ಹಾಗೂ ಉಪನ್ಯಾಸಕರ ನೇಮಕ ಕುರಿತು ಅಗತ್ಯ ವ್ಯವಸ್ಥೆಯನ್ನು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಮಾಡಿಕೊಳ್ಳಬೇಕು' ಎಂದು ನಿರ್ದೇಶನ ನೀಡಿದರು. ವಿಶ್ವಕರ್ಮ ಜಯಂತಿಯ ದಿನನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಿಂದ ಕಾಳಿಕಾಂಭ ದೇವಸ್ಥಾನದವರೆಗೆ ವಿಶ್ವಕರ್ಮರ ಚಿತ್ರದ ಮೆರವಣಿಗೆಯನ್ನು ಆಯೋಜಿಸಬೇಕು. ವಿವಿಧ ಜಾನಪದ ಕಲಾತಂಡಗಳು ಸಹ ಮೆರವಣಿಯಲ್ಲಿ ಪಾಲ್ಗೊಳ್ಳುವಂತೆ ವ್ಯವಸ್ಥೆ ಮಾಡಬೇಕು' ಎಂದು ತಿಳಿಸಿದರು.

## ಶಿಕ್ಷಕಿ ವರ್ಗಾವಣೆ ರದ್ದತಿಗೆ ಆಗ್ರಹಿಸಿ ಶಾಲೆಗೆ ಬೀಗ

• **ಉದಯವಾಹಿನಿ, ಶ್ರೀನಿವಾಸಪುರ**

ತಾಲ್ಲೂಕಿನ ಕಶೆಟ್ಟಿಪಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯೊಬ್ಬರ ವರ್ಗಾವಣೆ ಖಂಡಿಸಿ ವಿದ್ಯಾರ್ಥಿಗಳ ಪೋಷಕರು ಶಾಲೆಗೆ ಬೀಗ ಜಡಿದು ಪ್ರತಿಭಟನೆ ನಡೆಸಿದರು.

ಶಾಲೆಯಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕಿ ವರಲಕ್ಷ್ಮಿ ಅವರನ್ನು ಯಾವುದೇ ಕಾರಣಕ್ಕೂ ಶಾಲೆಯಿಂದ ವರ್ಗಾವಣೆ ಮಾಡಬಾರದೆಂದು ಒತ್ತಾಯಿಸಿದರು. ಶಾಲೆಗೆ ಸಂಬಂಧಿಸಿದಂತೆ ಶೈಕ್ಷಣಿಕವಾಗಿ ಹಾಗೂ ಇತರೆ ಅವೃದ್ಧಿಗಾಗಿ ಶ್ರಮಿಸಿರುವ ಶಿಕ್ಷಕಿ ಇದೇ ಶಾಲೆಯಲ್ಲಿ ಕಾರ್ಯನಿರ್ವಹಿಸಬೇಕು. ವರ್ಗಾವಣೆ ಆದೇಶ ಹಿಂಪಡೆಯಬೇಕು ಎಂದು ಮನವಿ ಮಾಡಿದರು. ಶಾಲೆಯಲ್ಲಿ ಹಿಂದೆ ಕೇವಲ 20 ಇದ್ದ ವಿದ್ಯಾರ್ಥಿಗಳ ಸಂಖ್ಯೆಯನ್ನು 102ಕ್ಕೇರಿಸಿದ್ದಾರೆ. ಹೀಗಾಗಿ, ವರಲಕ್ಷ್ಮಿ ಅವರ ವರ್ಗಾವಣೆ ಹಿಂಪಡೆಯಬೇಕೆಂದು ಬಿಇಒ, ಡಿಡಿಪಿಐ, ಆಯುಕ್ತರಿಗೆ ಈಗಾಗಲೇ ಮನವಿ ಪತ್ರ ಸಲ್ಲಿಸಿದ್ದೆವು. ಈವರೆಗೆ ಯಾವುದೇ ಕ್ರಮ ಕೈಗೊಂಡಿರದ ಕಾರಣ ಶಾಲೆಗೆ ಬೀಗ ಜಡಿದಿದ್ದೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವರ್ಗಾವಣೆಯನ್ನು ಹಿಂಪಡೆಯದಿದ್ದಲ್ಲಿ ನಮ್ಮ ಮಕ್ಕಳ ವರ್ಗಾವಣೆ ಪತ್ರವನ್ನು ಪಡೆಯಲಾಗುತ್ತದೆ ಎಂದು ಎಚ್ಚರಿಸಿದರು. ಗ್ರಾಮಸ್ಥ ರಾಮಚಂದ್ರಾರೆಡ್ಡಿ ಮಾತನಾಡಿ. ಶಾಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬರಲು ಕಾರಣ ಶಿಕ್ಷಕಿ ವರಲಕ್ಷ್ಮಿ, ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಉತ್ತಮ ಶ್ರಮವಹಿಸಿರುವ ಅವರನ್ನು ವರ್ಗಾವಣೆ ಮಾಡಿರುವುದು ಖಂಡನೀಯ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ನವೀನ್, ಗ್ರಾಮಸ್ಥರಾದ ಮಂಜುನಾಥರೆಡ್ಡಿ, ಮುರಳಿ, ಮಂಜುನಾಥ್, ಚಂದ್ರಪ್ಪ, ರತ್ನಮ್ಮ. ಅನಿತಾ, ಚೌಡಮ್ಮ, ನಿರ್ಮಲ, ಗೌರಮ್ಮ ಇದ್ದರು.

## ಗುರುಭವನ ನಿರ್ಮಾಣ ಕಾಮಗಾರಿಗೆ ಚಾಲನೆ


• **ಉದಯವಾಹಿನಿ, ಬಾಗೇಪಲ್ಲಿ**

ಜೂನಿಯರ್ ಕಾಲೇಜು ಆಟದ ಮೈದಾನದಲ್ಲಿ 2.5 ಕೋಟಿ ವೆಚ್ಚದಲ್ಲಿ ಗುರುಭವನ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಇಲಾಖೆ ಹಾಗೂ ಖಾಸಗಿ ಶಾಲೆಗಳ ಒಕ್ಕೂಟದ ವತಿಯಿಂದ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜೂನಿಯರ್ ಕಾಲೇಜಿನ ಆಟದ ಮೈದಾನದಲ್ಲಿ ಗುರುಭವನ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಲಾಗಿದೆ. ಮುಂದಿನ ವರ್ಷದ ಸೆಪ್ಟೆಂಬರ್ ಒಳಗೆ ಶಿಕ್ಷಕರ ಸಂಘಟನೆಗಳ 50 ಲಕ್ಷ, ಶಾಸಕರ ಅನುದಾನದ 50 ಲಕ್ಷ, ದಾನಿಗಳ ನೆರವಿನಿಂದ ಗುರುಭವನ ನಿರ್ಮಿಸಲಾಗುವುದು ಎಂದರು.

ಬಾಗೇಪಲ್ಲಿಯಲ್ಲಿ 100 ಕೋಟಿ ವೆಚ್ಚದಲ್ಲಿ



ಮೂರು ವಸತಿ ಶಾಲೆ ಆರಂಭಿಸಲಾಗುವುದು. ಈ ಮೂಲಕ ಶೈಕ್ಷಣಿಕ ಕ್ರಾಂತಿ ಮಾಡುವ ಗುರಿ ಇದೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯ, ನಿವೃತ್ತ ಪೊಲೀಸ್ ಅಧಿಕಾರಿ ಎಂ.ವಿ.ರಾಮಕೃಷ್ಣಪ್ರಸಾದ್ ಪ್ರಧಾನ ಭಾಷಣ ಮಾಡಿದರು. ಪಟ್ಟಣದ ಡಿವಿಜಿ ಮುಖ್ಯರಸ್ತೆಯ ಮೂಲಕ ರಾಮಕೃಷ್ಣ ಕಲ್ಯಾಣ ಮಂಟಪದವರಿಗೆ ತಮಟೆವಾದನ, ವಿದ್ಯಾರ್ಥಿನಿಯರ ಬ್ಯಾಂಡ್ ಸೆಟ್ ಮೂಲಕ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರವನ್ನು ಸಿಂಗರಿಸಿದ ತೆರೆದ ವಾಹನದಲ್ಲಿ ಮೆರವಣಿಗೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್ ಸಾವಿತ್ರಿಬಾಯಿ ಫುಲೆ ಭಾವಚಿತ್ರಗಳಿಗೆ ಗಣ್ಯರು ಪುಷ್ಪನಮನ ಸಲ್ಲಿಸಿದರು. ನಿವೃತ್ತ ಶಿಕ್ಷಕ, ಶಿಕ್ಷಕಿಯರಿಗೆ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಶಾಲು ಹೊದಿಸಿ ಗೌರವಿಸಿದರು.

> **'ಶಿಕ್ಷಕರು ಮತ್ತು ಪೋಷಕರ ಶ್ರಮದಿಂದ ಹಿಂದಿನ ವರ್ಷದ ಮೂರು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳ ಫಲಿತಾಂಶದಲ್ಲಿ ಬಾಗೇಪಲ್ಲಿ ತಾಲ್ಲೂಕು ಪ್ರಥಮಸ್ಥಾನ ಪಡೆದಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸುಧಾರಿಸಲು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದರು.**
> **ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಎನ್. ವೆಂಕಟೇಶಪ್ಪ**

## ಎಬಿವಿಪಿ ಮೆರವಣಿಗೆಯಲ್ಲಿ ಸಚಿವ ಪರಮೇಶ್ವರ ಭಾಗಿ

• **ಉದಯವಾಹಿನಿ, ತುಮಕೂರು**

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸದನದಲ್ಲೇ ಆರ್‌ಎಸ್‌ಎಸ್ ಗೀತೆ ಹಾಡಿ ವಿವಾದಕ್ಕೆ ಸಿಲುಕಿದ ಬಳಿಕ, ಎಬಿವಿಪಿ ಹಮ್ಮಿಕೊಂಡಿದ್ದ ಮೆರವಣಿಗೆ ಕಾರ್ಯಕ್ರಮದಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಭಾಗಿಯಾಗಿರುವುದು ಗಮನ ಸೆಳೆದಿದೆ.ವೀರ ರಾಣಿ ಅಬ್ಬಕ್ಕ ಅವರ 500ನೇ ಜಯಂತಿ ಪ್ರಯುಕ್ತ ರಥಯಾತ್ರೆಯನ್ನು ಎಬಿವಿಪಿ ರಾಜ್ಯದಾದ್ಯಂತ ಹಮ್ಮಿಕೊಂಡಿದೆ. ತಿಪಟೂರಿನಲ್ಲಿ ಮಂಗಳವಾರ ರಾತ್ರಿ ಪಂಜಿನ ಮೆರವಣಿಗೆಯಲ್ಲಿ ರಥಯಾತ್ರೆ ಸಾಗುತ್ತಿದ್ದಾಗ ಪರಮೇಶ್ವರ ಪಾಲ್ಗೊಂಡಿದ್ದರು.

ತಿಪಟೂರಿನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತೆರಳುತ್ತಿದ್ದ ಸಮಯದಲ್ಲಿ ಪಂಜಿನ ಮೆರವಣಿಗೆ ಬರುತ್ತಿರುವುದನ್ನು ಸಚಿವರು ಗಮನಿಸಿದ್ದಾರೆ.

ನಂತರ ಸಚಿವರು ಕಾರಿನಿಂದ ಇಳಿದು. ಶಾಸಕ ಕೆ.ಷಡಕ್ಷರಿ ಜತೆಯಲ್ಲಿ ರಥಯಾತ್ರೆ ಬಳಿಗೆ ತೆರಳಿದ್ದಾರೆ. ಮೆರವಣಿಗೆಯಲ್ಲಿ ಒಯ್ಯುತ್ತಿದ್ದ ರಾಣಿ ಅಬ್ಬಕ್ಕ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ್ದಾರೆ. ಸ್ಥಳದಲ್ಲಿದ್ದ ಪ್ರಮುಖರ ಜತೆ ಕೆಲಕಾಲ ಮಾತುಕತೆ ನಡೆಸಿ ವಾಪಸಾಗಿದ್ದಾರೆ.



> **ಈ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾರೆಲ್ಲಾ ಹುದ್ದೆ ಹಾಗೂ ಜವಾಬ್ದಾರಿ ತೆಗೆದುಕೊಂಡಿದ್ದಾರೊ ಅವರು ಪಕ್ಷಕ್ಕೆ ನಿಷ್ಠರಾಗಿ ಕೆಲಸ ಮಾಡಬೇಕು ಎಂದು ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಕಾರ್ಯಕರ್ತರಾಗಿ, ಪಕ್ಷದ ಪದಾಧಿಕಾರಿಯಾಗಿ ಜವಾಬ್ದಾರಿ ವಹಿಸಿಕೊಂಡವರು ಅದಕ್ಕಾಗಿ ಸಮಯ ಮೀಸಲಿಡಬೇಕು**
> **- ಡಿ.ಕೆ. ಶಿವಕುಮಾರ್**

## ಮಾನವೀಯ ನೆರವಿಗೆ ಹೆಸರಾದ ರೆಡ್ ಕ್ರಾಸ್: ಬಿ.ವಿ. ರೇಣುಕ

• **ಉದಯವಾಹಿನಿ, ರಾಮನಗರ**

ವಿಪತ್ತುಗಳ ಮೂಲಕ ಸಂಕಷ್ಟಗಳು ಬಂದಾಗ, ರೆಡ್ ಕ್ರಾಸ್ ಸಂಸ್ಥೆಯು ನಿಸ್ವಾರ್ಥವಾಗಿ ಸರ್ಕಾರದೊಂದಿಗೆ ಕೈಜೋಡಿಸಿ ನೆರವು ನೀಡುವ ಮೂಲಕ, ಮಾನವೀಯತೆ ಮೆರೆಯುತ್ತಾ ಬಂದಿದೆ' ಎಂದು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಬಿ.ವಿ. ರೇಣುಕ ಅಭಿಪ್ರಾಯಪಟ್ಟರು. ನಗರದ ಶ್ರೀ ಕೃಷ್ಣಸ್ಮೃತಿ ಕಲ್ಯಾಣ ಮಂಟಪದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ರೆಡ್ ಕ್ರಾಸ್ ಸಂಸ್ಥೆಯು ಹಮ್ಮಿಕೊಂಡಿದ್ದ ಫಲಾನುಭವಿಗಳಿಗೆ ಗೃಹೋಪಯೋಗಿ ಹಾಗೂ ಆರೋಗ್ಯ ತಪಾಸಣಾ ಉಪಕರಣಗಳ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು. 'ಅರ್ಹರಿಗೆ ಅಗತ್ಯ ಉಪಕರಣಗಳನ್ನು ವಿತರಿಸುವ ಸಂಸ್ಥೆಯು, ಯಾವುದೇ ನಿರೀಕ್ಷೆ ಇಲ್ಲದೆ ರಕ್ತದಾನ ಶಿಬಿರಗಳನ್ನು ಏರ್ಪಡಿಸಿ ಅಗತ್ಯವಿರುವವರಿಗೆ ರಕ್ತ ನೀಡುವ ಕೆಲಸ ಮಾಡುತ್ತಿದೆ. ನೇತ್ರದಾನದ ಕುರಿತು ಜಾಗೃತಿ ಮೂಡಿಸುವುದು ಸೇರಿದಂತೆ ಹಲವು ಸಮಾಜಮುಖಿ ಕಾರ್ಯಗಳನ್ನು ಸಂಸ್ಥೆ ಮಾಡಿಕೊಂಡು ಬಂದಿದೆ' ಎಂದರು.

## ದಸರಾ ಉದ್ಘಾಟಿಸುತ್ತಿರುವ ಬಾನು ಮುಷ್ತಾಕ್‌ಗೆ 4 ಸವಾಲು ಹಾಕಿದ ಯತ್ನಾಳ್!

• **ಉದಯವಾಹಿನಿ, ಮೈಸೂರು**

ದಸರಾ ಉದ್ಘಾಟನೆಯಿಂದ ಬಾನು ಮುಷ್ತಾಕ್ ಹಿಂದೆ ಸರಿಯಲಿ ಎಂದು ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆಗ್ರಹಿಸಿದ್ದಾರೆ.

ಮೈಸೂರಿನಲ್ಲಿ ಮಾತನಾಡಿದ ಬಸನಗೌಡ ಪಾಟೀಲ್ ಮೂರ್ತಿ ಪೂಜೆ ಮಾಡುವವರು ಇಸ್ಲಾಮ್ ಪ್ರಕಾರ ಕಾಫೀರರು. ಮೂರ್ತಿ ಪೂಜೆ ಮಾಡುವವರನ್ನು ಕೊಲ್ಲಿ ಎಂದು ಇಸ್ಲಾಮ್ ಹೇಳುತ್ತದೆ. ಈಗ ಬಾನು ಮುಷ್ತಾಕ್ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಮಾಡಲು ಮುಂದಾಗಿದ್ದಾರೆ. ಮೌಲ್ವಿಗಳು ಈ ಬಗ್ಗೆ ಮಾತನಾಡಬೇಕು. ಮೂರ್ತಿ ಪೂಜೆಗೆ ಬರುತ್ತಿರುವ ಬಾನು ಮುಷ್ತಾಕ್ ವಿರುದ್ಧ ಏನು ಕ್ರಮ ಕೈಗೊಳ್ಳುತ್ತೀರಾ ಮೌಲ್ವಿಗಳು ಈ ಬಗ್ಗೆ ಉತ್ತರ ನೀಡಬೇಕು ಎಂದು ಆಗ್ರಹಿಸಿದ್ದಾರೆ. ಅಲ್ಲದೆ ಬಾನು ಮುಷ್ತಾಕ್ ಅವರಿಗೆ ಈ ಕೆಲವು ಸವಾಲು ಹಾಕಿದ್ದಾರೆ.



ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆಗ್ರಹ

ಇದೇ ವೇಳೆ ಸಿಎಂ ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದ ಅವರು, ಸಿದ್ದರಾಮಯ್ಯ ಅವರಿಗೆ ತಾಯಿ ಚಾಮುಂಡಿಯ ಶಾಪ ತಟ್ಟಲಿದೆ. ತಾಯಿ ಚಾಮುಂಡೇಶ್ವರಿಯಿಂದ ಸಿದ್ದರಾಮಯ್ಯ ರಾಜಕೀಯ ಅಂತ್ಯವಾಗಲಿದೆ ಎಂದು ಶಪಿಸಿದ್ದಾರೆ. ಸಿದ್ದರಾಮಯ್ಯನವರ ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ನೇಪಾಳದ ಪರಿಸ್ಥಿತಿ ರಾಜ್ಯಕ್ಕೂ ಬರಲಿದೆ. ರಾಜ್ಯದಲ್ಲಿ ಜನರಿಂದ ಕ್ರಾಂತಿ ಆಗಲಿದೆ. ಸಿದ್ದರಾಮಯ್ಯ ಇದೇ ಧೋರಣೆಯಲ್ಲಿದ್ದರೆ ಶೀಘ್ರವೇ ಸಿದ್ದರಾಮಯ್ಯ ಸರ್ಕಾರ ಪತನವಾಗಲಿದೆ. ರಾಜ್ಯದ ಜನರು ತಾಳ್ಮೆ ಕಳೆದುಕೊಂಡಿದ್ದಾರೆ.

ಸದ್ಯದಲ್ಲೇ ಕ್ರಾಂತಿಯ ಹಾದಿ ಹಿಡಿಯಲಿದ್ದಾರೆ ಎಂದು ಬಿಜೆಪಿಯಿಂದ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮೈಸೂರಿನಲ್ಲಿ ಹೇಳಿದ್ದಾರೆ.

- **1) ಬಾನು ಮುಷ್ತಾಕ್ ನಾನು ಎಕ್ಸ್ ಮುಸ್ಲಿಂ ಎಂದು ಘೋಷಣೆ ಮಾಡಬೇಕು.**
- **2) ಇಸ್ಲಾಮ್ ಧರ್ಮದ ಬಗ್ಗೆ ನನಗೆ ನಂಬಿಕೆಯಿಲ್ಲವೆಂದು ಹೇಳಿ ದಸರಾ ಉದ್ಘಾಟನೆ ಮಾಡಲಿ.**
- **3) ಇಲ್ಲದಿದ್ದರೇ ದಸರಾ ಉದ್ಘಾಟನೆಯಿಂದ ಹಿಂದೆ ಸರಿದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಿ.**
- **4) ಇಡೀ ವಿಶ್ವದಾದ್ಯಂತ ಎಕ್ಸ್ ಮುಸ್ಲಿಂ ಸಮುದಾಯ ಎಂಬ ಪ್ರತ್ಯೇಕ ಸಮುದಾಯ ಹುಟ್ಟಿಕೊಳ್ಳುತ್ತಿದೆ. ಇಸ್ಲಾಮ್ ಧರ್ಮವನ್ನು ಒಪ್ಪದವರು ಇದರಲ್ಲಿದ್ದಾರೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.**

## ವಿರೋಧದ ನಡುವೆ ಗಾಂಧಿ ಪುತ್ಥಳಿ ತೆರವು

• **ಉದಯವಾಹಿನಿ, ಮಾಗಡಿ**

ಪಟ್ಟಣದ ಎನ್‌ಇಎಸ್ ವೃತ್ತದ ಬಳಿ ಮಾಜಿ ಶಾಸಕ ಮಂಜುನಾಥ್ ಸ್ವಂತ ಅನುನದಲ್ಲಿ ನಿರ್ಮಾಣ ಮಾಡಿದ್ದ ಗಾಂಧಿ ಪುತ್ಥಳಿಯನ್ನು ವೃತ್ತವನ್ನು ಅಭಿವೃದ್ಧಿಗೊಳಿಸುವ ಹಿನ್ನೆಲೆಯಲ್ಲಿ ತೀವ್ರ ವಿರೋಧ ನಡುವೆ ಪೊಲೀಸ್ ಬಿಗಿ ಭದ್ರತೆಯಲ್ಲಿ ತೆರವುಗೊಳಿಸಲಾಯಿತು.2018ರಲ್ಲಿ ಸ್ವಂತ ವೆಚ್ಚದಲ್ಲಿ ಮಂಜುನಾಥ್ ಪುತ್ಥಳಿ ನಿರ್ಮಾಣ ಮಾಡಿದ್ದರು. ಶಾಸಕ ಎಚ್.ಸಿ.ಬಾಲಕೃಷ್ಣ ಅವರು ಎನ್‌ಇಎಸ್ ವೃತ್ತ ಅಭಿವೃದ್ಧಿಗೊಳಿಸಲು ಮುಂದಾಗಿದ್ದಾರೆ.

ಮುಂದಿನ ತಿಂಗಳು ಗಾಂಧಿ ಜಯಂತಿ ಇರುವುದರಿಂದ ಯಾವುದೇ ಕಾರಣಕ್ಕೂ ಪುತ್ಥಳಿ ತೆರವು ಮಾಡಬಾರದು. ಸಾರ್ವಜನಿಕರ ಅಭಿಪ್ರಾಯ ಪಡೆದು ಪುತ್ಥಳಿ ತೆರವುಗೊಳಿಸಬೇಕು. ವೃತ್ತ ಅಭಿವೃದ್ಧಿಗೊಂಡ ನಂತರ ಮತ್ತೆ ಪುನರ್ ನಿರ್ಮಾಣ ಮಾಡಬೇಕೆಂದು ಜೆಡಿಎಸ್ ಮುಖಂಡರು ಒತ್ತಾಯಿಸಿದರು. ಪುರಸಭೆ ಸದಸ್ಯ ಎಂ.ಎನ್. ಮಂಜು, ರಾಜಕೀಯ ದ್ವೇಷಕ್ಕಾಗಿ ಶಾಸಕ ಬಾಲಕೃಷ್ಣ ಪುತ್ಥಳಿ ತೆರವುಗೊಳಿಸಲು ಮುಂದಾಗಿದ್ದಾರೆ. ಅಧಿಕಾರದ ದರ್ಪ ಸಹಿಸಲು ಸಾಧ್ಯವಿಲ್ಲ ಎಂದರು.

ಏಕಾಏಕಿ ಪುತ್ಥಳಿ ತೆರವು ಮಾಡಲು ಪುರಸಭೆ ಅಧಿಕಾರಿಗಳು ಮುಂದಾಗಿದ್ದಾರೆ. ಒಂದು ವರ್ಷ ಕಳೆದರೂ ಕೂಡ ರಸ್ತೆ ಅಭಿವೃದ್ಧಿ ಪೂರ್ಣ ಮಾಡಿಲ್ಲ. ಎನ್‌ಇಎಸ್ ಬಡಾವಣೆಯಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅದನ್ನು ಬಿಟ್ಟು ರಾಜಕೀಯ ದ್ವೇಷದ ಹಿನ್ನೆಲೆಯಲ್ಲಿ ಪುತ್ಥಳಿ ತೆರವಿಗೆ ಮುಂದಾಗಿದ್ದಾರೆ ಎಂದು ಜೆಡಿಎಸ್ ಮುಖಂಡರು, ಅಧಿಕಾರಿಗಳು ಮತ್ತು ಪೊಲೀಸರ ವಿರುದ್ಧ ವಾಗ್ವಾದ ನಡೆಸಿದರು.

# ಕೃಷಿ ಉತ್ಪನ್ನಕ್ಕೆ ರೈತರೇ ಬೆಲೆ ನಿಗದಿಪಡಿಸುವಂತಾಗಬೇಕು

## ಕೃಷಿ ಉತ್ಪನ್ನ ಮಾರುಕಟ್ಟೆ ಕಾನೂನು ಕುರಿತ ವಿಚಾರ ಸಂಕಿರಣ ಉದ್ಘಾಟನೆ

• **ಉದಯವಾಹಿನಿ, ಮೈಸೂರು**

ಕೃಷಿ ಉತ್ಪನ್ನಗಳಿಗೆ ರೈತರೇ ಬೆಲೆ ನಿಗದಿಪಡಿಸುವಂತಹ ವ್ಯವಸ್ಥೆ ಬರಬೇಕು ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಆಶಿಸಿದರು. ಇಲ್ಲಿನ ಬನ್ನೂರು ರಸ್ತೆಯಲ್ಲಿರುವ ವಿದ್ಯಾವಿಕಾಸ ಕಾನೂನು ಅಧ್ಯಯನ ಸಂಸ್ಥೆ (ವಿವಿಐಎಲ್‌ಎಸ್)ಯಲ್ಲಿ ವಿದ್ಯಾವಿಕಾಸ ಶಿಕ್ಷಣ ಟ್ರಸ್ಟ್, ಬೆಂಗಳೂರಿನ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ 'ಕೃಷಿ ಉತ್ಪನ್ನ ಮಾರುಕಟ್ಟೆ ಕಾನೂನು' ಕುರಿತ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಬೇರೆಲ್ಲರೂ ಅವರವರ ಉತ್ಪನ್ನಕ್ಕೆ ಬೆಲೆ ನಿಗದಿಪಡಿಸಬಹುದು. ಆದರೆ, ರೈತರು ಮಾಡಬಾರದೇಕೆ ಶೂ, ಆಟಿಕೆ, ಪಾನ್ ಮಸಾಲ ಮಾರುವವರೂ ಬೆಲೆ ನಿಗದಿಪಡಿಸುತ್ತಾರೆ. ಕಡಿಮೆ ಕೊಡುವಂತಿಲ್ಲ. ಆದರೆ, ನಮ್ಮ ರೈತರು ಬೆಲೆ ಹೇಳುವಷ್ಟು ಮಾರುಕಟ್ಟೆ ಸನ್ನಿವೇಶ ಇನ್ನೂ ನಿರ್ಮಾಣವಾಗಿಲ್ಲ. ಇದು ನಮ್ಮಲ್ಲಿ ನೋವುಂಟು ಮಾಡಬೇಕು. ರೈತನೇ ಬೆಲೆ ಸೃಷ್ಟಿಸಿದಾಗ ಮಾತ್ರ ಅವರ ಕಲ್ಯಾಣ ಸಾಧ್ಯ. ಈ ನಿಟ್ಟಿನಲ್ಲಿ ನಮ್ಮೆಲ್ಲರ ನಡೆ ಇರಬೇಕು. ಆದರೆ, ನಾವೀಗ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದ್ದೇವೆ' ಎಂದು ವಿಷಾದ ವ್ಯಕ್ತಪಡಿಸಿದರು.



**ನಿರ್ಲಕ್ಷಿತ ಕ್ಷೇತ್ರ:** ಕೃಷಿ ಉತ್ಪನ್ನ ಮಾರುಕಟ್ಟೆ ಅತ್ಯಂತ ನಿರ್ಲಕ್ಷಿತ ಕ್ಷೇತ್ರವಾಗಿದೆ. ಇದಕ್ಕೆ ಸಂಬಂಧಿಸಿದ ಕಾನೂನುಗಳು ಸಡಿಲವಾಗಿವೆ. ಜೊತೆಗೆ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ ಎಂದರೂ ತಪ್ಪಾಗಲಾರದು ಎಂದರು.

ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಯಾವುದೇ ರೈತರಿಂದ ಕಮಿಷನ್ ತೆಗೆದುಕೊಳ್ಳಬಾರದು ಎಂದು ಕಾನೂನು ಮಾಡಲಾಗಿತ್ತು. ಆದರೆ, ಬಿಲ್ ಹಿಂದೆ ಬರೆದು ಶೇ 4ರಷ್ಟು, ವಾಣಿಜ್ಯ ಬೆಳೆಗಳಿಗೆ ಶೇ 7ರಷ್ಟು ಕಮಿಷನ್ ಪಡೆಯುವುದು ಪ್ರಾರಂಭವಾಯಿತು. ತೂಕದಲ್ಲಿ ಮೋಸ ಆಗುತ್ತಿದೆ. ಹಣ ಪಾವತಿಯಲ್ಲಿ ವಿಳಂಬ ಮಾಡಲಾಗುತ್ತದೆ. ಇದೆಲ್ಲವನ್ನೂ ತಡೆಯಲೆಂದೇ ಎಂ.ಎಸ್. ಸ್ವಾಮಿನಾಥನ್ ಅವರು ನೀಡಿದ್ದ ವರದಿಯ ಶಿಫಾರಸುಗಳು ಇಂದಿಗೂ ಜಾರಿಯಾಗಿಲ್ಲ. ಅವರ ಶಿಫಾರಸು ಆಧರಿಸಿ ಎಂಎಸ್‌ಪಿ ಕೊಡುತ್ತಿಲ್ಲ. ರೈತರ ಉತ್ಪನ್ನಕ್ಕೆ ಸೂಕ್ತ ಬೆಲೆ ಸಿಗಬೇಕೆಂಬ ಹೋರಾಟ ನಡೆಯುತ್ತಲೇ ಇದೆ' ಎಂದು ಹೇಳಿದರು.

**ಮರುಸ್ಥಾಪಿಸಲಾಗಿದೆ:** ರೈತ ವಿರೋಧಿ ಮೂರು ಕಾನೂನುಗಳನ್ನು ತಂದು, ರೈತರಿಗೆ ಇದ್ದ ಸಣ್ಣ ರಕ್ಷಣೆಯನ್ನೂ ನಾಶಪಡಿಸಲಾಯಿತು.

ಅವುಗಳನ್ನು ಹಿಂಪಡೆಯುವಂತೆ ರೈತರು ದೆಹಲಿ ಸುತ್ತ ದೊಡ್ಡಮಟ್ಟದಲ್ಲಿ ಹೋರಾಡಿದ್ದು ಐತಿಹಾಸಿಕವಾದುದು. ಅದಕ್ಕೆ ಕೇಂದ್ರ ಸರ್ಕಾರ ಬಗ್ಗಿತು. ರಾಜ್ಯದಲ್ಲಿ ರೈತರಿಗೆ ಇದ್ದ ರಕ್ಷಣೆಯನ್ನು ಮರುಸ್ಥಾಪಿಸಲಾಗಿದೆ' ಎಂದರು.

> **ರೈತರು ದೇಶದ ಆರ್ಥಿಕತೆಯ ಬೆನ್ನೆಲುಬು ಎನ್ನುತ್ತಾರೆ. ಆದರೆ, ಅವರಿಗೆ ಅನುಕೂಲ ಕಲ್ಪಿಸುವ ಕೆಲಸ ಸಮರ್ಪಕವಾಗಿ ಆಗಿಲ್ಲ. ಖರೀದಿ ಕೇಂದ್ರ ತೆರೆಯಲಾಗುತ್ತದೆ: ಎಂಎಸ್‌ಪಿ ಘೋಷಿಸಲಾಗುತ್ತದೆ. ಆದರೆ, ಮಧ್ಯವರ್ತಿಗಳು, ವ್ಯಾಪಾರಿಗಳಿಂದ ಶೋಷಣೆ ತಪ್ಪಿಲ್ಲ. ಸಿಕ್ಕಷ್ಟಕ್ಕೇ ಮಾರಬೇಕಾದ ಸ್ಥಿತಿ ರೈತರದಾಗಿದೆ. ಇದನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದರು.**
> **-ಪ್ರೊ.ಎಸ್.ಎಂ. ಮುಂದಿನಮನಿ**

> **ಲಭ್ಯ ಗೋದಾಮುಗಳನ್ನು ರೈತರು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವಂತೆ ಆಗಬೇಕು. ರಾಷ್ಟ್ರೀಯ ಮಾರುಕಟ್ಟೆ ಅಗತ್ಯವಾಗಿದ್ದು, ರೈತರು ಒಳ್ಳೆಯ ಬೆಲೆ ಪಡೆದುಕೊಳ್ಳುವಂತೆ ಆಗಬೇಕು. ಇ ಕಾಮರ್ಸ್ ವೇದಿಕೆಗಳಿಗೆ ರೈತರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬರುವಂತೆ ಮಾಡಬೇಕಾಗಿದೆ. ಎಪಿಎಂಸಿಗಳನ್ನು ಮುಂದುವರಿಸಬೇಕು. ಕೃಷಿಕರ ವಿಷಯದಲ್ಲಿ ಸರ್ಕಾರಗಳು ಫೆಸಿಲಿಟೇಟರ್ (ಅನುವುಗಾರ) ಆಗಬೇಕೇ ಹೊರತು ನಿರ್ಬಂಧಕ ಆಗಬಾರದು ಎಂದು ಹೇಳಿದರು.**
> **- ಕೃಷಿ ಅರ್ಥಶಾಸ್ತ್ರಜ್ಞ ಪಿ.ಜಿ.ಚೆಂಗಪ್ಪ**

ಅಂತರಾಳದಿಂದ... EDITORIAL

# ಇವಿಎಂ ಬದಲಿಗೆ ಮತ್ತೆ ಮತಪತ್ರ; ಒತ್ತೆಯಾಳು ಆಗದಿರಲಿ ಪ್ರಜಾತಂತ್ರ



ಇವಿಎಂ ಬಳಕೆ ಮಾಡಿದಾಗ, ಅವುಗಳಲ್ಲಿ ದಾಖಲಾಗುವ ವಿವರಗಳನ್ನು ಬದಲಾಯಿಸಬಹುದು. ಅದು ಚುನಾವಣಾ ಪ್ರಕ್ರಿಯೆಯ ವಿಶ್ವಾಸಾರ್ಹತೆಗೆ ಧಕ್ಕೆ ತರುತ್ತದೆ ಎಂದು ಕಾಂಗ್ರೆಸ್ ಪಕ್ಷದ ನಾಯಕರು ಆರೋಪಿಸಿದ ನಂತರದಲ್ಲಿ ರಾಜ್ಯ ಸರ್ಕಾರವು ಈ ಶಿಫಾರಸು ಮಾಡಿದೆ. ಆದರೆ, ನಿಜವಾದ ಪರೀಕ್ಷೆಯು ಮುಂದಿನ ದಿನಗಳಲ್ಲಿ ಆಗಬೇಕಿದೆ: ಮತಪತ್ರಗಳನ್ನು ಬಳಸಿ ನಡೆಸುವ ಚುನಾವಣೆಗಳಲ್ಲಿ ಕಾಂಗ್ರೆಸ್ ಸಾಧನೆ ಕಳಪೆಯಾಗಿದ್ದರೆ ಆ ಫಲಿತಾಂಶವನ್ನು ಪಕ್ಷವು ಒಪ್ಪಿಕೊಳ್ಳುತ್ತದೆಯೇ ಅಥವಾ ಪಕ್ಷವು ಕಟ್ಟುವ ಸಂಕಥನವು ಬದಲಾವಣೆ ಕಾಣುತ್ತದೆಯೇ ಚುನಾವಣಾ ಪ್ರಕ್ರಿಯೆಯ ಮೇಲೆ ಜನರು ಇರಿಸಿರುವ ವಿಶ್ವಾಸವು ಚುನಾವಣಾ ಫಲಿತಾಂಶ ವನ್ನಷ್ಟೇ ಆಧರಿಸಿ ಇರಲಾರದು; ಚುನಾವಣಾ ಪ್ರಕ್ರಿಯೆಯನ್ನು ನಡೆಸುವ ಸಂಸ್ಥೆಗಳ ಸಾಮರ್ಥ್ಯ ಹಾಗೂ ಇಡೀ ಚುನಾವಣಾ ಪ್ರಕ್ರಿಯೆಯು ಎಷ್ಟು ಪ್ರಾಮಾಣಿಕವಾಗಿ ನಡೆದಿದೆ ಎಂಬುದನ್ನು ಆಧರಿಸಿ ಆ ವಿಶ್ವಾಸವು ರೂಪುಗೊಳ್ಳುತ್ತದೆ.

> **ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಎಲೆಕ್ಟ್ರಾನಿಕ್ ಮತ ಯಂತ್ರಗಳ (ಇವಿಎಂ) ಬದಲಿಗೆ ಮತಪತ್ರಗಳನ್ನು ಬಳಕೆ ಮಾಡಬೇಕು ಎಂದು ರಾಜ್ಯ ಸಚಿವ ಸಂಪುಟವು ಶಿಫಾರಸು ಮಾಡಿದೆ. ಇದು ರಾಜಕೀಯವಾಗಿ ಬಹಳ ಮಹತ್ವದ ಕ್ರಮ.**

ಮತಪತ್ರಗಳು ಮತದಾನ ನಡೆದಿರುವುದಕ್ಕೆ ಕಣ್ಣಿಗೆ ಕಾಣುವಂತಹ ಸಾಕ್ಷ್ಯವೊಂದನ್ನು ಒದಗಿಸುತ್ತವೆ, ಆ ಮೂಲಕ ಮತದಾರರ ವಿಶ್ವಾಸವನ್ನು ಹೆಚ್ಚಿಸುತ್ತವೆ ಎಂದು ಅವುಗಳ ಪರವಾಗಿ ಇರುವವರು ವಾದಿಸುತ್ತಾರೆ. ಮತಪತ್ರಗಳನ್ನು ಬಳಸಿ ಚುನಾವಣೆ ನಡೆಸಿದಾಗ, ಮತಪೆಟ್ಟಿಗೆಗಳಲ್ಲಿ ದಾಖಲಾದ ವಿವರಗಳನ್ನು ಎಲ್ಲೋ ಕುಳಿತು ಬದಲಾಯಿಸಲು ಆಗುವುದಿಲ್ಲ,

ತಂತ್ರಾಂಶದ ಸಮಸ್ಯೆಯು ಇವುಗಳನ್ನು ಕಾಡುವುದಿಲ್ಲ. ಅಗೋಚರವಾಗಿ ವಿವರಗಳನ್ನು ತಿರುಚಿದ ಅನುಮಾನಕ್ಕೆ ಆಸ್ಪದ ಇರುವುದಿಲ್ಲ. ವಿವಾದ ಸೃಷ್ಟಿಯಾದಲ್ಲಿ, ಮತಪತ್ರಗಳನ್ನು ಮತ್ತೆ ಎಣಿಕೆ ಮಾಡಬಹುದು. ಇವಿಎಂಗಳ ಜೊತೆ ಮತದಾನ ದೃಢೀಕರಣ ರಶೀದಿ ಯಂತ್ರಗಳ (ವಿವಿಪ್ಯಾಟ್) ಬಳಕೆ ಕೂಡ ಆಗಿರುತ್ತದೆಯಾದರೂ, ಸಾಂಪ್ರದಾಯಿಕ ಮತಪತ್ರಗಳು ಮೂಡಿಸುವ ವಿಶ್ವಾಸವನ್ನು ಈ ಯಂತ್ರಗಳು ಮೂಡಿಸುವುದಿಲ್ಲ ಎಂಬುದು ಟೀಕಾಕಾರರ ವಾದ. ಆದರೆ, ಮತಪತ್ರಗಳು ಕೂಡ ದೋಷರಹಿತ ಅಲ್ಲ. ಮತಪತ್ರಗಳನ್ನು ಬಳಸಿ ಚುನಾವಣಾ ಪ್ರಕ್ರಿಯೆಯನ್ನು ನಡೆಸಿದಾಗ ಚುನಾವಣಾ ಮತಗಟ್ಟೆಗಳನ್ನು ಅಕ್ರಮವಾಗಿ ವಶಕ್ಕೆ ಪಡೆದಿದ್ದ ನಿದರ್ಶನಗಳು ಇವೆ, ಮತ ಪೆಟ್ಟಿಗೆಗಳಲ್ಲಿ ಅರ್ಹ ಮತದಾರರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮತಪತ್ರಗಳು ಬೀಳಬಹುದಾದ ಸಾಧ್ಯತೆಯೂ ಇರುತ್ತದೆ. ಇವಿಎಂ ಬಳಕೆ ಶುರುವಾದ ನಂತರದಲ್ಲಿ ಈ ಬಗೆಯ ಅಕ್ರಮಗಳು ಗಣನೀಯವಾಗಿ ಕಡಿಮೆ ಆಗಿವೆ. ಮತಪತ್ರಗಳನ್ನು ಎಣಿಕೆ ಮಾಡುವ ಪ್ರಕ್ರಿಯೆ ನಿಧಾನದ್ದು ಹಾಗೂ ಅದಕ್ಕೆ ಹೆಚ್ಚು ಹಣ ವೆಚ್ಚವಾಗುತ್ತದೆ ಮತ್ತು ಅದರಲ್ಲಿ ಲೋಪಗಳು ನುಸುಳುವ ಸಾಧ್ಯತೆ ಇರುತ್ತದೆ. ಕೋಟಿಗಳ ಸಂಖ್ಯೆಯಲ್ಲಿ ಮತಪತ್ರಗಳನ್ನು ಮುದ್ರಿಸುವುದರಿಂದ ಪರಿಸರದ ಮೇಲೆ ಆಗುವ ಪರಿಣಾಮ ಕೂಡ ಗಣನೀಯ. ಮತ ಚಲಾವಣೆ ಸಂದರ್ಭದಲ್ಲಿ ಮತದಾರರು ಸರಿಯಾಗಿ ಗುರುತು ಮಾಡದೆ ಇದ್ದರೆ, ಅನರ್ಹ ಮತಗಳ ಸಂಖ್ಯೆ ಹೆಚ್ಚಾಗುತ್ತದೆ.

ಜಾಗತಿಕ ಮಟ್ಟದಲ್ಲಿ ಮತಪತ್ರಗಳನ್ನು ವ್ಯಾಪಕವಾಗಿ ಬಳಕೆ ಮಾಡಲಾಗುತ್ತಿದೆ. ಅಮೆರಿಕ, ಕೆನಡಾ, ಬ್ರಿಟನ್, ಜರ್ಮನಿ, ಜಪಾನ್ ಇಂದಿಗೂ ಮತಪತ್ರಗಳನ್ನು ಬಳಸುತ್ತವೆ. ಆದರೆ, ಅದರ ಜೊತೆ ಬೇರೆ ಬೇರೆ ಪ್ರಮಾಣದಲ್ಲಿ ತಾಂತ್ರಿಕ ನೆರವನ್ನು ಪಡೆದುಕೊಳ್ಳುತ್ತವೆ. ಮತಪತ್ರಗಳ ಬಳಕೆಯಲ್ಲಿ ಎದುರಾದ ಸವಾಲುಗಳನ್ನು ನಿಭಾಯಿಸಲು ಭಾರತವು ಇವಿಎಂಗಳನ್ನು ಭಾರೀ ಪ್ರಮಾಣದಲ್ಲಿ ಬಳಸಲು ಆರಂಭಿಸಿತು. ಆದರೆ, ಮತಪತ್ರಗಳ ಬಳಕೆಗೆ ಕರ್ನಾಟಕ ಮತ್ತೆ ಒಲವು ತೋರಿರುವುದು, ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಿದ್ದ ಸುಧಾರಣೆಯೊಂದನ್ನು ಕೈಬಿಡುವ ಕೆಲಸಕ್ಕೆ ಕೈಹಾಕಿದಂತಿದೆ. ಚುನಾವಣಾ ಪ್ರಕ್ರಿಯೆಗೆ ವಿಶ್ವಾಸಾರ್ಹತೆ ಸಿಗುವುದು ಅಲ್ಲಿ ಮತಪತ್ರವನ್ನು ಬಳಕೆ ಮಾಡಲಾಗಿದೆಯೋ, ಮತಯಂತ್ರಗಳನ್ನು ಬಳಕೆ ಮಾಡಲಾಗಿದೆಯೋ ಎಂಬುದನ್ನು ಆಧರಿಸಿ ಇರುವುದಿಲ್ಲ. ಬದಲಿಗೆ, ಇಡೀ ಪ್ರಕ್ರಿಯೆಯು ಎಷ್ಟು ಪಾರದರ್ಶಕವಾಗಿ ಇತ್ತು, ರಾಜಕೀಯ ಪಕ್ಷಗಳು ಜನರ ತೀರ್ಮಾನವನ್ನು ಹೇಗೆ ಒಪ್ಪಿಕೊಂಡವು ಎಂಬುದನ್ನು ಅದು ಆಧರಿಸಿರುತ್ತದೆ.

ಲೋಪಗಳನ್ನು ಕಡಿಮೆ ಮಾಡಲು ತಂತ್ರಜ್ಞಾನವು ನೆರವು ನೀಡಬಹುದು, ಮತಪತ್ರವು ಕಣ್ಣಿಗೆ ಕಾಣುವಂತಹ ವಿಶ್ವಾಸಾರ್ಹ ಸಾಕ್ಷ್ಯವೊಂದನ್ನು ಒದಗಿಸುತ್ತದೆ. ಹೀಗಿದ್ದರೂ, ರಾಜಕೀಯ ಪಕ್ಷಗಳು ನ್ಯಾಯಸಮ್ಮತವಾಗಿ ನಡೆದುಕೊಳ್ಳದೆ ಇದ್ದರೆ ಇವೆರಡೂ ಲೋಪರಹಿತವಾಗಿ ಉಳಿಯುವುದಿಲ್ಲ. ಯಾರೇ ಗೆಲ್ಲಲಿ, ಯಾರೇ ಸೋಲಲಿ ವಿಶ್ವಾಸವನ್ನು ಹೆಚ್ಚಿಸುವಂತಹ ಸಂಸ್ಥೆಗಳನ್ನು ಕಟ್ಟುವುದು ಹೆಚ್ಚು ಮಹತ್ವದ್ದಾಗುತ್ತದೆ. ಮತಪತ್ರಗಳನ್ನು ರಾಜ್ಯದಲ್ಲಿ ಬಳಕೆ ಮಾಡುವುದರಿಂದ ವಿಶ್ವಾಸ ಹೆಚ್ಚಾಗುತ್ತದೆ ಎಂದಾದರೆ, ಹಾಗೇ ಆಗಲಿ. ಆದರೆ ವಿಶ್ವಾಸ ಹೆಚ್ಚಾಗದೆ ಇದ್ದರೆ ಇವಿಎಂಗಳಿಗೆ ಬೇಡಿಕೆಯು ಮತ್ತೆ ಮುನ್ನೆಲೆಗೆ ಬರುತ್ತದೆ. ಪ್ರಜಾತಂತ್ರ ವ್ಯವಸ್ಥೆಯು ಅನುಮಾನದ ಒತ್ತೆಯಾಳಿನಂತೆ ಆಗಬಾರದು. ವಿಶ್ವಾಸ, ಪಾರದರ್ಶಕತೆ ಮತ್ತು ಜನರ ತೀರ್ಪನ್ನು ಗೌರವಿಸುವ ಕ್ರಮಗಳಿಂದ ಮಾತ್ರ ಪ್ರಜಾತಂತ್ರ ಉಳಿಯಬಹುದು.

# ಅರೋಮಾಥೆರಪಿ ಮಾರುಕಟ್ಟೆಗೆ ಪ್ರವೇಶಿಸಿದ ಐರಿಸ್ ಹೋಮ್ ಫ್ರಾಗ್ರೆನ್ಸಸ್

## ದೈನಂದಿನ ಬಳಕೆಗೆ ಸೂಕ್ತವಾದ ನೈಸರ್ಗಿಕ ಅರೋಮಾಥೆರಪಿ ಉತ್ಪನ್ನಗಳ ಬಿಡುಗಡೆ




> **ಐರಿಸ್ ಹೋಮ್ ಫ್ರಾಗ್ರೆನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಕಿರಣ್ ರಂಗಾ ಅವರು, ಆರೋಗ್ಯ ಪಾಲನೆಯನ್ನು ದೈನಂದಿನ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡುವುದು ಐರಿಸ್ ಹೋಮ್ ಫ್ರಾಗ್ರೆನ್ಸಸ್ ಸಂಸ್ಥೆಯ ಉದ್ದೇಶವಾಗಿದೆ. ಇದೀಗ ನಾವು ಅಪೂರ್ವ ತೈಲಗಳ ಚಿಕಿತ್ಸಕ ಗುಣಗಳನ್ನು ಆಧುನಿಕ ಕ್ರಮಗಳೊಂದಿಗೆ ಸಂಯೋಜಿಸಿ ಅರೋಮಾಥೆರಪಿ ಉತ್ಪನ್ನ ಶ್ರೇಣಿ ಬಿಡುಗಡೆ ಮಾಡಿದ್ದೇವೆ. ಈ ಮೂಲಕ ಆರೋಗ್ಯ ಪಾಲನೆಗೆ ನೆರವಾಗುವ ಸರಳ, ಸುರಕ್ಷಿತ ಮತ್ತು ಪರಿಣಾಮಕಾರಿ ಉತ್ಪನ್ನ ಒದಗಿಸುತ್ತಿದ್ದೇವೆ. ಈ ಪ್ರತಿಯೊಂದು ಉತ್ಪನ್ನವನ್ನು ಸುರಕ್ಷತೆ, ಶುದ್ಧತೆ ಮತ್ತು ಪರಿಣಾಮಕಾರಿತ್ವದ ಆಧಾರದ ಮೇಲೆ ತಯಾರಿಸಲಾಗಿದೆ. ನೈಸರ್ಗಿಕ ಸೂತ್ರೀಕರಣಗಳನ್ನು ಬಳಸಲಾಗಿದ್ದು, ಚರ್ಮಕ್ಕೆ ಸುರಕ್ಷಿತವಾಗಿವೆ ಮತ್ತು ದೈನಂದಿನ ಬಳಕೆಗೆ ಸೂಕ್ತವಾಗಿದೆ ಎಂದು ಹೇಳಿದರು.**

• **ಉದಯವಾಹಿನಿ, ಬೆಂಗಳೂರು**

ಸೈಕಲ್ ಪ್ಯೂರ್ ಅಗರಬತ್ತಿ ಅಧೀನದ ಪ್ರೀಮಿಯಂ




ಹೋಮ್ ಫ್ರಾಗ್ರೆನ್ಸ್ ಬ್ರಾಂಡ್ ಆಗಿರುವ ಐರಿಸ್ ಹೋಮ್ ಫ್ರಾಗ್ರೆನ್ಸಸ್ ಸಂಸ್ಥೆಯು ಅರೋಮಾಥೆರಪಿ ವಿಭಾಗಕ್ಕೆ ಪ್ರವೇಶಿಸಿದ್ದು, ತನ್ನ ಹೊಸ ಅರೋಮಾಥೆರಪಿ ಉತ್ಪನ್ನಗಳನ್ನು ಬಿಡುಗಡೆ ಮಾಡಿದೆ.

ಈ ಉತ್ಪನ್ನಗಳು ಏಳು ವಿಶೇಷ ಪರಿಮಳಗಳಲ್ಲಿ ಲಭ್ಯವಿದ್ದು, ಈ ಶ್ರೇಣಿಯು ಮೂರು ಸ್ವರೂಪಗಳಲ್ಲಿ ಒಟ್ಟು ಹದಿನೆಂಟು ಉತ್ಪನ್ನಗಳನ್ನು ಒಳಗೊಂಡಿದೆ.

78 ವರ್ಷಗಳ ಕೌಟುಂಬಿಕ ಪರಂಪರೆ ಹೊಂದಿರುವ ಈ ಸಂಸ್ಥೆಯ ಉತ್ಪನ್ನ ಸಂಗ್ರಹವು ಶ್ವಾಸಕೋಶದ ಆರೋಗ್ಯವನ್ನು ಕಾಪಾಡಲು ನೆರವಾಗುತ್ತದೆ, ಒತ್ತಡ ಕಡಿಮೆ ಮಾಡಲು ಸಹಾಯ ಮಾಡುತ್ತದೆ ಮತ್ತು ಹುಮ್ಮಸ್ಸನ್ನು ಹೆಚ್ಚಿಸಲಿದೆ. ಪರಿಮಳವು ಮಾನವನ ನಡವಳಿಕೆ ಮತ್ತು ಭಾವನೆಗಳ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬ ವೈಜ್ಞಾನಿಕ ಅಧ್ಯಯನವಾಗಿರುವ ಅರೋಮಾಕಾಲಜಿ ತತ್ವಗಳ ಆಧಾರದ ಮೇಲೆ ಈ ಉತ್ಪನ್ನಗಳನ್ನು ವಿನ್ಯಾಸಗೊಳಿಸಲಾಗಿರುವುದು ವಿಶೇಷ. ಈ ಕಾಲದ ಆರೋಗ್ಯ ಅಗತ್ಯಗಳಿಗೆ ತಕ್ಕಂತೆ ಸಾಂಪ್ರದಾಯಿಕ ಚಿಕಿತ್ಸಾ ವಿಧಾನಗಳನ್ನು ಬಳಸಿಕೊಂಡು ಈ ಉತ್ಪನ್ನಗಳನ್ನು ರಚಿಸಲಾಗಿದ್ದು, ಈ ಉತ್ಪನ್ನಗಳು ಗ್ರಾಹಕರಿಗೆ ಸುರಕ್ಷಿತ, ಪರಿಣಾಮಕಾರಿ ಮತ್ತು ಸುಲಭ ಬಳಕೆಗೆ ಒದಗಿ ಬರುತ್ತವೆ. ದೈನಂದಿನ ಜೀವನಕ್ಕೆ ಶಕ್ತಿ ಮತ್ತು ನೆಮ್ಮದಿ ಒದಗಿಸುತ್ತದೆ. ಅರೋಮಾಥೆರಪಿ ಶ್ರೇಣಿಯು ಏಳು ವಿಶಿಷ್ಟ ಪರಿಮಳಗಳಲ್ಲಿ ಲಭ್ಯವಿದ್ದು, ಇವುಗಳನ್ನು ಅವುಗಳ ಚಿಕಿತ್ಸಕ ಗುಣಗಳಿಗಾಗಿ ಎಚ್ಚರಿಕೆಯಿಂದ ಆಯ್ಕೆ ಮಾಡಲಾಗಿದೆ.

ಇವುಗಳಲ್ಲಿ ಲ್ಯಾವೆಂಡರ್ ಉತ್ಪನ್ನವು ವಿಶ್ರಾಂತಿಗೆ, ಶಾಂತವಾಗಿ ನಿದ್ರೆ ಮಾಡಲು ನೆರವಾಗುತ್ತದೆ. ಯಲಂಗ್-ಯಲಂಗ್ ಪರಿಮಳವು ಮನಸ್ಥಿತಿ ಉತ್ತಮಗೊಳಿಸಿ ಹುಮ್ಮಸ್ಸು ತುಂಬಿಸುತ್ತದೆ ಮತ್ತು ಆತಂಕವನ್ನು ಕಡಿಮೆ ಮಾಡುತ್ತದೆ. ಯೂಕಲಿಪ್ಟಸ್ ಪರಿಮಳ ಶ್ವಾಸಕೋಶದ ಆರೋಗ್ಯವನ್ನು ಕಾಪಾಡಲು ನೆರವಾಗುತ್ತದೆ. ಪೆಪ್ಪರ್ ಮಿಂಟ್ ಪರಿಮಳ ಚೈತನ್ಯವನ್ನು ತುಂಬುತ್ತದೆ. ಫ್ರಾಂಕಿನ್ ಸೆನ್ಸ್ ಪರಿಮಳವು ಮನಸ್ಸನ್ನು ಶಾಂತಗೊಳಿಸುತ್ತದೆ ಧ್ಯಾನಕ್ಕೆ ಸಹಾಯ ಮಾಡುತ್ತದೆ. ಆರೆಂಜ್ ಪರಿಮಳ ಉಲ್ಲಾಸಗೊಳಿಸುತ್ತದೆ ಮತ್ತು ಒತ್ತಡವನ್ನು ನಿವಾರಿಸುತ್ತದೆ. ಲೆಮನ್‌ಗ್ರಾಸ್ ಪರಿಮಳವು ಪರಿಸರವನ್ನು ಶುದ್ಧೀಕರಿಸುತ್ತದೆ ಮತ್ತು ಚೈತನ್ಯ ಹೆಚ್ಚಿಸುತ್ತದೆ.

ಈ ಶ್ರೇಣಿಯು 3 ಸ್ವರೂಪಗಳಲ್ಲಿ ಒಟ್ಟು ಹದಿನೆಂಟು ಉತ್ಪನ್ನಗಳನ್ನು ಒಳಗೊಂಡಿದೆ. ಇದರಲ್ಲಿ 200 ಎಂಎಲ್ ಪ್ಯಾಕೇಜಿಂಗ್‌ನಲ್ಲಿ ಬಳಸಲು ಸಿದ್ಧವಾದ ನಾಲ್ಕು ಮಸಾಜ್ ತೈಲಗಳು, 10 ಎಂಎಲ್ ಪ್ಯಾಕ್‌ಗಳಲ್ಲಿ ನಾಲ್ಕು ರೋಲ್-ಆನ್ ತೈಲಗಳು ಮತ್ತು 15 ಎಂಎಲ್ ಬಾಟಲಿಗಳಲ್ಲಿ ಹತ್ತು ತೈಲಗಳು ಲಭ್ಯವಿವೆ. ಮಸಾಜ್ ತೈಲಗಳು ದೇಹಕ್ಕೆ ವಿಶ್ರಾಂತಿ, ನೆಮ್ಮದಿ, ಚಿಕಿತ್ಸಕ ಪ್ರಯೋಜನಗಳನ್ನು ಒದಗಿಸುತ್ತವೆ. ರೋಲ್-ಆನ್ ತೈಲಗಳನ್ನು ಮಣಿಕಟ್ಟು, ತಲೆಗೂದಲು ಮತ್ತು ಕಿವಿಗಳ ಹಿಂಭಾಗ ಸೇರಿದಂತೆ ನಾಡಿಮಿಡಿತದ ಸ್ಥಳಗಳಲ್ಲಿ ನೇರವಾಗಿ ಬಳಸಬಹುದಾಗಿದ್ದು, ಇವು ಒತ್ತಡದಿಂದ ಮುಕ್ತಗೊಳಿಸುತ್ತವೆ, ಉತ್ತಮ ನಿದ್ರೆ ಸಾಧ್ಯವಾಗಿಸುತ್ತವೆ. ವಿಶೇಷವಾಗಿ ಸ್ನಾಯು ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ಶಾಂತ ಉಸಿರಾಟ ಕ್ರಿಯೆ ನಡೆಯುವಂತೆ ಅನುವು ಮಾಡಿಕೊಡುತ್ತದೆ. ಇದು ಆಧುನಿಕ ಒತ್ತಡದ ಜೀವನಶೈಲಿಗೆ ಅನುಕೂಲಕರವಾಗಿವೆ. 100% ಶುದ್ಧ, ಸಾಂದ್ರಿತ ಸಸ್ಯ ಸಾರಗಳಿಂದ ತಯಾರಾದ ಎಸೆನ್ಷಿಯಲ್ ಆಯಿಲ್ ಗಳನ್ನು ಡಿಫ್ಯೂಷನ್, ಮಸಾಜ್ (ಕ್ಯಾರಿಯರ್ ತೈಲಗಳೊಂದಿಗೆ ಮಿಶ್ರಣ ಮಾಡಿದಾಗ), ಇನ್ಹಲೇಷನ್ ಅಥವಾ ಸ್ನಾನಕ್ಕೆ ಬಳಸಬಹುದು. ಇದು ಹುಮ್ಮಸ್ಸು ಹೆಚ್ಚಿಸಲು, ಶ್ವಾಸಕೋಶಕ್ಕೆ ನೆಮ್ಮದಿ ಒದಗಿಸಲು, ಶಾಂತವಾಗಿರಲು ಮತ್ತು ವಿಶ್ರಾಂತವಾಗಿರಲು ನೆರವಾಗುತ್ತದೆ. 199 ರಿಂದ ಆರಂಭವಾಗುವ ಕೈಗೆಟುಕುವ ಬೆಲೆಯಲ್ಲಿ ಅರೋಮಾಥೆರಪಿ ಶ್ರೇಣಿ ಲಭ್ಯವಿದೆ.

ಐರಿಸ್ ಅರೋಮಾ ಬುಟೀಕ್‌ಗಳು, ರಿಟೇಲ್ ಮಳಿಗೆಗಳು, ಇ-ಕಾಮರ್ಸ್ ಕ್ವಿಕ್ ಕಾಮರ್ಸ್ ಪ್ಲಾಟ್ ಫಾರ್ಮ್‌ಗಳಲ್ಲಿ, ಜೊತೆಗೆ ಸಂಸ್ಥೆಯ ವೆಬ್‌ಸೈಟ್ www.irishomefragrances.com ನಲ್ಲಿ ಈ ಉತ್ಪನ್ನಗಳು ದೊರೆಯುತ್ತದೆ.

# ರವೆ, ಈರುಳ್ಳಿ ಹಾಕಿ ಈ ದೋಸೆ ಮಾಡಿ!

## 10 ನಿಮಿಷದಲ್ಲಿ ಕ್ರಿಸ್ಪಿ ಟೇಸ್ಟಿ ದೋಸೆ ರೆಡಿ

ಬೋರಿಂಗ್ ದೋಸೆಗೆ ಗುಡ್‌ಬೈ ಹೇಳಿ. 10 ನಿಮಿಷದಲ್ಲಿ ಮಾಡಿ ಈ ಹೊಸ ಬಗೆಯ ದೋಸೆ. ಪ್ರತಿದಿನ ಒಂದೇ ರೀತಿಯ ದೋಸೆಯಿಂದ ಬೇಸರವಾಗಿದೆಯೇ ಹಾಗಿದ್ರೆ, ರುಚಿಕರವಾದ, ಸುಲಭವಾಗಿ ತಯಾರಿಸಬಹುದಾದ ಈರುಳ್ಳಿ ರವಾ ದೋಸೆ ನಿಮಗಾಗಿ. ಈ ಆರೋಗ್ಯಕರ ಮತ್ತು ಗರಿಗರಿಯಾದ ದೋಸೆ ಬೆಳಗಿನ ಟಿಫನ್ ಅಥವಾ ಸಂಜೆಯ ಲಘು ಆಹಾರಕ್ಕೆ ಅತ್ಯುತ್ತಮ ಆಯ್ಕೆ. ಬನ್ನಿ, ರವಾ ದೋಸೆಯನ್ನು ತಯಾರಿಸುವ ವಿಧಾನವನ್ನು ತಿಳಿಯೋಣ. ರವಾ ದೋಸೆ, ಸಾಮಾನ್ಯ ದೋಸೆಗಿಂತ ಭಿನ್ನವಾಗಿರುತ್ತದೆ. ಮುಖ್ಯವಾಗಿ ಕೆಲವೇ ನಿಮಿಷಗಳಲ್ಲಿ ಸಿದ್ಧವಾಗುತ್ತದೆ. ಇದನ್ನು ತಯಾರಿಸುವುದು ಕೂಡಾ ಅತೀ ಸುಲಭ. ಮನೆಯಲ್ಲಿಯೇ ಹಂತ ಹಂತವಾಗಿ ಸಿದ್ಧಪಡಿಸುವ ಮೂಲಕ ಈ ಸ್ವಾದಿಷ್ಟಕರ ರವಾ ದೋಸೆಯನ್ನು ತೆಂಗಿನಕಾಯಿ ಚಟ್ನಿ ಮತ್ತು ಟೀ ಅಥವಾ ಕಾಫಿಯೊಂದಿಗೆ ಸವಿಯಬಹುದು.



**ಈರುಳ್ಳಿ ರವಾ ದೋಸೆ ತಯಾರಿಸುವ ವಿಧಾನ**

ಮೊದಲಿಗೆ ಒಂದು ಸಣ್ಣ ಪಾತ್ರೆಯಲ್ಲಿ 1 ಸ್ಪೂನ್ ಎಣ್ಣೆ ಹಾಕಿ ಬಿಸಿ ಮಾಡಿ. ಅದಕ್ಕೆ ಜೀರಿಗೆ ಹಾಕಿ, ಸಿಡಿಯಲು ಬಿಡಿ. ಬಳಿಕ ಒಲೆ ಆಫ್ ಮಾಡಿ. ಈಗ ತುರಿದ ತೆಂಗಿನಕಾಯಿ ಹಾಕಿ, ಪಾತ್ರೆಯ ಬಿಸಿಯಲ್ಲೇ ಕೆಲವು ನಿಮಿಷ ಹುರಿಯಿರಿ. ಈಗ ಮಧ್ಯಮ ಗಾತ್ರದ ಬೌಲ್‌ಗೆ ರವೆ, ಅಕ್ಕಿ ಹಿಟ್ಟು, ಮೈದಾ, ಹಸಿ ಮೆಣಸಿನಕಾಯಿ, ಕಾಳುಮೆಣಸು, ಹೆಚ್ಚಿದ ಈರುಳ್ಳಿ, ಸೀಳಿದ ಕರಿಬೇವಿನ ಎಲೆಗಳು, ಕೊತ್ತಂಬರಿ ಸೊಪ್ಪು, ಹುರಿದ ಜೀರಿಗೆ, ತೆಂಗಿನಕಾಯಿ ಮತ್ತು ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ಇದಾದ ಬಳಿಕ, ನಿಧಾನವಾಗಿ ಮಜ್ಜಿಗೆ ಸೇರಿಸುತ್ತಾ, ಹಿಟ್ಟು ಗಂಟುಗಳಾಗದಂತೆ ಕೈಯಾಡಿಸಿ.

ಹಿಟ್ಟು ತೆಳುವಾಗಿರಬೇಕು. ಆಗ ಮಾತ್ರ ದೋಸೆ ತಾನಾಗಿಯೇ ಹರಡುತ್ತದೆ. ಈಗ ಸಿದ್ಧಪಡಿಸಿದ ಹಿಟ್ಟನ್ನು 15 ನಿಮಿಷಗಳ ಕಾಲ ಹಾಗೆಯೇ ಬಿಡಿ. ಈ ಸಮಯದಲ್ಲಿ ಹಿಟ್ಟು ಸ್ವಲ್ಪ ಗಟ್ಟಿಯಾಗಬಹುದು. ಅಗತ್ಯವೆನಿಸಿದರೆ, ಸ್ವಲ್ಪ ನೀರು ಸೇರಿಸಿ ಮತ್ತೊಮ್ಮೆ ತೆಳುಗೊಳಿಸಿ. ನಾನ್ ಸ್ಟಿಕ್ ಹೆಂಚನ್ನು ಮಧ್ಯಮ ಉರಿಯಲ್ಲಿ ಬಿಸಿ ಮಾಡಿ. ಹೆಂಚಿನ ಮೇಲೆ ಸ್ವಲ್ಪ ನೀರು ಚಿಮುಕಿಸಿ. ನೀರು ಸಿಡಿದರೆ ಹೆಂಚು ದೋಸೆ ಹಾಕಲು ಸಿದ್ಧವಾಗಿದೆ ಎಂದರ್ಥ.

ಈಗ ಒಂದು ಸೌಟು ಹಿಟ್ಟನ್ನು ತೆಗೆದುಕೊಂಡು ಹೆಂಚಿನ ಅಂಚಿನಿಂದ ಮಧ್ಯಕ್ಕೆ ಸುರಿಯಿರಿ.

ಹಿಟ್ಟು ತಾನಾಗಿಯೇ ಹರಡುತ್ತದೆ. ರವಾ ದೋಸೆಯನ್ನು ಸಾಮಾನ್ಯ ದೋಸೆಯಂತೆ ಹರಡಬೇಕಿಲ್ಲ. ಹಾಗಾಗಿ ಹಿಟ್ಟು ತೆಳುವಾಗಿರುವುದು ಮುಖ್ಯ. ದೋಸೆಯ ಸುತ್ತಲೂ ಸ್ವಲ್ಪ ಎಣ್ಣೆ ಹಾಕಿ. ಮಧ್ಯಮ ಉರಿಯಲ್ಲಿ ಕೆಳಭಾಗವು ಗೋಲ್ಡ್ ಕಲರ್ ಬರುವವರೆಗೆ ಗರಿಗರಿಯಾಗುವವರೆಗೆ ಬೇಯಿಸಿ. ರವಾ ದೋಸೆಯನ್ನು ಕೇವಲ ಒಂದು ಬದಿಯಲ್ಲಿ ಬೇಯಿಸಲಾಗುತ್ತದೆ. ಬೆಂದ ನಂತರ ಅದನ್ನು ಮಡಚಿ ಪಾತ್ರೆಗೆ ಹಾಕಿ. ಇಷ್ಟು ಮಾಡಿದರೆ ಸಾಕು, ಬಿಸಿ ಬಿಸಿಯಾದ ಈರುಳ್ಳಿ ರವಾ ದೋಸೆ ಸಿದ್ಧ. ಇದನ್ನು ತೆಂಗಿನಕಾಯಿ ಚಟ್ನಿ ಮತ್ತು ಫಿಲ್ಟರ್ ಕಾಫಿಯೊಂದಿಗೆ ಸವಿಯಬಹುದು. ಮಕ್ಕಳ ಟಿಫನ್ ಬಾಕ್ಸ್‌ಗೂ ಸಹ ಹಾಕಬಹುದು.

**ಈರುಳ್ಳಿ ರವಾ ದೋಸೆಗೆ ಬೇಕಾಗುವ ಸಾಮಗ್ರಿಗಳು**

- ಹುರಿದ ರವೆ - 1/2 ಕಪ್
- ಹುರಿದ ಅಕ್ಕಿ ಹಿಟ್ಟು - 1/2 ಕಪ್
- ಮೈದಾ - 1/3 ಕಪ್
- ಹಸಿ ಮೆಣಸಿನಕಾಯಿ - 2 (ಸಣ್ಣಗೆ ಹೆಚ್ಚಿದ್ದು)
- ಈರುಳ್ಳಿ - 1 ಕಪ್ (ಸಣ್ಣಗೆ ಹೆಚ್ಚಿದ್ದು)
- ಕಾಳುಮೆಣಸು - 1 ಸ್ಪೂನ್
- ಕೊತ್ತಂಬರಿ ಸೊಪ್ಪು - 2 ಕಡ್ಡಿ (ಸಣ್ಣಗೆ ಹೆಚ್ಚಿದ್ದು)
- ಕರಿಬೇವಿನ ಎಲೆಗಳು - 1 ಕಡ್ಡಿ (ಸೀಳಿದ್ದು)
- ಮಜ್ಜಿಗೆ - 2 ಕಪ್
- ಎಣ್ಣೆ - 1 ಸ್ಪೂನ್
- ಜೀರಿಗೆ - 1 ಸ್ಪೂನ್
- ತುರಿದ ತೆಂಗಿನಕಾಯಿ - 1 ಸ್ಪೂನ್
- ಉಪ್ಪು - ರುಚಿಗೆ ತಕ್ಕಷ್ಟು



**ಸಾಮಾಜಿಕ ಕಳಕಳಿ**

**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

## ಜನುಮದಿನದ ಶುಭಾಶಯಗಳು



ದಿನವದುವೆ ಕಳೆಯುವುದು ಸಹಜವದು ಬದುಕಿನಲಿ
ಮನದಲ್ಲಿ ಸಾಧನೆಯ ಆಸೆಯಿರಲು
ಸನಿಹದಲಿ ಸ್ನೇಹಿತರ ದಂಡಿರುತ ಸಾಗುತಲಿ
ಮುನಿಯದೆಲೆ ಹೋಗುತಿರೆ ಚಂದವದುವೆ .....
ಹಲವು ಕ್ಷೇತ್ರಗಳಲ್ಲಿ ತನ್ನದೇ ಸಾಧನೆಯ ಮಾಡುತಲಿ
ಸಾಗುತಿರೆ ಒಳ್ಳೆಯ ದಾರಿಯಲಿ ಬದುಕಿನಲಿ
ಸಾಧನೆಯು ಬಹಳಿಹುದು ಎಂದು ಅರಿಯುತ
ಛಲ ಬಿಡದ ಛಲಗಾರನಾಗಿ ಸಾಗುತ...
ಜನುಮದಿನದ ಶುಭಾಶಯಗಳು ಹೇಳುತಲಿ
ನೂರಾರು ಕಾಲ ಸಂತೋಷವಾಗಿ ಬಾಳುತಲಿರಿ
ನಿಮ್ಮ ಆಸೆ ಆಕಾಂಕ್ಷಿಗಳೆಲ್ಲ ಈಡೇರುತಲಿರಲಿ
ನಿಮ್ಮ ಕೆಲಸ ಇತರರಿಗೆ ಪ್ರೇರಣದಾಯಕವಾಗಿರಲಿ....
ಎಲ್ಲೆಡೆಯೂ ನಿಮ್ಮ ಹೆಸರು ಪಸರಿಸುತಲಿ
ತನ್ನದೇ ನಿಲುವಿನ ಸ್ಥಾನ ನಿಮ್ಮದಾಗಲಿ
ಹಲವು ಜನರಿಗೆ ಮಾರ್ಗದರ್ಶಕರಾಗುತಲಿ
ಸದಾ ಕಾಲ ಯಶಸ್ಸು ನಿಮ್ಮದಾಗಿರಲಿ.....

# ಆಗಸ್ಟ್-ಸೆಪ್ಟೆಂಬರ್ ಹಣ ಶೀಘ್ರ ಬಿಡುಗಡೆ; ಅಕ್ಕ ಪಡೆ ಕುರಿತು ಲಕ್ಷ್ಮಿ ಹೆಬ್ಬಾಳ್ಕರ್ ಮಾತು!

• **ಉದಯವಾಹಿನಿ, ಬೆಂಗಳೂರು**



ಕರ್ನಾಟಕ ಕಾಂಗ್ರೆಸ್ ಸರ್ಕಾರದ ಪ್ರಮುಖ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯ ಆಗಸ್ಟ್-ಸೆಪ್ಟೆಂಬರ್ ತಿಂಗಳ ಹಣ ಬಿಡುಗಡೆ ಕುರಿತು ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಮಹತ್ವದ ಮಾಹಿತಿ ನೀಡಿದ್ದಾರೆ. ಬೆಂಗಳೂರಿನಲ್ಲಿ ಈ ಕುರಿತು ಮಾತನಾಡಿಗ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಈವರೆಗೆ 21 ಕಂತುಗಳ ಗೃಹಲಕ್ಷ್ಮಿ ಹಣವನ್ನು ಫಲಾನುಭವಿಗಳ ಖಾತೆಗೆ ಜಮೆ ಮಾಡಿದ್ದೇವೆ. ಸುಮಾರು 1 ಕೋಟಿ 24 ಲಕ್ಷ ಮಹಿಳೆಯರು ನಮ್ಮ ಯೋಜನೆಯ ಸದುಪಯೋಗ ಪಡೆದುಕೊಂಡಿದ್ದಾರೆ ಎಂದರು. ಅಂತೆಯೇ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳ ಗೃಹಲಕ್ಷ್ಮಿ ಹಣವನ್ನು ಶೀಘ್ರವೇ ಬಿಡುಗಡೆ ಮಾಡುತ್ತೇವೆ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಮಾಹಿತಿ ನೀಡಿದರು.

**ಅಕ್ಕ ಪಡೆ ಕುರಿತು ಮಾತು!:** ಇದೇ ವೇಳೆ ಇಂದು ಕಾರ್ಕಳ ತಾಲ್ಲೂಕು ಬೈಲೂರಿನಲ್ಲಿ ನೀರೆ ಕಣಜಾರು ಗ್ರಾಮ ಪಂ ನೂತನ ಆಡಳಿತ ಕಟ್ಟಡ ಗ್ರಾಮ ಸೌಧದ ಉದ್ಘಾಟನಾ ಸಮಾರಂಭಕ್ಕೆ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದಲ್ಲಿ ಮಹಿಳೆಯರು, ಮಕ್ಕಳ ರಕ್ಷಣೆಗಾಗಿ ಶೀಘ್ರವೇ ಅಕ್ಕ ಪಡೆಯನ್ನು ರಚಿಸಲಾಗುತ್ತಿದೆ.

ಇದು ವ್ಯವಸ್ಥಿತವಾಗಿ ಮಕ್ಕಳು, ಮಹಿಳೆಯರು, ವೃದ್ಧರಿಗೆ ಸ್ಪಂದಿಸಲಿದೆ ಎಂದರು.




• ಹಿಂದಿನ ಸಂಚಿಕೆಯಿಂದ

## 119 ನೆಯ ಅಧ್ಯಾಯ

ನೆಳಲೂ ನೀರೂ ಯಾರಿಗೂ ರುಚಿಸವು ಮತ್ತು ಹಗಲುಹೊತ್ತು ಮಂಜುಮುಸುಕಿದ ಸೂರ್ಯನುಳ್ಳದ್ದಾಗಿ ಇಬ್ಬನಿಯೊಡನೆ ಕೂಡಿಕೊಂಡು ಅತ್ಯಂತ ಶೈತ್ಯವಾದ ಗಾಳಿ ಬೀಸುವುದು. ಪ್ರಾಣಿಸಂಚಾರವಿಲ್ಲದೆ ಆರಣ್ಯಗಳು ಹಿಮದಿಂದ ಮುಚ್ಚಲ್ಪಟ್ಟಿರುವುವು. ಸೂರ್ಯನು ಕಾಂತಿಗುಂದಿರುವನು. ಹೊಗೆಯಿಂದ ಮುಚ್ಚಲ್ಪಟ್ಟ ಕನ್ನಡಿಯಂತೆ ಚಂದ್ರನು ಕಾಂತಿಗುಂದಿರುವನು. ಬೆಳದಿಂಗಳು ಇಬ್ಬನಿಯಿಂದ ಮುಚ್ಚಲ್ಪಟ್ಟು ಹುಣ್ಣಿಮೆಯ ದಿನದಲ್ಲೂ ಪ್ರಕಾರರಹಿತವಾಗಿರುವುದು. ಬಿಸಿಲು ಹಿಮದಿಂದ ಕಾಣಿಸದೆ ಇರುವುದು. ವನಗಳಲ್ಲಿ ಇಬ್ಬನಿಯು ತೊಟ್ಟು ತೊಟ್ಟಾಗಿ ಬೀಳುತ್ತಿರುವುದು. ಯವೆ ಗೋಧಿ ಮೊದಲಾದ ಪೈರುಗಳು ಸ್ವರಗೈಯುವ ಕ್ರೌಂಚಪಕ್ಷಿಗಳಿಂದ ಮನೋಹರವಾಗಿರುವುವು. ಭತ್ತದ ತೆನೆಗಳು ಖರ್ಜೂರ ಪುಷ್ಪಗಳಂತೆ ಸುವರ್ಣಕಾಂತಿಯುಳ್ಳವಾಗಿ ಬಗ್ಗಿರುವುವು.ಇಬ್ಬನಿಕೂಡಿದ ಕಿರಣಗಳಿಂದ ಮಂದಕಾಂತಿಯುಳ್ಳ ಸೂರ್ಯನು ಚಂದ್ರನಂತೆ ಒಪ್ಪುತ್ತಿರುವನು. ಈ ಹೇಮಂತಕಾಲದಲ್ಲಿ ಬಿಸಿಲು ಪ್ರಾತಃಕಾಲದಲ್ಲಿ ಸೇವಿಸಲು ಯೋಗ್ಯವಲ್ಲದೆ ಮಧ್ಯಾಹ್ನ ಕಾಲದಲ್ಲಿ ಸೇವಿಸುವುದಕ್ಕೆ ಯೋಗ್ಯವಾಗಿರುವುದು. ಈ ಕಾಲದಲ್ಲಿ ಕಾಡಾನೆಗಳು ಅತ್ಯಂತ ಕಂಗೆಟ್ಟು ಉದಕಪಾನ ಮಾಡಬೇಕೆಂದು ನದೀತೀರಕ್ಕೆ ಹೋಗಿ ನೀರಿನಲ್ಲಿ ಸೊಂಡಿಲುಗಳನ್ನೂರಿ ಉದಕಶೈತ್ಯವನ್ನು ಸಹಿಸಲಾರದೆ ಸೊಂಡಿಲುಗಳನ್ನು ಮೇಲಕ್ಕೆ ತೆಗೆದುಕೊಳ್ಳುವುವು. ಹೇಡಿಗಳು ರಣರಂಗವನ್ನು ಪ್ರವೇಶಿಸುವುದಕ್ಕೆ ಭಯಪಡುವಂತೆ ಜಲಚರಪಕ್ಷಿಗಳು ನೀರೊಳಗೆ ಮುಳುಗಲಂಜಿ ತಡಿಗಳಲ್ಲಿ ಎಳೆಯ ಬಿಸಿಲನ್ನು ಕಾಯಿಸುತ್ತಿರುವುವು.

ಈ ಹೇಮಂತಕಾಲದಲ್ಲಿ ಭರತನು ನಿನ್ನ ಮೇಲಣ ಭಕ್ತಿಯಿಂದ ಧರ್ಮಯುಕ್ತನಾಗಿ ಅತ್ಯಂತ ದುಃಖದಿಂದ ರಾಜ್ಯವನ್ನು ಬಿಟ್ಟು ಮಾನಾವಮಾನಗಳನ್ನು ತೊರೆದು ಸಮಸ್ತ ಭೋಗಗಳಲ್ಲಿಯೂ ಆಶೆಯಿಲ್ಲದವನಾಗಿ ಆಹಾರ ನಿಯಮವನ್ನು ಮಾಡಿಕೊಂಡು ತಪಸ್ವಿಯಾಗಿ ಭೂಶಯನವನ್ನು ಮಾಡಿಕೊಂಡಿರುವನು. ಆತನು ಈ ಹೇಮಂತಕಾಲದಲ್ಲಿ ಸಮಸ್ತ ಪ್ರಧಾನಿಗಳನ್ನೂ ಕೂಡಿಕೊಂಡು ಸರಯೂನದಿಗೆ ಸ್ನಾನವನ್ನು ಮಾಡುವುದಕ್ಕೆ ಹೋಗುವನು.

ಸುಕುಮಾರಾಂಗನಾದ ಭರತನು ಪ್ರಾತಃಕಾಲದಲ್ಲಿ ಸರಯೂನದಿಗೆ ಹೋಗಿ ಹೇಗೆ ತಾನೆ ಸ್ನಾನವನ್ನು ಮಾಡುವನು ಪದ್ಮದಳಾಯತಾಕ್ಷನಾಗಿಯೂ ನೀಲಮೇಘ ಶ್ಯಾಮನಾಗಿಯೂ ಸಮಸ್ತ ಪ್ರಾಣಿಗಳಿಗೂ ಪ್ರಿಯೋಕ್ತಿಗಳನ್ನೇ ನುಡಿಯುವವನಾಗಿಯೂ ಋಜುಮಾರ್ಗಿಯಾಗಿ ಶತ್ರುಸಂಹಾರಕನಾಗಿಯೂ ಇರುವ ದೀರ್ಘಾಯುಷ್ಮಂತನಾದ ಭರತನು ಅಂತಃಕರಣಶುದ್ಧಿಯಿಂದ ಧರ್ಮವನ್ನೇ ಕೈ ಹಿಡಿದು ತಪೋವನದಲ್ಲಿರುವ ನಿನ್ನನ್ನೇ ಧ್ಯಾನಮಾಡುತ್ತ ಸ್ವರ್ಗಾದಿ ಲೋಕಗಳನ್ನೂ ಬಯಸದಿರುವನು. ಲೋಕದಲ್ಲಿ ಮನುಷ್ಯರು ತಾಯಿಯ ಬುದ್ಧಿಯನ್ನು ಪಡೆಯುತ್ತಾರೆ. ತಂದೆಯದನ್ನಲ್ಲ ಎಂಬ ವಾರ್ತೆಯನ್ನು ತೊಲಗಿಸಿ ವಿರಕ್ತನಾಗಿ ಸಮಸ್ತ

ಮುಂದುವರಿಯುವುದು...



**ಕಲಾ ಸಾಹಿತ್ಯ**

**ಕೃಷ್ಣಪ್ಪ** ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ಪಂಚಭೂತಗಳ ಒಡೆಯರು ಯಾರು ಇವುಗಳು ಯಾರ ಅಧೀನದಲ್ಲಿವೆ, ಯಾರ ಸ್ವತ್ತು

■ **ಉದಯವಾಹಿನಿ, ವಿಶೇಷ**

ಪಂಚಭೂತಗಳಾದ ಭೂಮಿ, ಆಕಾಶ, ಗಾಳಿ, ನೀರು ಬೆಂಕಿ ಇವುಗಳು ಪ್ರಕೃತಿದತ್ತವಾಗಿ, ದೈವದತ್ತವಾಗಿ ಸೃಷ್ಟಿಯಾಗಿರುವ ಸೃಷ್ಟಿಯ ಸ್ವತ್ತು ಸೃಷ್ಟಿಯೇ ಇವುಗಳ ಒಡೆಯ. ಸಕಲಿಷ್ಟು ಜೀವರಾಶಿಗಳಿಗೆ ಜೀವನಾಧಾರ ಹಾಗೂ ಏನನ್ನೂ ಅಪೇಕ್ಷಪಡದ ಉಚಿತವಾಗಿ ನೀಡಿರುವ ಪ್ರಕೃತಿಯ ಕೊಡುಗೆ ಹಾಗೂ ಬಳುವಳಿ. ಹೀಗಿರುವಲ್ಲಿ ಜಗತ್ತಿನಲ್ಲಿರುವ, ರಾಷ್ಟ್ರದಲ್ಲಿರುವ ಹಾಗೂ ರಾಜ್ಯದಲ್ಲಿರುವ ಕೆಲವು ಮಹಾಶಯರು ನಾವೇ ಇವುಗಳ ಒಡೆಯರು ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಒಂದು ವೇಳೆ ಈ ಪಂಚಭೂತಗಳು ಈ ಕೆಳಕಂಡಂತಹ ಮಹಾಶಯರಿಗೆ ಹಸ್ತಾಂತರಿಸಿದ್ದರೆ; **ಉದಾಹರಣೆಗೆ :** ಹಿಟ್ಲರ್, ಮುಸಲೋನಿ,ಅಲೆಕ್ಸಾಂಡರ್, ನೆಪೋಲಿಯನ್, ಸದ್ದಾಮ್ ಹುಸೇನ್, ಗಡಾಫಿ ಇನ್ನೂ ಇತರೆ ಸರ್ವಾಧಿಕಾರಿಗಳಂತೆ ಮೆರೆದು ಮಣ್ಣಾದ ಇಂತಹ ಸಮಕಾಲೀನರ ವ್ಯಾಪ್ತಿಯಲ್ಲಿ ನಾವುಗಳು ಬದುಕಬೇಕಾಗಿತ್ತು.

ಆದರೆ ಇವುಗಳು ಯಾರ ಸ್ವತ್ತೂ ಅಲ್ಲ, ಒಡೆಯರೂ ಅಲ್ಲ ಹಾಗೂ ಮಾಲೀಕರೂ ಅಲ್ಲ. ಅವುಗಳ ಅಡಿಯಲ್ಲಿ ಪ್ರಕೃತಿಯ ಕೊಡುಗೆಯನ್ನು ನಾವುಗಳು ಉಪಯೋಗಿಸಿಕೊಂಡು ಸುಂದರವಾದ ಬದುಕನ್ನು ಕಟ್ಟಿಕೊಂಡು ಬದುಕಬೇಕು. ಮಾನವ ಸೇರಿ ಸಕಲಿಷ್ಟು ಜೀವರಾಶಿಗಳೂ ಕೂಡ ಜೀವಿಸಲು ಸೃಷ್ಟಿಕರ್ತನ ಋಣದಲ್ಲಿ ಹುಟ್ಟು ಸಾವುಗಳ ಮಧ್ಯೆ ಬದುಕನ್ನು ಕಟ್ಟಿಕೊಂಡು ಜೀವಿಸಬೇಕು.

ಸೃಷ್ಟಿಕರ್ತನ ಋಣವನ್ನು ತೀರಿಸಲು ಪ್ರಾಣಿ-ಪಕ್ಷಿ ಗಳು ಹೊರತುಪಡಿಸಿ ಮನುಷ್ಯನಿಂದ ತೀರಿಸಲು ಸಾಧ್ಯವೇ ಇಲ್ಲ.



ಕಡೆಗಾಲಕ್ಕೆ ಭೂಮಿಯ ಋಣ, ಗಾಳಿಯ ಋಣ, ನೀರಿನ ಋಣದಲ್ಲಿಯೇ ಜೀವಿಸುತ್ತಾ ಮುಕ್ತಿ ಕಾಣದೇ ಮಣ್ಣಲ್ಲಿ ಮಣ್ಣಾಗುತ್ತೇವೆ. ನಾವೇನು ಅವುಗಳ ಪಾಲುದಾರರಲ್ಲ ಆದರೆ ಇಲ್ಲಿ ಸ್ವಂತದ್ದು ಅಂತ ಯಾರದ್ದು ಇಲ್ಲ. ಸುಮ್ಮನೆ ಮಾನವ ನನ್ನದು- ನನ್ನದು ಎಂದು ಭೂಮಿ ಮೇಲೆ ಬಡಿದಾಡುತ್ತಿರುತ್ತಾನೆ . ಬಡಿದಾಡುವ ಮನುಷ್ಯರನ್ನು ನೋಡಿ ಸೃಷ್ಟಿಕರ್ತ ನಗುತ್ತಾನೆ. ಹಾಗೂ ಮನುಷ್ಯರಿಗಿಂತ ಪಶುಪಕ್ಷಿಗಳೇ ಮೇಲೆಂದು ಅಂದುಕೊಳ್ಳುತ್ತಾನೆ. ಪಶುಪಕ್ಷಿಗಳಿಗೆ ಆಯಸ್ಸು ಕಡಿಮೆ ಆದರೆ ಮನುಷ್ಯನಿಗೆ ಆಯಸ್ಸು (ಜಾಸ್ತಿ) ಶತಮಾನ. ಇಲ್ಲಿ ಒಂದು ವಿಶೇಷ:= ಪಶು-ಪಕ್ಷಿಗಳು ಸೃಷ್ಟಿಕರ್ತ ನಿಗದಿಮಾಡಿದ ಆಯಸ್ಸನ್ನು ಬಹಳ ಅರ್ಥಪೂರ್ಣವಾಗಿ ಮುಗಿಸಿ ಸೃಷ್ಟಿಕರ್ತನಿಗೆ ಗೌರವ ನೀಡುತ್ತವೆ. ಅದೇ ಮಾನವನಿಗೆ ನಿಗದಿಮಾಡಿದ ಆಯಸ್ಸನ್ನು ಮಾನವ ಪೂರ್ತಿ ಮಾಡದೇ ಮಧ್ಯೆ-ಮಧ್ಯವಯಸ್ಸಿನಲ್ಲಿ ಕಳಚಿ ಕೊಳ್ಳುತ್ತಾ ಸೃಷ್ಟಿಕರ್ತನಿಗೆ ಅಗೌರವ ತೋರಿಸುತ್ತಾನೆ ಎಂತಹ ವಿಪರ್ಯಾಸ. ಮಾನವ ಭೂಮಿಯ ಮೇಲೆ ಸೃಷ್ಟಿಯ ವಿರುದ್ಧ, ಪ್ರಕೃತಿಯ ವಿರುದ್ಧ ಮಾಡಬಾರದನ್ನೆಲ್ಲಾ ಮಾಡಿ ಸ್ವರ್ಗದಂತಿರುವ ಭೂಮಿಯನ್ನು ನರಕ ಮಾಡುತ್ತಾನೆ.

ಮಿಗಿಲಾಗಿ ಜೀವಿಸಲು ಅತ್ಯಂತ ಉಪಯುಕ್ತವಾದ ಗಾಳಿ ಮತ್ತು ನೀರನ್ನು ಮಲಿನ ಮಾಡುತ್ತಾನೆ. ಜಗತ್ತು ಸೃಷ್ಟಿಕರ್ತನಿಂದ ಸೃಷ್ಟಿಯಾಗಿದ್ದು ಸರಿ ಆದರೆ ಜಗತ್ತು ನಾಶವಾಗಬೇಕಾದರೆ ಅದೇ ಮನುಷ್ಯನಿಂದಲೇ!

ಉದಾಹರಣೆಗೆ :=ಜಗತ್ತಿನ ಎಲ್ಲಾ ಪ್ರಬಲ ರಾಷ್ಟ್ರಗಳು ಅಣುಬಾಂಬು, ಪರಮಾಣು ಬಾಂಬು, ಹೈಡ್ರೋಜನ್ ಬಾಂಬ್, ಅಣ್ವಸ್ತ್ರಗಳನ್ನು ಸಿದ್ಧಪಡಿಸಿಕೊಂಡಿದ್ದಾರೆ. ಕಾರಣ ಮನುಕುಲ ಜಗತ್ತನ್ನು ನಾಶಮಾಡುವ ಪ್ರಬಲ ಶಕ್ತಿಗಳನ್ನು ಇಟ್ಟುಕೊಂಡು ಸಿದ್ದರಾಗಿ ಪಂಚಭೂತಗಳಿಗೆ ಸೆಡ್ಡು ಹೊಡೆಯಲು ಹೊಸ್ತಿಲಿನಲ್ಲಿದ್ದಾರೆ ಎಂತಹ ವಿಪರ್ಯಾಸ. ಮಾನವ ಬಹುತೇಕ ಪ್ರಕೃತಿಯನ್ನು ನಾಶ ಮಾಡಿದ್ದಾಯಿತು ಆದರೆ ಸೃಷ್ಟಿಕರ್ತ ಮಾನವನ ಅದೀನದಲ್ಲಿಲ್ಲ. ಒಂದು ವೇಳೆ ಸೃಷ್ಟಿಕರ್ತ ಮಾನವನ ಅಧೀನದಲ್ಲಿ ಇದ್ದಿದ್ದರೆ ಇಡೀ ಭೂಮಂಡಲವೇ ನರಕ ಸದೃಶ್ಯವಾಗುತ್ತಿತ್ತು. ಇಲ್ಲಿ ಮಾನವನ ಕೊಡುಗೆ ಏನೇನೂ ಇಲ್ಲ ಇರುವುದನ್ನ ಸದ್ಬಳಕೆ ಮಾಡಿಕೊಂಡು ಜೀವಿಸಿದ್ದರೆ ಸಾಕು, ಅದೇ ನೀವು ಸೃಷ್ಟಿಕರ್ತನಿಗೆ ಕೊಡಬೇಕಾಗಿರುವ ಗೌರವ. ಇಂತಹ ಸಾಮಾನ್ಯ ಜ್ಞಾನ ಇಲ್ಲದ ಕೆಲವು ಮನುಷ್ಯರು ಭೂಮಿಯ ಮೇಲೆ ಸರ್ವಾಧಿಕಾರಿಗಳಂತೆ ವರ್ತಿಸುತ್ತಾ ದೆವ್ವ, ಪಿಶಾಚಿ, ರಾಕ್ಷಸ ರೀತಿ ಪರಿವರ್ತನೆಯಾಗಿದ್ದಾರೆ. ಈ ಭೂಮಿಯ ಮೇಲೆ ನನ್ನದೂ ಅಂತ ಏನೇನೂ ಇಲ್ಲ.

ಹಕ್ಕಿಗಳು ವಾಸಿಸಲು ಗೂಡು ಹೇಗೆ ಕಟ್ಟಿಕೊಳ್ಳುತ್ತವೆಯೋ ಅದೇ ರೀತಿ ಮಾನವ ವಾಸಿಸಲು ಮನೆಯನ್ನು ಕಟ್ಟಿಕೊಳ್ಳುತ್ತಾನೆ. ಆದರೆ ಆ ಮನೆಯ ತಾತ್ಕಾಲಿಕ ಮಾಲೀಕರೇ ಹೊರತು ಶಾಶ್ವತ ಮಾಲೀಕರು ನಾವಲ್ಲ. ನಾವುಗಳು ಈ ಭೂಮಿಗೆ ಬರುವುದಕ್ಕಿಂತ ಮುಂಚೆ ಈ ಜಗತ್ತು ಇತ್ತು ನಾವುಗಳು ಹೋದಮೇಲೂ ಕೂಡ ಈ ಜಗತ್ತು ಇರುತ್ತದೆ ಎಂಬ ಸಾಮಾನ್ಯ ಜ್ಞಾನ ಮಾನವನಿಗೆ ಅರಿವಿರಬೇಕು. ಈ ಭೂಮಿ ಒಂದು ರಂಗಮಂಟಪ.

**ನಾವುಗಳು ಪಾತ್ರದಾರಿಗಳೇ ವಿನಹ:** ಸೂತ್ರದಾರಿ ಅಲ್ಲ ಆ ಸೃಷ್ಟಿಕರ್ತನೇ ಸೂತ್ರದಾರಿ. ಸೃಷ್ಟಿಕರ್ತನಿಗೆ ಸಾವಿಲ್ಲ ಒಂದು ವೇಳೆ ಸೃಷ್ಟಿಕರ್ತನಿಗೆ ಸಾವು ವ್ಯಾಪಿಸಿದರೆ ಆಗ ಇಡೀ ಜಗತ್ತೇ ಪ್ರಳಯ ಹಾಗೂ ಸರ್ವನಾಶ. ಒಟ್ಟಾರೆ ಪಂಚಭೂತಗಳ ಒಡೆಯ ಆ ಸೃಷ್ಟಿಕರ್ತ ಹಾಗೂ ಅವುಗಳು ಸೃಷ್ಟಿಕರ್ತನ ಸ್ವತ್ತು ಎಂಬ ಕನಿಷ್ಠ ಸಾಮಾನ್ಯ ಜ್ಞಾನ ಜಗತ್ತಿನ ಪ್ರತಿಯೊಬ್ಬ ಮಾನವನಿಗಿರಬೇಕು. ಆಗ ನಾವುಗಳು ಮನುಷ್ಯರಾಗಿ ಹುಟ್ಟಿದ್ದಕ್ಕೂ ಸಾರ್ಥಕವಾದ ಬದುಕಾಗುತ್ತದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ಪ್ರಮುಖ ಜನರು ವಿಶೇಷವರ್ಗ ಹೊಂದಿರುವ ಯಾವುದಕ್ಕಾದರೂ ಹಣಕಾಸು ನೀಡಲು ಸಿದ್ಧವಾಗಿರುತ್ತಾರೆ.

**ವೃಷಭ** ಸಾಧ್ಯವಾದರೆ ದೀರ್ಘ ಪ್ರಯಾಣವನ್ನು ತಪ್ಪಿಸಿ. ಏಕೆಂದರೆ ನೀವು ಪ್ರಯಾಣಿಸಲು ತುಂಬಾ ದುರ್ಬಲರಾಗಿದ್ದೀರಿ ಹಾಗೂ ಇದು ಮತ್ತಷ್ಟು ನಿಮ್ಮನ್ನು ದುರ್ಬಲಗೊಳಿಸುತ್ತದೆ.

**ಮಿಥುನ** ಅನಂತ ಚೈತನ್ಯ ಮತ್ತು ಉತ್ಸಾಹ ನಿಮ್ಮನ್ನು ಆವರಿಸುತ್ತದೆ ಮತ್ತು ನೀವು ಯಾವುದೇ ಅವಕಾಶವನ್ನು ನಿಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತೀರಿ. ಯಾವುದೇ ಹಳೆಯ ಸ್ನೇಹಿತ ನಿಮ್ಮ ಬಳಿ ಹಣವನ್ನು ಕೇಳಬಹುದು.

**ಕರ್ಕಾಟಕ** ಮಾತನಾಡುವ ಮುನ್ನ ಯೋಚಿಸಿ. ತಿಳಿಯದೆ ನಿಮ್ಮ ಅಭಿಪ್ರಾಯಗಳು ಬೇರೊಬ್ಬರ ಭಾವನೆಗಳಿಗೆ ಧಕ್ಕೆಯುಂಟು ಮಾಡಬಹುದು. ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ.

**ಸಿಂಹ** ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸಲು ನಿರಾಕರಿಸಿ. ಇದು ಅನಾರೋಗ್ಯದ ವಿರುದ್ಧ ಪ್ರಬಲ ಚುಚ್ಚುಮದ್ದು. ನಿಮ್ಮ ಸರಿಯಾದ ಮನೋಭಾವ ತಪ್ಪು ಮನೋಭಾವವನ್ನು ಸೋಲಿಸುತ್ತದೆ.

**ಕನ್ಯಾ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ಹಣಕಾಸು ಲಾಭಗಳು ವಿವಿಧ ಮೂಲಗಳಿಂದ ಬರುತ್ತವೆ. ನಿಮ್ಮ ಮಕ್ಕಳಿಗಾಗಿ ಯೋಜನೆಗಳು ಮಾಡಲು ಅತ್ಯುತ್ತಮ ದಿನ.

**ತುಲಾ** ಮದ್ಯಪಾನ ಮಾಡಿದಲ್ಲಿ ಅದು ನಿಮ್ಮ ನಿದ್ರೆಗೆ ಭಂಗ ತಂದು ಆಳವಾದ ವಿಶ್ರಾಂತಿ ತೆಗೆದುಕೊಳ್ಳುವುದನ್ನು ತಡೆಗಟ್ಟಬಹುದಾದ್ದರಿಂದ ಹಾಗೆ ಮಾಡಬೇಡಿ. ನೀವು ನಿಮ್ಮ ಕೋಪವನ್ನು ನಿಯಂತ್ರಿಸಿ.

**ವೃಶ್ಚಿಕ** ಸ್ವಲ್ಪ ವ್ಯಾಯಾಮದೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿಸಿ, ನಿಮ್ಮ ಬಗ್ಗೆ ನೀವೇ ಒಳ್ಳೆಯ ಅಭಿಪ್ರಾಯ ಇಟ್ಟುಕೊಳ್ಳುವುದು ಮುಖ್ಯ ಇದನ್ನು ದಿನವೂ ಮಾಡುವುದನ್ನು ರೂಢಿ ಮಾಡಿಕೊಳ್ಳಿ

**ಧನಸ್ಸು** ಸಂಜೆ ನಿಮ್ಮ ಮಕ್ಕಳೊಂದಿಗೆ ಸ್ವಲ್ಪ ಆಹ್ಲಾದಕರ ಸಮಯ ಕಳೆಯಿರಿ. ನಿಮ್ಮ ಮಾತುಗಳನ್ನು ಸರಿಯಾಗಿ ಸಾಬೀತುಪಡಿಸಲು ಇಂದು ನೀವು ನಿಮ್ಮ ಸಂಗಾತಿಯೊಂದಿಗೆ ಜಗಳವಾಡಬಹುದು.

**ಮಕರ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ.

**ಕುಂಭ** ನಿಮ್ಮ ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ಈ ರಾಶಿಚಕ್ರದ ಉದ್ಯಮಿಗಳು, ನಿಮ್ಮ ಬಳಿ ಹಣವನ್ನು ಕೇಳುತ್ತಾರೆ.

**ಮೀನ** ನಿಮ್ಮ ಸಂಗಾತಿಯ ತುಂಬಾ ಸ್ವಾರ್ಥಪರರಂತೆ ವರ್ತಿಸಬಹುದು. ನಿಮ್ಮ ಸಂತೋಷವನ್ನು ವ್ಯಕ್ತಪಡಿಸಿ, ಇದರಿಂದ ನಿಮ್ಮೊಂದಿಗೆ ಸಂಬಂಧಿಸಿರುವ ಜನರಿಗೂ ಸಂತೋಷ ಸಿಗುತ್ತದೆ.

### ಬಸವಣ್ಣ ಹಾಗೂ ಕಲ್ಯಾಣದ ಶರಣರು ಸಮಾನತೆಗೆ ಹೋರಾಡಿದರು, ಅವರ ತತ್ವಗಳನ್ನು ಹತ್ತಿಕ್ಕಲು ವ್ಯವಸ್ಥಿತ ಸಂಚು ನಡೆಯಿತು

# ಭೂಮಿ ಇರುವವರೆಗೂ ಬಸವ ತತ್ವ ಬೇಕು: ಸಚಿವ ಸತೀಶ ಜಾರಕಿಹೊಳಿ

• ಉದಯವಾಹಿನಿ ಬೆಳಗಾವಿ

ಈ ನೆಲದ ಮೂಲ ತತ್ವಗಳನ್ನು ತಿರುಚುವ ಪ್ರಯತ್ನಗಳು ಸಾವಿರಾರು ವರ್ಷಗಳಿಂದ ನಡೆಯುತ್ತಲೇ ಬಂದಿವೆ. ಬಸವಾದಿ ಶರಣರು ಮೂಲ ತತ್ವಗಳನ್ನು ಮತ್ತೆ ಬೆಳಗಿದರು. ಬಸವ ತತ್ವಗಳು ಭೂಮಿ ಇರುವವರೆಗೂ ಇರಬೇಕಾದುದು ಅನಿವಾರ್ಯ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಲಿಂಗಾಯತ ಮಠಾಧಿಪತಿಗಳ ಒಕ್ಕೂಟ, ಜಾಗತಿಕ ಲಿಂಗಾಯತ ಮಹಾಸಭಾ, ಶರಣ ಸಾಹಿತ್ಯ ಪರಿಷತ್, ರಾಷ್ಟ್ರೀಯ ಬಸವದಳ ಮತ್ತು ಲಿಂಗಾಯತ ಸಂಘಟನೆ ಸಂಯುಕ್ತವಾಗಿ ಇಲ್ಲಿನ ನಾಗನೂರು ರುದ್ರಾಕ್ಷಿ ಮಠದ ಆವರಣದಲ್ಲಿ ಏರ್ಪಡಿಸಿದ 'ಬಸವ ಸಂಸ್ಕೃತಿ ಅಭಿಯಾನದಲ್ಲಿ ಅವರು ಮಾತನಾಡಿದರು.

'ಬಸವಣ್ಣ ಹಾಗೂ ಕಲ್ಯಾಣದ ಶರಣರು ಸಮಾನತೆಗೆ ಹೋರಾಡಿದರು. ಅವರ ತತ್ವಗಳನ್ನು ಹತ್ತಿಕ್ಕಲು ವ್ಯವಸ್ಥಿತ ಸಂಚು ನಡೆಯಿತು. ಮಹಾಜ್ಞಾನದ ಖನಿಯಾಗಿದ್ದ ವಚನಗಳನ್ನು ನಾಶ ಮಾಡಲಾಯಿತು. ಶರಣರು ಪ್ರಾಣಕ್ಕಿಂತ ಹೆಚ್ಚಾಗಿ ವಚನಗಳನ್ನು ಕಾಪಾಡಲು ಯತ್ನಿಸಿದರು. ಅವರ ತ್ಯಾಗದ ಪರಿಣಾಮ ಇಂದು ಬಸವ ತತ್ವಗಳು ನಮಗೆ ಪ್ರಾಪ್ತವಾಗುತ್ತಿವೆ' ಎಂದರು.

ಭಾರತೀಯ ಸಂವಿಧಾನಕ್ಕೂ ವಚನ ತತ್ವಗಳಿಗೂ ಏನೂ ವ್ಯತ್ಯಾಸವಿಲ್ಲ. ಸೂಕ್ಷ್ಮವಾಗಿ ಗಮನಿಸಿದರೆ ಶರಣರು ವಚನಗಳಲ್ಲಿ ಹೇಳಿದ್ದನ್ನೇ ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದಲ್ಲಿ ಬರೆದಿದ್ದಾರೆ. ಈ ಕಾರಣಕ್ಕಾಗಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಸವಣ್ಣ ಅವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ


ಉದಯವಾಹಿನಿ ಚಿತ್ರ

> ದೇಶದ ಶೇ 99ರಷ್ಟು ಮಂದಿ ಅಸ್ಪೃಶ್ಯರೇ ಆಗಿದ್ದಾಗ ದೇವಸ್ಥಾನಕ್ಕೆ ಪ್ರವೇಶವೇ ಇಲ್ಲದಿದ್ದಾಗ ಬಸವಣ್ಣ ಲಿಂಗಾಯತ ಧರ್ಮ ಸ್ಥಾಪಿಸಿದರು. ಆ ಮೂಲಕ ಇಡೀ ದೇಶ ರಕ್ಷಿಸಿದರು.
> –ನಿಜಗುಣಾನಂದ ಸ್ವಾಮೀಜಿ, ಬೈಲೂರು

ಎಂದು ಘೋಷಣೆ ಮಾಡಿದರು. ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಹಾಕುವುದಕ್ಕೂ ಸಿದ್ದರಾಮಯ್ಯ ಆದೇಶ ಹೊರಡಿಸಿದ್ದರು ಎಂದೂ ಹೇಳಿದರು.

ಚಿಂತನೆ ಮಂಡಿಸಿದ ಬೈಲೂರು ನಿಷ್ಕಲ ಮಂಟಪದ ನಿಜಗುಣಾನಂದ ಸ್ವಾಮೀಜಿ, '12ನೇ ಶತಮಾನದಲ್ಲಿ ವೈದಿಕ ಸಂಪ್ರದಾಯವಾದಿಗಳು ವಚನಗಳನ್ನು ನಾಶ ಮಾಡಿದರು. ಆದರೆ, ಇಂದು ನಮ್ಮವರೇ ನಾಶ ಮಾಡುತ್ತಿದ್ದಾರೆ. ಯಾರನ್ನು ದೂರುವುದು ಎಂಬಂಥ ಸ್ಥಿತಿ ನಿರ್ಮಾಣವಾಗಿದೆ.

ಲಿಂಗಾಯತ ಧರ್ಮದ ಮರುಸ್ಥಾಪನೆಯೊಂದೇ ಇದಕ್ಕೆ ಇರುವ ಮಾರ್ಗ' ಎಂದು ಕರೆ ನೀಡಿದರು. ಹಂದಿಗುಂದದ ಶಿವಾನಂದ ಸ್ವಾಮೀಜಿ ಆಶೀರ್ವಚನ ನೀಡಿ, 'ವೀರಶೈವ-ಲಿಂಗಾಯತ ಒಂದೇ ಎಂದು ನೋಡಬೇಡಿ. ಕೆಲವರು ಉದ್ದೇಶಪೂರ್ವಕ ಸಮಾಜವನ್ನು ದಾರಿ ತಪ್ಪಿಸುತ್ತಿದ್ದಾರೆ. ಎಲ್ಲಿಯವರೆಗೆ ವೀರಶೈವ ಎಂಬುದನ್ನು ಲಿಂಗಾಯತರಿಂದ ಸಂಪೂರ್ಣ ಕುತ್ತುಹಾಕುವುದಿಲ್ಲವೋ ಅಲ್ಲಿಯವರೆಗೆ ಪ್ರತ್ಯೇಕ ಧರ್ಮ ಮಾನ್ಯತೆ ಸಿಗಲು ಸಾಧ್ಯವೇ ಇಲ್ಲ' ಎಂದು ಪ್ರತಿಪಾದಿಸಿದರು.'ಲಿಂಗಾಯತ ಧರ್ಮ 12ನೇ ಶತಮಾನದಲ್ಲಿ ಹುಟ್ಟಿದೆ. ಹಿಂದೂ ಧರ್ಮ ಸಾವಿರಾರು ವರ್ಷಗಳ ಹಿಂದೆ ಹುಟ್ಟಿದೆ. ಪುರಾತನ ಧರ್ಮವನ್ನು ಅನುಸರಿಸುವುದೇ ಸರಿ ಎಂದು ಕೆಲವರು ವಾದ ಮಾಡುತ್ತಿದ್ದಾರೆ. ಇದು ತಪ್ಪು ಕಲ್ಪನೆ. ಬಸವಾದಿ ಶರಣರು ಹಳೆಯ ಗೋಡೆಯನ್ನು ದುರಸ್ತಿ ಮಾಡಿಲ್ಲ. ಅದನ್ನು ಪೂರ್ಣ ಕೆಡವಿ ಹೊಸ ಮನೆಯನ್ನೇ ಕಟ್ಟಿದ್ದಾರೆ. ಹೊಸದಾದ ವಿಚಾರಗಳನ್ನು ಹೊಸ ತತ್ವಗಳನ್ನು ಹೊಂದಿರುವ ಲಿಂಗಾಯತ ಧರ್ಮವೇ ವಿಶ್ವ ಧರ್ಮವಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು' ಎಂದರು.

ಅಧ್ಯಾಪಕ ಶಿವಲಿಂಗ ಹೇಡೆ 'ದಯವೇ ಧರ್ಮದ ಮೂಲ ಕುರಿತು ಹಾಗೂ ಚಿಗರಹಳ್ಳಿ ಸಿದ್ಧಬಸವ ಕಬೀರ ಸ್ವಾಮಿಜಿ 'ಅಂತರಂಗ-ಬಹಿರಂಗ ಶುದ್ದಿ' ಕುರಿತು ಉಪನ್ಯಾಸ ನೀಡಿದರು. ನಾಡಿನ ವಿವಿಧ ಮಠಗಳ ಪೀಠಾಧಿಪತಿಗಳು, ಮಾತಾಜಿ ಅವರು, ಧುರೀಣರು ವೇದಿಕೆ ಮೇಲಿದ್ದರು.

ನಂತರ ಸಾಣೇಹಳ್ಳಿಯ ಶಿವ ಸಂಚಾರ ತಂಡದಿಂದ 'ಜಂಗಮದೆಡೆಗೆ' ನಾಟಕ ಪ್ರದರ್ಶನ ನಡೆಯಿತು.ದೇಶದ ಶೇ 99ರಷ್ಟು ಮಂದಿ ಅಸ್ಪೃಶ್ಯರೇ ಆಗಿದ್ದಾಗ ದೇವಸ್ಥಾನಕ್ಕೆ ಪ್ರವೇಶವೇ ಇಲ್ಲದಿದ್ದಾಗ ಬಸವಣ್ಣ ಲಿಂಗಾಯತ ಧರ್ಮ ಸ್ಥಾಪಿಸಿದರು. ಆ ಮೂಲಕ ಇಡೀ ದೇಶ ರಕ್ಷಿಸಿದರು.

> ಅಕ್ಟೋಬರ್ 5ರಂದು ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ನಡೆಯಲಿದೆ. ಇಡೀ ರಾಜ್ಯ ಸಂಚರಿಸಿದ ಮೇಲೆ ನಾವೆಲ್ಲ ಬೆಂಗಳೂರಿನಲ್ಲಿ ಒಂದಾಗಿ ಶಕ್ತಿ ಪ್ರದರ್ಶಿಸಲು ಸೇರಬೇಕು.
> –ಬಸವಲಿಂಗ ಪಟ್ಟದ್ದೇವರು, ಭಾಲ್ಕಿ

> ಕೆಲವು ಮಠಾಧೀಶರು ಇನ್ನೂ ಮುಂಚೂಣಿ ಆಂದೋಲನಕ್ಕೆ ಬಂದಿಲ್ಲ. ಹಿಂದೆ ನಿಂತು ಜೈ ಅನ್ನಬೇಡಿ. ಗಟ್ಟಿಯಾಗಿ ಲಿಂಗಾಯತರೆಂದು ಹೇಳಿಕೊಳ್ಳಿ. ಇಲ್ಲದಿದ್ದರೆ ಉಳಿಗಾಲವಿಲ್ಲ.
> ಶಿವಾನಂದ ಸ್ವಾಮೀಜಿ, ಹಂದಿಗುಂದ

> ಲಿಂಗಾಯತ ಎನ್ನುವುದು ಪರಿಪೂರ್ಣ ಧರ್ಮ ಸ್ವತಂತ್ರ ಧರ್ಮವಾಗಿದೆ. ಈಗ ಬೇಕಿರುವುದು ಸಾಂವಿಧಾನಿಕ ಮಾನ್ಯತೆ ಮಾತ್ರ. ಅದು ಸಿಗುವವರೆಗೂ ಹೋರಾಟ ನಿಲ್ಲದು. –ಗಂಗಾ ಮಾತಾಜಿ ಬಸವ ಧರ್ಮ ಪೀಠ ಕೂಡಲಸಂಗಮ

ಬಸವ ಸಂಸ್ಕೃತಿ ಅಭಿಯಾನ

## ಹಿಂದೂಗಳು ಸಹಿಷ್ಣು ಹೃದಯದವರು

• ಉದಯವಾಹಿನಿ ಸಿಂಧನೂರು

2024 ರ ಸಿಂಧನೂರು ದಸರಾ ಉತ್ಸವದಲ್ಲಿ ಅನ್ಯಧರ್ಮದ ಮೆಕ್ಕಮದಿನದ ಸ್ತಬ್ಧಚಿತ್ರ ಮೆರವಣಿಗೆ ಮಾಡಿ ಹಿಂದೂಗಳ ಧಾರ್ಮಿಕ ಶ್ರದ್ದೆಯನ್ನು ಹಾಳು ಮಾಡಿದ್ದರು. ಆದರೂ ಹಿಂದೂಗಳು ಸಂಹಿಷುಂ ಹೃದಯದವರು. ಆದರೆ ನವರಾತ್ರಿ ಉತ್ಸವವು ಹಿಂದುಗಳ ಪವಿತ್ರ ಆಚರಣೆಗಳಲ್ಲೊಂದು ಅಂತ ನವರಾತ್ರಿ ಉತ್ಸವವನ್ನು ಸಂತರು ಮಹಾಂತರು ಶರಣರ ಸಮ್ಮುಖದಲ್ಲಿ ಅವರ ಮಾರ್ಗದರ್ಶನದೊಂದಿಗೆ ನಡೆಯಬೇಕು ಅದನ್ನು ಬಿಟ್ಟು ಕೆಲವರ ರಾಜಕೀಯ ಬೇಳೆ ಬೆಯಿಸಿಕೊಳ್ಳಲು ನವರಾತ್ರಿ ಉತ್ಸವದಲ್ಲಿ ಮಕ್ಕಾಮದೀನದ ಸ್ತಬ್ಧ ಚಿತ್ರಗಳ ಮೆರವಣಿಗೆ ಮಾಡಿದ್ದು ಅಕ್ಷಮ್ಯ ಹಿಂದೂ ವಿರೋದಿ ನಡೆ ಎಂದು ಬಸವರಾಜ ಸಾಲಗುಂದ ಆಗ್ರಹಿಸಿದರು

ಈ ಸಾರಿ ಮತ್ತೆ ಸಿಂಧನೂರಿನಲ್ಲಿ ಸಿಂಧನೂರು ದಸರಾ ಉತ್ಸವ ನಡೆಯುತ್ತದೆಂದು ತಿಳಿದು ಬಂದಿದೆ. ದಸರಾ ಉತ್ಸವವು ತಾಲ್ಲೂಕ ದಂಡಾಧಿಕಾರಿಗಳ ಸಮಕ್ಷಮದಲ್ಲಿ ನಡೆಯುವುದರಿಂದ ದಸರಾ ಹಬ್ಬವು ಹಿಂದೂಗಳ ಶ್ರದ್ದೆಯ ಹಬ್ಬವಾಗಿದ್ದು, ಅನ್ಯ


ಉದಯವಾಹಿನಿ ಚಿತ್ರ

ಧರ್ಮದ ಸ್ತಬ್ಧ ಚಿತ್ರಗಳನ್ನು ಮೆರವಣಿಗೆಯಲ್ಲಿ ಭಾಗವಹಿಸಿದಂತೆ ತಡೆಯಬೇಕು.

ರಾಜಕೀಯ ಲಾಭಕ್ಕಾಗಿ ಕೆಲವರು ಮಾಡುವ ಪಿತೂರಿಗಳಿಗೆ ದಂಡಾಧಿಕಾರಿಗಳೂ ತಲೆಬಾಗದೆ ಹಿಂದೂ ಧರ್ಮದ ಧಾರ್ಮಿಕ ನಂಬಿಕೆಗಳನ್ನು ಎತ್ತಿಹಿಡಿಯಬೇಕು.

ಅದನ್ನು ಮೀರಿ ನಮ್ಮ ಧಾರ್ಮಿಕ ಉತ್ಸವದಲ್ಲಿ ಅನ್ಯ ಕೋಮಿನ ಸ್ತಬ್ಧ ಚಿತ್ರಗಳು ಮೆರವಣಿಯಲ್ಲಿ ಕಂಡು ಬಂದರೆ ಅದರ ವಿರುದ್ಧ ಹೋರಾಡಲು ಹಿಂದೂ ಸಂಘಟನೆಗಳು ಮತ್ತು ಸಮಸ್ತ ಹಿಂದೂ ಬಾಂಧವರು ಮುಂಚುಣಿಯಲ್ಲಿರುತ್ತಾರೆಂದು ತಮಗೆ ತಿಳಿಸುತ್ತಿದ್ದೇವೆ ತಾಲ್ಲೂಕು ತಹಶೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು.

## ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ

• ಉದಯವಾಹಿನಿ ಸಿಂಧನೂರು

ಕರ್ತವ್ಯಗಳಿದ್ದಾಗ ಅರಣ್ಯ ಸಂಪತ್ತನ್ನು ರಕ್ಷಿಸುವ ಕೆಲಸದಲ್ಲಿ ನಿರತರಾದ ಸಮಯದಲ್ಲಿ ಹುತಾತ್ಮರಾದ ಅರಣ್ಯ ಇಲಾಖೆಯ ಸಿಬ್ಬಂದಿಯ ಬಲಿದಾನವನ್ನು ದೇಶ ಇಂದು ಸ್ಮರಣೆ ಮಾಡುವ ದಿನವೇ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಆಗಿದೆ. ಮನುಕುಲದ ಅಭಿವೃದ್ಧಿಗೆ. ಅರಣ್ಯ ಮತ್ತು ವನ್ಯಜೀವಿಗಳ ರಕ್ಷಣೆ ಅತ್ಯಂತ ಮಹತ್ವದಾಗಿದೆ. ಅಮೂಲ್ಯ ವೃಕ್ಷ ಸಂಪತ್ತಿಗೆ ಕೊಡಲಿ ಹಿಡಿಯುವ ಮತ್ತು ಕಾಡು ಪ್ರಾಣಿಗಳಿಗೆ ಗುಂಡಿಕ್ಕಿ ಸಾಯಿಸುವಂತಹ ಜನರನ್ನು ತಡೆಯುವಂತ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ಮತ್ತು ಸಿಬ್ಬಂದಿಯವರ ಕಾರ್ಯ ಮೆಚ್ಚಲೇಬೇಕು.

ತಮಗೆಲ್ಲ ಗೊತ್ತಿರುವ ಹಾಗೆ ವೀರಪ್ಪನ ಅಟ್ಟಹಾಸದಿಂದ ಹಲವಾರು ಪೊಲೀಸ್ ಅಧಿಕಾರಿಗಳು ಸಾರ್ವಜನಿಕರು ಅರಣ್ಯ ಇಲಾಖೆಯ ಸಿಬ್ಬಂದಿಯವರು ಹಾಗೂ ಆನೆಗಳು ಮರಣವನ್ನ ಅಪ್ಪಿದ್ದಾರೆ. ಬಿಷ್ಣೋಗಳನ್ನು ಅಮಾನಿಸುವಾಗಿ ಕೊಂದು ಹಾಕಿದ ಸೆಪ್ಟೆಂಬರ್ 11ರ ದಿನವನ್ನು ಅವರ ತ್ಯಾಗ ಬಲಿದಾನದ ಸಮಾನಾರ್ಥಕವಾದ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನವನ್ನಾಗಿ ದೇಶಾದ್ಯಂತ ಆಚರಿಸಲಾಗುತ್ತದೆ.

2012ರಿಂದ ರಾಷ್ಟ್ರಮಟ್ಟದಲ್ಲಿ ಈ ದಿನವನ್ನು ಆಚರಿಸಿಕೊಂಡು ಬರಲಾಗುತ್ತದೆ. ಪ್ರತಿ ರಾಜ್ಯದ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿಯೂ ಈ ದಿನದ ಅರಣ್ಯ ರಕ್ಷಣೆ ಕಾರ್ಯದ ವೇಳೆ ಬಲಿಯದ ಅಧಿಕಾರಿಗಳು ಸಿಬ್ಬಂದಿ ಅವರ ಹೆಸರನ್ನ ಹೇಳಿ ಸ್ಮರಣೆ ಮಾಡುವುದರ ಮೂಲಕ ಅವರ


ಉದಯವಾಹಿನಿ ಚಿತ್ರ

> ನಮಗೆ ಅರಣ್ಯ ಸಂಪತ್ತು.ಪ್ರಾಣಿಗಳ ಸಂಪತ್ತು ಬಹಳ ಮಹತ್ವದ್ದು ಇವುಗಳ ರಕ್ಷಣೆಯಲ್ಲಿ ನಮ್ಮ ಅರಣ್ಯ ಇಲಾಖೆಯವರು ಬಹಳಷ್ಟು ಹಗಲು ರಾತ್ರಿ ಎನ್ನದೆ ಕಾಯಕದಲ್ಲಿ ತೊಡಗಿರುತ್ತಾರೆ.ಅಂತ ಸಂದರ್ಭದಲ್ಲಿ ಇವರನ್ನ ಗುಂಡಿಕ್ಕಿ ದ ದುಷ್ಕರ್ಮಿಗಳು ಕುಂದ ಘಟನೆಗಳು ನಮ್ಮ ಮುಂದಿವೆ. ಹುತಾತ್ಮರಾದ ಅರಣ್ಯ ಸಿಬ್ಬಂದಿವನ್ನ ಅಂಥವರ ಸೇವೆಯನ್ನ ಸ್ಮರಣೆ ಮಾಡಲು ಈ ದಿನವನ್ನು ಆಚರಣೆ ಮಾಡಲಾಗುತ್ತಿದೆ. –ಗುರೂಜಿ ಸಾಯ ಕಿರಣ್

ಸೇವ ಕಾರ್ಯವನ್ನ ಸ್ಮರಣೆ ಮಾಡುವಂತ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು ಆಚರಣೆ ಮಾಡಲಾಗುತ್ತದೆ. ಇಂದು ಓಂ ಸಾಯಿ ಧ್ಯಾನಮಂದಿರದಲ್ಲಿ ಗುರೂಜಿ ಸಾಯ ಕಿರಣ ಅಧೋನಿಯವರು ಇಂತಹ ಅರಣ್ಯ ರಕ್ಷಕರ ಸ್ಮರಣೆ ಮಾಡುವಂತಹ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆಯನ್ನು ಆಯೋಜನೆ ಮಾಡಿದ್ದು ನಿಜವಾಗಲೂ ಹೆಚ್ಚುವಂತದ್ದು ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಶಿಕ್ಷಣ ವಿಭಾಗದ ಜಿಲ್ಲಾ ಸಂಚಾಲಕ ಡಾ. ದಂಡಪ್ಪ ಬಿರಾದಾರವರು ಓಂ ಸಾಯಿ ಜ್ಞಾನಮಂದಿರದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಶ್ರೀಮತಿ ಕವಿತಾ ಎಸ್ ಕೆ ಆಧುನಿ ಮತ್ತು ಮಹಾ ರೆಡ್ಡಿ ಹರೀಶ್ ಈ ಸಂದರ್ಭದಲ್ಲಿ ಅವರು ಹರೀಶ್ ಅವರು ಶ್ರೀಮತಿ ಯಂಕಪ್ಪ ಕಿತ್ತಳೆ ಅವರ ಕುಟುಂಬದ ಸದಸ್ಯರು ಹಾಗೂ ಹಲವಾರು ಓಂ ಸಾಯಿ ಧ್ಯಾನಮಂದಿರದ ಸದ್ಭಕ್ತರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಪರಿವಾರ ಸಹಕಾರ ಸೌಹಾರ್ದ ಕುರಿತು ಮಾಹಿತಿ ನೀಡಲಾಯಿತು. ಕುಮಾರಿ ಮಾಲಾ ಸ್ವಾಗತಗಳು. ಚಂದ್ರಶೇಖರ್ ಕೊನೆಯಲ್ಲಿ ಸವಂದಿಸಿದರು.

## ದೇಶ ಅಭಿವೃದ್ಧಿ ಹೊಂದಲು ಶಿಕ್ಷಣ ಎಲ್ಲರಿಗೂ ಅವಶ್ಯ : ಬಿಇಒ ವಿ.ಲಕ್ಷ್ಮಯ್ಯ

• ಉದಯವಾಹಿನಿ, ಚಿಂಚೋಳಿ

ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾಭ್ಯಾಸ ನೀಡಿ ಡಾಕ್ಟರ್, ಇಂಜಿನಿಯರಿಂಗ್,ಐಎಎಸ್,ಐಪಿಎಸ್,ಮಾಡುವ ಜೊತೆ ಒಳ್ಳೆಯ ಸಂಸ್ಕೃತಿ ಸಂಸ್ಕಾರ ಕಲಿಸುವ ಶಕ್ತಿ ಶಿಕ್ಷಕರಿಗೆ ಮಾತ್ರವಿದೆ ಅದಕ್ಕಾಗಿ ಶಿಕ್ಷಕರ ಹುದ್ದೆ ಬಹಳಷ್ಟು ಪವಿತ್ರವಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವಿ.ಲಕ್ಷ್ಮಯ್ಯ ಹೇಳಿದರು. ಪಟ್ಟಣದ ಬಂಜಾರ ಭವನದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಪ್ರಾಥಮಿಕ ಪ್ರೌಢಶಾಲಾ ಶಿಕ್ಷಕರ ಸಂಘ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ 2025-26ನೇ ಸಾಲಿನ ತಾಲ್ಲೂಕಾ ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರಿಗೆ ಮತ್ತು ಉತ್ತಮ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶ ಉನ್ನತಮಟ್ಟಕ್ಕೆ ಸಾಗಬೇಕಾದರೆ ಶಿಕ್ಷಣ ಪಡೆದುಕೊಳ್ಳುವುದು ಅವಶ್ಯಕವಾಗಿದೆ. ಶಿಕ್ಷಕರಿಂದ ಮಾತ್ರ ಪ್ರಪಂಚ ಬದಲಾವಣೆ ಮಾಡುವ ಶಕ್ತಿವಿದ್ದು ಸರ್ಕಾರಿ ಶಾಲೆಗಳ ಎಲ್ಲಾ ಶಿಕ್ಷಕರು ಶಾಲಾಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಜೊತೆ ಉತ್ತಮ ಸಂಸ್ಕೃತಿ


ಉದಯವಾಹಿನಿ ಚಿತ್ರ

ಸಂಸ್ಕಾರ ಕಲಿಸಬೇಕು ಎಂದು ಸಲಹೆ ನೀಡಿದರು.

ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಬಸವರಾಜ ಮಾಲಿ ಮಾತನಾಡಿ ನಾಲ್ಕು ಗೋಡೆಯ ಮಧ್ಯೆ ಭಾಗದಲ್ಲಿ ದೇಶ ನಿರ್ಮಾಣ ಮಾಡುವ ಶಕ್ತಿ ಶಿಕ್ಷಕರಲ್ಲಿದೆ. ಶಿಕ್ಷಣ ಇದ್ದರೆ ಒಂದು ಶಕ್ತಿ ಬರುತ್ತದೆ,ಮಗು ಶಾಲೆಗೆ ಬಂದಮೇಲೆ ಸ್ವತಃ ಮಗುವಿನಂತೆ ಶಿಕ್ಷಕರು ಉತ್ತಮ ಶಿಕ್ಷಣದ ಜೊತೆ ಸಂಸ್ಕಾರ ನೀಡಿ ದೇಶ ಉನ್ನತಮಟ್ಟಕ್ಕೆ ಸಾಗಿಸಲು ಪ್ರಯತ್ನ ಮಾಡುತ್ತಾರೆ ಎಂದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸುರೇಶ ಕೊರವಿ,ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ದೇವೀಂದ್ರಪ್ಪ ಹೋಳ್ಕರ್,ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಖುರ್ಷಿದಮಿಯ್ಯ,ಪ್ರಾಚಾರ್ಯ ಮಲ್ಲಿಕಾರ್ಜುನ ಪಾಲಾಮೋರ್,ಕ್ಷೇತ್ರ ಸಮನ್ವಯಾಧಿಕಾರಿ ನಾಗಶೇಟ್ಟಿ ಭದ್ರಶೇಟ್ಟಿ,ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಮಾರುತಿ ಪತಂಗೆ ಮಾತನಾಡಿದರು.

> ಯಾರೆ ಎಷ್ಟೆ ಎತ್ತರಮಟ್ಟಕ್ಕೆ ಹೋಗಲಿ ಅವರ ಹಿಂದೆ ಶಿಕ್ಷಕರ ಪಾತ್ರ ಬಹಳಷ್ಟು ಇರುತ್ತೆ,ಅದಕ್ಕಾಗಿ ಶಿಕ್ಷಕರಿಗೆ ಗುರುವಿನ ಸ್ಥಾನವಿದೆ, ಅವರು ಕೊಟ್ಟ ಶಿಕ್ಷಣದಿಂದಲ್ಲೇ ದೇಶದಾದ್ಯಂತ ವಿದ್ಯಾರ್ಥಿಗಳು ಡಾಕ್ಟರ್, ಇಂಜಿನಿಯರ್, ವಕೀಲರು, ನ್ಯಾಯಾಧೀಶರು, ಐಎಎಸ್ ಐಪಿಎಸ್ ಆಗಲು ಸಾಧ್ಯವಾಗಿದ್ದು ದೇಶದ ಅಭಿವೃದ್ಧಿಗಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ, ಶಿಕ್ಷಕರ ಶ್ರಮ ಎಂದು ಮರೆಯಲು ಸಾಧ್ಯವಿಲ್ಲ.
> – ಕರಬಸಪ್ಪ ದೇಶಮುಖ
> ಎಂಡಿ.ಕೇತಕಿ ಡೇವಲಪರ್ಸ ಚಿಂಚೋಳಿ.

## ತಾಲ್ಲೂಕ ಮಟ್ಟದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಗೆ ಮಾಸಾಬಿ ಯಲಗೋಡ್ ಆಯ್ಕೆ

• ಉದಯವಾಹಿನಿ ಕೆಂಭಾವಿ

ಶಾಲಾ ಶಿಕ್ಷಣ ಇಲಾಖೆ ನೇತೃತ್ವದಲ್ಲಿ ನಡೆಯಲಿರುವ ತಾಲ್ಲೂಕ ಮಟ್ಟದ ಶಿಕ್ಷಕರ ದಿನಾಚರಣೆಯ ಅಂಗವಾಗಿ ಹಾಗೂ ಸುರಪುರ ಮತ್ತು ಹುಣಸಗಿ ತಾಲ್ಲೂಕಿನ ಅನುದಾನರಹಿತ ಶಾಲಾ ಶಿಕ್ಷಕರಿಗೆ ತಾಲ್ಲೂಕ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ತಾಲ್ಲೂಕ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ (ರಿ.) ಸುರಪುರ ವತಿಯಿಂದ ತಾಲ್ಲೂಕಿನ ಅನುದಾನ ರಹಿತ ಶಾಲಾ ಶಿಕ್ಷಕರಿಗೆ ಕೊಡ ಮಾಡುವ ತಾಲ್ಲೂಕು ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಪಟ್ಟಣದ ಶ್ರೀಮತಿ ಮಾಸಾಬಿ ಬಾಬು ಪಟೇಲ್ ಯಲಗೋಡ್ ಸಹಶಿಕ್ಷಕಿ ಶ್ರೀ ಸ್ವಾಮಿ ವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆ ಕೆಂಭಾವಿ ಇವರನ್ನು ಆಯ್ಕೆ ಮಾಡಲಾಗಿದ್ದು ಸಪ್ಟಂಬರ್ 13 ರಂದು ಗರುಡಾದ್ರಿ ಕಲಾ ಮಂದಿರ ಸುರಪುರದಲ್ಲಿ ತಾಲ್ಲೂಕಾ ಮಟ್ಟದ ಶಿಕ್ಷಕರ ದಿನಾಚರಣೆಯ ಅಂಗವಾಗಿ ತಾಲ್ಲೂಕು ಅನುದಾನ ರಹಿತ ಶಾಲೆಯ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದ್ದು. ಶ್ರೀಮತಿ ಮಾಸಾಬಿ ಬಾಬು ಪಟೇಲ್ ಯಲಗೋಡ ಕೆಂಭಾವಿ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಅವರ ಆಯ್ಕೆಗೆ ಶಾಲೆಯ ಮುಖ್ಯ ಗುರುಗಳು ಹಾಗೂ ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಪಟ್ಟಣದ ಸರ್ಕಾರಿ ಹಾಗೂ ಖಾಸಗಿ ಶಾಲೆಯ ಶಿಕ್ಷಕರು, ಅಭಿನಂದಿಸಿದ್ದಾರೆ.



## ಮುಂಬರುವ ಚುನಾವಣೆಗಳಿಗೆ ಸೇನಾನಿಗಳಂತೆ ಮುನ್ನುಗ್ಗಿ : ಸೊರಕೆ

• ಉದಯವಾಹಿನಿ ಬಳ್ಳಾರಿ

ರಾಜ್ಯದಲ್ಲಿ ಮುಂಬರುವ ಜಿಲ್ಲಾ, ತಾಲ್ಲೂಕು ಪಂಚಾಯ್ತಿ ಸೇರಿದಂತೆ ಬರುವ ಎಲ್ಲಾ ಹಂತದ ಚುನಾವಣೆಗಳಲ್ಲಿ ಪ್ರಚಾರ ಸಮಿತಿಯು ಸೇನಾನಿಗಳಂತೆ ಮುನ್ನುಗ್ಗಿ ಪಕ್ಷ ಸಂಘಟಿಸುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಕೆಪಿಸಿಸಿ ಪ್ರಚಾರ ಸಮಿತಿಯ ರಾಜ್ಯ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ ಕಾರ್ಯಕರ್ತರಗೆ ಕರೆ ನೀಡಿದ್ದಾರೆ. ಅವರು ನಗರದ ಖಾಸಗಿ ಹೋಟೇಲ್‌ನಲ್ಲಿ ಡಾ. ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮುಂಡ್ರಿಗಿ ನಾಗರಾಜ್ ರವರ ನೇತೃತ್ವದಲ್ಲಿ ನಡೆದ ''ಬಳ್ಳಾರಿ ಜಿಲ್ಲಾ ಗ್ರಾಮಾಂತರ ಹಾಗೂ ನಗರ ಕಾಂಗ್ರೆಸ್ ಕಾರ್ಯಕರ್ತರ ಪ್ರಚಾರ ಸಮಿತಿ ಸಭೆಯಲ್ಲಿ ಮಾತನಾಡುತ್ತಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಬರುವಲ್ಲಿ ಪ್ರಚಾರ ಸಮಿತಿಯ ಪಾತ್ರ ಮುಖ್ಯವಾಗಿದೆ. ಅದರಂತೆ ಬರುವ ಚುನಾವಣೆಗಳನ್ನು ಎದುರಿಸಲು ಸಿದ್ಧರಾಗಬೇಕು ಎಂದರು.

## ತುರ್ತು ನೆರವಿನ ಸಂಖ್ಯೆಗಳ ಸ್ಟಿಕ್ಕರ್ ಬಿಡುಗಡೆ

• ಉದಯವಾಹಿನಿ ಬೀದರ್

ಬೀದರ್ ಬೆಟರ್ಮೆಂಟ್ ಫೌಂಡೇಷನ್‌ನಿಂದ ಹೊರ ತರಲಾದ ತುರ್ತು ನೆರವಿನ ಸಂಖ್ಯೆಗಳ ಸ್ಟಿಕ್ಕರ್ ಅನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ನಗರದಲ್ಲಿ ಬಿಡುಗಡೆ ಮಾಡಿದರು.

ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ನೆರವಾಗುವ ದಿಸೆಯಲ್ಲಿ ಫೌಂಡೇಷನ್ ತುರ್ತು ಸಂಖ್ಯೆಗಳ ಸ್ಟಿಕ್ಕರ್ ಹೊರ ತಂದಿರುವುದು ಪ್ರಶಂಸನೀಯ ಎಂದು ಅವರು ಹೇಳಿದರು.

ಫೌಂಡೇಷನ್‌ನಿಂದ ಮನೆ ಮನೆಗಳಲ್ಲಿ ಅಂಟಿಸಲು ತುರ್ತು ನೆರವಿನ ಸಂಖ್ಯೆಗಳ ಒಟ್ಟು 10 ಸಾವಿರ ಸ್ಟಿಕ್ಕರ್‌ಗಳನ್ನು ವಿತರಿಸಲಾಗುತ್ತಿದೆ ಎಂದು ಫೌಂಡೇಷನ್ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ತಿಳಿಸಿದರು. ಸ್ಟಿಕ್ಕರ್ ಪೊಲೀಸ್ ಠಾಣೆಗಳು, ಆಸ್ಪತ್ರೆ, ಆಂಬುಲನ್ಸ್, ಮಹಿಳಾ ಸಹಾಯವಾಣಿ, ರಾಷ್ಟ್ರೀಯ ಟೆಲಿ ಮೆಂಟಲ್ ಹೆಲ್ತ್ ಕಾರ್ಯಕ್ರಮ, ಜೆಸ್ಕಾಂ, ಏರ್ಪೊ?ರ್ಟ್, ಮಹಾನಗರ ಪಾಲಿಕೆ ಸೇರಿದಂತೆ ಮಹತ್ವದ ದೂರವಾಣಿ ಸಂಖ್ಯೆಗಳನ್ನು ಒಳಗೊಂಡಿದೆ ಎಂದು ತಿಳಿಸಿದರು.

## ಶಿಕ್ಷಕ ಪರಿಪೂರ್ಣತೆ ಹೊಂದಿರಬೇಕು: ಪ್ರೊ. ಜಗನ್ನಾಥ

• ಉದಯವಾಹಿನಿ, ಬೀದರ

ಒಬ್ಬ ಶಿಕ್ಷಕ ಆದರ್ಶ ಶಿಕ್ಷಕ ಎನಿಸಿಕೊಳ್ಳಲು ಉತ್ತಮ ಬೋಧನೆ, ಶಿಸ್ತು, ಸಹಕಾರ, ಸತತ ಅಧ್ಯಯನ, ಉತ್ತಮ ಉಡುಗೆ ತೊಡುಗೆ ಸೇರಿದಂತೆ ಆದರ್ಶಮಯ ಗುಣಗಳನ್ನು ಅಳವಡಿಸಿಕೊಳ್ಳಬೇಕೆಂದು ಕರ್ನಾಟಕ ಸಾಹಿತ್ಯ ಸಂಘದ ಅಧ್ಯಕ್ಷ ಪ್ರೊ. ಜಗನ್ನಾಥ ಹೆಬ್ಬಾಳೆ ತಿಳಿಸಿದರು. ವಿದ್ಯಾ ಶ್ರೀ ಎಜುಕೇಶನಲ್ ಮತ್ತು ಚಾರಿಟೇಬಲ್ ಟ್ರಸ್ಟ್ ಅಡಿಯಲ್ಲಿನ ವಿದ್ಯಾ ಶ್ರೀ ಮಾದರಿ ಪ್ರಾಥಮಿಕ ಶಾಲೆ ಹಾಗೂ ವಿದ್ಯಾನಿಧಿ ಪ್ರೌಢ ಶಾಲೆ ವತಿಯಿಂದ ಶಾಲೆಯ ಸಭಾಂಗಣದಲ್ಲಿ ಜರುಗಿದ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದರು. ಶಿಕ್ಷಕರಾದವರು ನಿರಂತರವಾಗಿ ಕಲಿಯುತ್ತಿರಬೇಕು.

ಪ್ರಯತ್ನಶೀಲರಾಗುವುದರ ಜೊತೆಗೆ ಕ್ರಿಯಾಶೀಲರಾಗಿ ಮಕ್ಕಳ ಮನಸ್ಸಿನ ಮೇಲೆ ಉತ್ತಮ ಪರಿಣಾಮ ಬೀರುವಂತೆ ಬೋಧಿಸಬೇಕು. ಮಕ್ಕಳ ಜೀವನ ಉಜ್ವಲವಾಗುವಂತೆ ಅವರಿಗೆ ಮಾರ್ಗದರ್ಶನ ಮಾಡಬೇಕೆಂದರು. ಸರಳ ಜೀವನ, ಶಾಂತತೆ ಮತ್ತು ಶರಣ ಜೀವನ ನಡೆಸಬೇಕು. ಉದ್ವೇಗರಹಿತ, ಪರಿಪೂರ್ಣತೆ ಮತ್ತು ಪರಿಪಕ್ವತೆ ಹೊಂದಿರಬೇಕೆಂದು ಹೆಬ್ಬಾಳೆಯವರು ತಿಳಿಸಿದರು.

ವಿದ್ಯಾ ಶ್ರೀ ಎಜುಕೇಶನಲ್ ಮತ್ತು ಚಾರಿಟೇಬಲ್ ಟ್ರಸ್ಟ್‌ನ ಕಾರ್ಯದರ್ಶಿ ಗಣಪತಿ ಸೋಲಪುರೆ ಮಾತನಾಡಿ ಶಿಕ್ಷಕರಾದವರು ಧನಾತ್ಮಕ ವಿಚಾರಗಳೊಂದಿಗೆ, ಆಕರ್ಷಕ ನಿರೂಪಣಾ ಶಕ್ತಿ ಹೊಂದಿರಬೇಕು. ಆಧುನಿಕತೆಗೆ ಹೊಂದಿಕೊಂಡು ಡಿಜಿಟಲ್ ಉಪಕರಣಗಳನ್ನು ಸದ್ಬಳಕೆ ಮಾಡಿಕೊಂಡು ಬೋಧಿಸಬೇಕು. ನಮ್ಮ ಶಾಲೆಯಲ್ಲಿ ಶಿಕ್ಷಕರನ್ನು ಪ್ರೋತ್ಸಾಹಿಸಬೇಕೆಂಬ ಸದುದ್ದೇಶದಿಂದ ಅವರಿಗೆ ಸನ್ಮಾನಿಸಿ ಗೌರವಿಸಲಾಗಿದೆ. ಈ ಎಲ್ಲಾ ಕಾರ್ಯಗಳಿಗೆ ಸಹಕಾರ ನೀಡುತ್ತಿರುವ ಟ್ರಸ್ಟ್ ಅಧ್ಯಕ್ಷೆ ಶೀಲಾ ದೇಶಪಾಂಡೆ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಎಸ್.ಬಿ.ಕುಚಬಾಳ, ಟ್ರಸ್ಟ್ ಖಜಾಂಚಿ ರೇಣುಕಾ ಆರ್. ಮಂಗಲಗಿ, ಟ್ರಸ್ಟ್ ಸದಸ್ಯರಾದ ವಿಜಯಲಕ್ಷ್ಮೀ ಸೋಲಪುರೆ, ಕೇದಾರ ಎಂ.ದೇಶಪಾಂಡೆ, ಆದರ್ಶ ಮಂಗಲಗಿ, ಉಪಸ್ಥಿತರಿದ್ದರು.

### ಖಾಯಂ ಜನತಾ ನ್ಯಾಯಾಲಯದ ಮೂಲಕ ಪ್ರಕರಣ ಶೀಘ್ರ ಇತ್ಯರ್ಥ, ಕೋರ್ಟ್ ಶುಲ್ಕವೂ ಇಲ್ಲ: ರೋಣ ವಾಸುದೇವ

# ಜಿಲ್ಲಾ ಕೇಂದ್ರದಲ್ಲೇ ಸಾರ್ವಜನಿಕ ಉಪಯುಕ್ತ ಸೇವೆಗಳ ಪ್ರಕರಣಗಳ ವಿಚಾರಣೆ

• ಉದಯವಾಹಿನಿ ಚಿತ್ರದುರ್ಗ

ಸಾರ್ವಜನಿಕ ಉಪಯುಕ್ತ ಸೇವೆಗಳಿಗೆ ಸಂಬಂಧಪಟ್ಟ ವಿವಾದಗಳನ್ನು ರಾಜೀ ಮತ್ತು ವಿಚಾರಣೆ ಮೂಲಕ ತ್ವರಿತವಾಗಿ ಇತ್ಯರ್ಥಗೊಳಿಸಲು, 1987ರ ಕಾನೂನು ಸೇವೆಗಳ ಪ್ರಾಧಿಕಾರ ಕಾಯ್ದೆಗೆ ತಿದ್ದುಪಡಿ ತಂದು, ಪ್ರತಿ ಕಂದಾಯ ವಿಭಾಗ ಮಟ್ಟದಲ್ಲಿ ಖಾಯಂ ಜನತಾ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.

ಸದ್ಯ ಖಾಯಂ ಜನತಾ ನ್ಯಾಯಾಲಯಗಳ ಕಾರ್ಯವೈಖರಿಯಲ್ಲಿ ಸುಧಾರಣೆ ತಂದು, ಕಕ್ಷಿದಾರಿಗೆ ಅನುಕೂಲವಾಗುವಂತೆ ಕಂದಾಯ ವಿಭಾಗದಲ್ಲಿ ಬರುವ ಜಿಲ್ಲಾ ಕೇಂದ್ರಗಳಲ್ಲಿಯೂ ನಿಯಮಿತವಾಗಿ ವಿಚಾರಣೆಗಳನ್ನು ನಡೆಸಲಾಗುವುದು. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ರೋಣ ವಾಸುದೇವ ತಿಳಿಸಿದ್ದಾರೆ. ಜಿಲ್ಲಾ ನ್ಯಾಯಾಲಯದ ಮಧ್ಯಸ್ಥಿಕೆ ಕೇಂದ್ರದಲ್ಲಿ ಶುಕ್ರವಾರ ಈ ಕುರಿತು ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು.

ಖಾಯಂ ಜನತಾ ನ್ಯಾಯಾಲಯದಲ್ಲಿ ವಿಚಾರಣೆ

ಸಾರ್ವಜನಿಕರಿಗೆ ವಿವಿಧ ಸೌಲಭ್ಯ ಒದಗಿಸುವ ಸೇವಾ ವಲಯಗಳ ವ್ಯಾಪ್ತಿಯಲ್ಲಿ ರೂ.01 ಕೋಟಿ ಮೌಲ್ಯದವರೆಗಿನ ಕ್ಲೈಮ್ ಅಥವಾ ಹಣಕಾಸಿನ ವ್ಯವಹಾರ ಸಂಬಂಧಿಸಿದಂತೆ ಸಾರಿಗೆ, ಅಂಚೆ, ದೂರವಾಣಿ, ವಿದ್ಯುತ್, ಬೆಳಕು, ನೀರು ಸರಬರಾಜು ಮಾಡುವ ಯಾವುದೇ ಸಂಸ್ಥೆಗಳ ಸೇವೆಗಳು, ಎಲ್.ಪಿ.ಜಿ. ಸಾರ್ವಜನಿಕ ನೈರ್ಮಲ್ಯ, ವಿಮೆ, ಆಸ್ಪತ್ರೆ ಮತ್ತು ಔಷಧಾಲಯ, ಬ್ಯಾಂಕು ಮತ್ತು ಹಣಕಾಸು ಸಂಸ್ಥೆ, ಶಿಕ್ಷಣ ಸಂಸ್ಥೆ, ಗೃಹ ಮತ್ತು ರಿಯಲ್ ಎಸ್ಟೇಟ್‌ಗಳಿಗೆ ಸಂಬಂಧಿಸಿದ ಸಾರ್ವಜನಿಕ ಉಪಯುಕ್ತ ಸೇವೆಗಳ ಪ್ರಕರಣಗಳನ್ನು ಖಾಯಂ ಜನತಾ ನ್ಯಾಯಾಲಯದಲ್ಲಿ ವಿಚಾರಣೆಗೆ ಕೈಗೆತ್ತಿಕೊಳ್ಳಲಾಗುತ್ತಿದೆ. ಇವುಗಳೊಂದಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾರ್ವಜನಿಕ ಉಪಯುಕ್ತತಾ ಸೇವೆಗಳ ವಿಷಯಗಳು ಕೂಡ ಈ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತವೆ.

ಇತರೆ ನ್ಯಾಯಾಲಯ ಹಾಗೂ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ನ್ಯಾಯಾಲಯಗಳಿಗಿಂತ,



ಉದಯವಾಹಿನಿ ಚಿತ್ರ

ಖಾಯಂ ಜನತಾ ನ್ಯಾಯಾಲಯ ಭಿನ್ನವಾಗಿದೆ ಎಂದು ನ್ಯಾಯಾಧೀಶ ರೋಣ ವಾಸುದೇವ ಹೇಳಿದರು.

ಖಾಯಂ ಜನತಾ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಯಾವುದೇ ಶುಲ್ಕವಿರುವುದಿಲ್ಲ. ಅರ್ಜಿದಾರರು ನೇರವಾಗಿ ಅಥವಾ ವಕೀಲರ ಮೂಲಕ ಪ್ರಕರಣ ದಾಖಲಿಸಬಹುದು. ಉಭಯ ಪಕ್ಷಗಾರರು ರಾಜೀ ಸಂಧಾನಕ್ಕೆ ಒಪ್ಪದಿದ್ದರೆ, ವಿವಾದವನ್ನು ವಿಚಾರಣೆ ಮಾಡಿ ಕಾನೂನು ಆಧಾರದಲ್ಲಿ ತ್ವರಿತವಾಗಿ ತೀರ್ಪು ನೀಡಲಾಗುತ್ತದೆ. ಖಾಯಂ ಜನತಾ ನ್ಯಾಯಾಲಯದ ಡಿಕ್ರಿ ಅಥವಾ ತೀರ್ಪನ್ನು ಯಾವುದೇ ಸಿವಿಲ್ ಅಥವಾ ಜಿಲ್ಲಾ ನ್ಯಾಯಾಲಯದಲ್ಲಿ ಪ್ರಶ್ನಿಸುವ ಅವಕಾಶ ಇರುವುದಿಲ್ಲ. ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸುವ ಮೂಲಕ ಮಾತ್ರ ಪ್ರಶ್ನಿಸಲು ಅವಕಾಶವಿರುತ್ತದೆ. ಜಿಲ್ಲಾ ನ್ಯಾಯಾಲಗಳ ಮೂಲಕ ಖಾಯಂ ಜನತಾ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸಲಾಗುತ್ತದೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಅಧ್ಯಕ್ಷರಾಗಿ ಹಾಗೂ ಸಾರ್ವಜನಿಕ ಉಪಯುಕ್ತ ಸೇವೆಗಳಲ್ಲಿ ಅನುಭವ ಹೊಂದಿರುವ ಇಬ್ಬರು ನಾಮನಿರ್ದೇಶಿತ ಸದಸ್ಯರು ಖಾಯಂ ಜನತಾ ನ್ಯಾಯಾಲಯದಲ್ಲಿ ಕಾರ್ಯನಿರ್ವಹಿಸುತ್ತಾರೆ ಎಂದು ನ್ಯಾಯಾಧೀಶ ರೋಣ ವಾಸುದೇವ ಮಾಹಿತಿ ನೀಡಿದರು. ಈ ವೇಳೆ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ವಿಜಯ್, 1ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧೀಶ ವೀರಣ್ಣ ಸೋಮಶೇಖರ್, ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಉಪಸ್ಥಿತರಿದ್ದರು.

### ಜಿಲ್ಲಾ ಹಂತದಲ್ಲೇ ಪ್ರಕರಣಗಳ ವಿಚಾರಣೆ

**ಚಿತ್ರದುರ್ಗ ವಿಭಾಗಕ್ಕೆ ಬರುವ ಖಾಯಂ ಜನತಾ ನ್ಯಾಯಾಲಯ ಬೆಂಗಳೂರಿನಲ್ಲಿದೆ. ಇನ್ನು ಮುಂದೆ ಸಾರ್ವಜನಿಕರು ಪ್ರಕರಣ ದಾಖಲಿಸಲು ಬೆಂಗಳೂರಿಗೆ ತೆರಳುವ ಪ್ರಮೇಯ ಉದ್ಭವಿಸುವುದಿಲ್ಲ. ಖಾಯಂ ಜನತಾ ನ್ಯಾಯಾಲಯದ ಕಾರ್ಯವೈಖರಿಯಲ್ಲಿ ಬದಲಾವಣೆ ತರಲಾಗಿದೆ. ಅರ್ಜಿದಾರರು ಜಿಲ್ಲಾ ನ್ಯಾಯಾಲಯದಲ್ಲಿಯೇ ಪ್ರಕರಣಗಳನ್ನು ದಾಖಲಿಸಬಹುದು. ಪ್ರಕರಣ ದಾಖಲಿಸಲು ಯಾವುದೇ ನ್ಯಾಯಾಲಯದ ಶುಲ್ಕ ಪಾವತಿಸುವ ಅಗತ್ಯ ಇರುವುದಿಲ್ಲ. ವಿಚಾರಣೆಗೆ ಹಾಜರಾಗಲು ವಿಭಾಗಮಟ್ಟಕ್ಕೆ ತೆರಳಬೇಕಿಲ್ಲ. ವಾರ ಅಥವಾ ಹದಿನೈದು ದಿನಗಳಿಗೊಮ್ಮೆ ಖಾಯಂ ಜನತಾ ನ್ಯಾಯಾಲಯದ ನ್ಯಾಯಾಧೀಶರು ಜಿಲ್ಲಾ ಕೇಂದ್ರಕ್ಕೆ ಆಗಮಿಸಿ ಪ್ರಕರಣಗಳನ್ನು ವಿಚಾರಣೆ ನಡೆಸುವರು. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 15100 ಅಥವಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಸಂಪರ್ಕಿಸುವಂತೆ ನ್ಯಾಯಾಧೀಶ ರೋಣ ವಾಸುದೇವ ಹೇಳಿದರು.**

## ಮಟ್ಕಾ ಲಾಟರಿ ಕಟ್ಟುನಿಟ್ಟಿನ ನಿಯಂತ್ರಣಕ್ಕೆ ಜಿಲ್ಲಾಧಿಕಾರಿ ಸೂಚನೆ

• ಉದಯವಾಹಿನಿ ಮಂಗಳೂರು

ಜಿಲ್ಲೆಯಲ್ಲಿ ಮಟ್ಕಾ ಹಾಗೂ ಲಾಟರಿ ಹಾವಳಿಯನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಹೆಚ್.ವಿ. ದರ್ಶನ್ ಸೂಚಿಸಿದ್ದಾರೆ. ಅವರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಅನಧಿಕೃತ ಲಾಟರಿ ಹಾವಳಿಯ ನಿಯಂತ್ರಣದ ಸಂಬಂಧ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಲಾಟರಿ ಮತ್ತು ಮಟ್ಕಾಕ್ಕೆ ಸಂಪೂರ್ಣ ನಿಷೇಧವಿದ್ದು, ಈ ನಿಟ್ಟಿನಲ್ಲಿ ಆಗ್ಗಿಂದಾಗೆ ತಪಾಸಣೆ ನಡೆಸುವಂತೆ ಅವರು ತಿಳಿಸಿದರು.

ಸಣ್ಣ ಉಳಿತಾಯ ಇಲಾಖೆ ಸಹಾಯಕ ನಿರ್ದೇಶಕ ಪ್ರಸನ್ನ ಅವರು ಮಾತನಾಡಿ, ಜಿಲ್ಲೆಯಲ್ಲಿ 2025ರ ಏಪ್ರಿಲ್‌ನಿಂದ ಜೂನ್‌ವರೆಗೆ ಒಟ್ಟು 23 ಮಟ್ಕಾ ಪ್ರಕರಣಗಳನ್ನು ಪತ್ತೆಹಚ್ಚಲಾಗಿದ್ದು, 25 ಆರೋಪಿಗಳ ಮೇಲೆ ಪೊಲೀಸ್ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್. ಕೆ, ಉಪ ಪೊಲೀಸ್ ಆಯುಕ್ತ ಮಿಥುನ್ ಹೆಚ್.ಎನ್, ವಾಣಿಜ್ಯ ತೆರಿಗೆ ಅಧಿಕಾರಿ ದಿನೇಶ್ ಮತ್ತಿತರರು ಉಪಸ್ಥಿತರಿದ್ದರು.

• ವ್ಯಾಪಾರ ಸಲಹೆಗಾರ ಪೀಟರ್ ನವರೋ ಅವರನ್ನು ಕುತಂತ್ರಿ ಎಂದು ಕರೆದ ಜಾನ್ ಬಾಲ್ಟನ್

# ಟ್ರಂಪ್-ಮೋದಿ ದೋಸ್ತಿ ಕೆಡಿಸಲು ಪೀಟರ್ ನವರೋ ಕುತಂತ್ರ

**ವಾಷಿಂಗ್ಟನ್ ಡಿಸಿ:** ಹದಗೆಟ್ಟಿರುವ ಭಾರತ-ಅಮೆರಿಕ ನಡುವಿನ ರಾಜತಾಂತ್ರಿಕ ಮತ್ತು ವಾಣಿಜ್ಯ ಸಂಬಂಧಗಳು ಹಂತ ಹಂತವಾಗಿ ಸುಧಾರಣೆ ಕಾಣುತ್ತಿವೆ. ಕಹಿ ಘಟನೆಗಳನ್ನು ಮರೆತು ಮತ್ತೆ ಒಂದಾಗಿ ಹೆಜ್ಜೆ ಹಾಕಲು ಉಭಯ ದೇಶಗಳೂ ಪ್ರಾಮಾಣಿಕ ಪ್ರಯತ್ನ ಆರಂಭಿಸಿವೆ. ಆದರೆ ಈ ಪ್ರಯತ್ನಗಳಿಗೆ ದೊಡ್ಡ ಅಡ್ಡಿಯಾಗಿರುವುದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವ್ಯಾಪಾರ ಸಲಹೆಗಾರ ಪೀಟರ್ ನವರೋ.

ಹೌದು,ಪೀಟರ್ ನವರೋ ಅವರಿಗೆ ಭಾರತ-ಅಮೆರಿಕ ಸಂಬಂಧ ಸುಧಾರಣೆ ಕಾಣುವುದು ಬೇಕಿಲ್ಲ. ಇದೇ ಕಾರಣಕ್ಕೆ ಅವರು ಪದೇ ಪದೇ ಭಾರತ ವಿರೋಧಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಭಾರತ-ರಷ್ಯಾ ಕಚ್ಚಾತೈಲ ವ್ಯಾಪಾರ ಸಂಬಂಧವನ್ನು ಬ್ರಾಹ್ಮಣರ ಲಾಭಕೋರತನ ಎಂದು ಕರೆದು ತೀವ್ರ ವಿವಾದ ಸೃಷ್ಟಿಸಿದ್ದ ಪೀಟರ್ ನವರೋ, ಉದ್ದೇಶಪೂರ್ವಕವಾಗಿ ಭಾರತ ಮತ್ತು ಅಮೆರಿಕವನ್ನು ದೂರ ಮಾಡಲು ನೋಡುತ್ತಿದ್ದಾರೆ. ಈ ಮಧ್ಯೆ, ಅಮೆರಿಕದ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಜಾನ್ ಬೋಲ್ಟನ್ ಅವರು, ಪೀಟರ್ ನವರೋ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಪೀಟರ್ ನವರೋ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ನಡುವೆ ಜಗಳ ಆರಂಭಿಸಲು ಕುತಂತ್ರ ನಡೆಸುತ್ತಿದ್ದಾರೆ ಎಂದು ಜಾನ್ ಬೋಲ್ಟನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಭಾರತದ ಖಾಸಗಿ ಸುದ್ದಿವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿರುವ ಜಾನ್ ಬೋಲ್ಟನ್, ಪೀಟರ್ ನವರೋ ಉದ್ದೇಶಪೂರ್ವಕವಾಗಿ ಭಾರತ-ಅಮೆರಕ ಸಂಬಂಧ ಹಾಳು ಮಾಡುತ್ತಿದ್ದು, ಟ್ರಂಪ್-ಮೋದಿ ಗೆಳೆತನ ಮುರಿಯುವ ಹುನ್ನಾರ ನಡೆಸಿದ್ದಾರೆ. ಉಭಯ ದೇಶಗಳ ನಡುವಿನ ಸಂಬಂಧ ಸುಧಾರಣೆ ಕಂಡರೆ, ಅವರಿಗೆ ಶ್ವೇತಭವನದಲ್ಲಿ ಸ್ಥಾನವಿರುವುದಿಲ್ಲ ಎಂಬ ಸತ್ಯ ಅವರಿಗೆ ಚೆನ್ನಾಗಿ ಗೊತ್ತಿದೆ ಎಂದು ಸೂಚ್ಯವಾಗಿ ಹೇಳಿದ್ದಾರೆ.

ಸದ್ಯ ಭಾರತ ಮತ್ತು ಅಮೆರಿಕ ನಡುವೆ ಬಿಗುವಿನ ವಾತಾವರಣ ಇದೆ ಆದರೆ ಎರಡೂ ದೇಶಗಳ ನಡುವಿನ ವ್ಯಾಪಾರ ಮಾತುಕತೆಗಳನ್ನು ನಿರ್ವಹಿಸುವ ನಿಜವಾದ ಸಂಧಾನಕಾರರು, ವಾತಾವರಣಗಳನ್ನು ತಿಳಿಗೊಳಿಸಲಿದ್ದಾರೆ. ಶೀಘ್ರದಲ್ಲೇ ಉತ್ತಮ ನಂಬಿಕೆಯೊಂದಿಗೆ ಸಂಬಂಧ ಸುಧಾರಣೆಯಾಗಲಿದೆ ಎಂದು ಜಾನ್ ಬೋಲ್ಟನ್ ಭರವಸೆ ವ್ಯಕ್ತಪಡಿಸಿದ್ದಾರೆ. ರಷ್ಯಾ-ಉಕ್ರೇನ್ ಯುದ್ಧವನ್ನು ಮೋದಿ ವಾರ್ ಎಂದು ಕರೆಯುವ ಮೂಲಕ ಪೀಟರ್‌ನವರೋ ಉದ್ಧಟತನ ಮೆರೆದಿದ್ದಾರೆ ಎಂದಿರುವ ಜಾನ್ ಬೋಲ್ಟನ್, ಇಂತಹ ಹೇಳಿಕೆಗಳು ಭಾರತ-ಅಮೆರಿಕ ಸಂಬಂಧವನ್ನು ಹಾಳು ಮಾಡುವ ಉದ್ದೇಶದಿಂದಲೇ ನೀಡಲಾಗುತ್ತಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ. ಭಾರತ-ಅಮೆರಿಕ ಸಂಬಂಧ ಸುಧಾರಣೆಗೊಳ್ಳುವುದು ಟ್ರಂಪ್ ಆಡಳಿತದಲ್ಲಿ ಕೆಲವರಿಗೆ ಬೇಕಿಲ್ಲ. ಪೀಟರ್ ನವರೋ ಅಂತಹವರಲ್ಲಿ ಒಬ್ಬರು. ಇಂತಹವರಿಂದಲೇ ಅಮೆರಿಕವು ಭಾರತವನ್ನು ರಷ್ಯಾ ಮತ್ತು ಚೀನಾಗಾಗಿ ಕಳೆದುಕೊಳ್ಳುತ್ತಿದೆ.

ಬಹುಶಃ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಡವಾಗಿಯಾದರೂ ಇದನ್ನು ಅರಿತುಕೊಂಡಿದ್ದಾರೆ. ಇದೇ ಕಾರಣಕ್ಕೆ ಅವರು ಭಾರತದೊಂದಿಗೆ ಸಂಬಂಧ ಸುಧಾರಣೆಗೆ ಮುಂದಡಿ ಇಟ್ಟಿದ್ದಾರೆ ಎಂದು ಅಮೆರಿಕದ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಭಿಪ್ರಾಯಪಟ್ಟಿದ್ದಾರೆ.

### ದೋಸ್ತಿ ಉಳಿಯುವ ಆಶಾವಾದ

ಇನ್ನು ಭಾರತ ಮತ್ತು ಅಮೆರಿಕ ಸಂಬಂಧಗಳ ಬಗ್ಗೆ ಮಾತನಾಡಿರುವ ಜಾನ್ ಬೋಲ್ಟನ್, ಖಂಡಿತವಾಗಿಯೂ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ರಾಜತಾಂತ್ರಿಕ ಮತ್ತು ವಾಣಿಜ್ಯ ಸಂಬಂಧ ಉಳಿಯಲಿದೆ. ಏಕೆಂದರೆ ಸಣ್ಣ-ಪುಟ್ಟ ಕುಂದು-ಕೊರತೆಗಳ ಕಾರಣಕ್ಕೆ ಸಂಬಂಧ ಕಡಿದುಕೊಳ್ಳುವಷ್ಟು ನಾವು ದುರ್ಬಲರಲ್ಲ. ಭಾರತ-ಅಮೆರಿಕ ಸುಂಕ ಸಮರ ಮುಗಿಯುವ ಹಂತ ತಲುಪಿದೆ. ಶೀಘ್ರದಲ್ಲೇ ಎಲ್ಲವೂ ಸರಿ ಹೋಗಲಿದೆ ಎಂದು ಜಾನ್ ಬೋಲ್ಟನ್ ಆಶಾವಾದ ವ್ಯಕ್ತಪಡಿಸಿದರು.


- ಪೀಟರ್ ನವರೋ ವಿರುದ್ಧ ಅಮೆರಿಕದ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಕಿಡಿ.
- ವ್ಯಾಪಾರ ಸಲಹೆಗಾರ ಪೀಟರ್ ನವರೋ ಅವರನ್ನು ಕುತಂತ್ರಿ ಎಂದು ಕರೆದ ಜಾನ್ ಬಾಲ್ಟನ್.
- ಭಾರತ-ಅಮೆರಿಕ ಸಂಬಂಧ ಸುಧಾರಣೆ ಕಂಡರೆ ನವರೋ ಶ್ವೇತಭವನದಲ್ಲಿ ಇರಲ್ಲ ಎಂದ ಬೋಲ್ಟನ್.

### ನವರೋ ಅತೃಪ್ತ ಆತ್ಮ

ಪೀಟರ್ ನವರೋ ಅವರನ್ನು ಅತೃಪ್ತ ಆತ್ಮ ಎಂದು ಕರೆದಿರುವ ಅಮೆರಿಕದ ಮಾಜಿ ಎನ್‌ಎಸ್‌ಎ ಜಾನ್ ಬೋಲ್ಟನ್, ನೀವು ಪೀಟರ್ ಅವರನ್ನು ಕೋಣೆಯಲ್ಲಿ ಒಬ್ಬಂಟಿಯಾಗಿ ಬಿಟ್ಟು ಒಂದು ಗಂಟೆಯ ನಂತರ ಹಿಂತಿರುಗಿದರೆ, ಅವರು ತಮ್ಮೊಂದಿಗೆ ಜಗಳವಾಡಿಕೊಂಡಿರುತ್ತಾರೆ ಎಂದು ಕುಹುಕವಾಡಿದ್ದಾರೆ.




## ನೇಪಾಳದಲ್ಲಿ ಮತ್ತೆ ಭುಗಿಲೆದ್ದ ದಂಗೆ: ಭಾರತೀಯ ಮಹಿಳೆಯ ಸಾವು



**ಕಠ್ಮಂಡು:** ನೇಪಾಳದಲ್ಲಿ ಇತ್ತೀಚೆಗೆ ಜನರ ವ್ಯಾಪಕ ಪ್ರತಿಭಟನೆಗೆ ಮಣಿದು ಕೆ.ಪಿ. ಓಲಿಯವರ ಸರ್ಕಾರ ಪತನವಾದ ಬೆನ್ನಲ್ಲೇ ಶಾಂತವಾಗಿದ್ದ ಪ್ರತಿಭಟನೆಗಳು ಸೆ. 11ರಿಂದ ಮತ್ತೆ ಭುಗಿಲೆದ್ದಿವೆ. ಸೆ. 12ರಂದು ಹಿಂಸಾಚಾರ ಮತ್ತೆ ತಾರಕಕ್ಕೇರಿದ್ದು, ಈ ಘಟನೆಯಲ್ಲಿ ಉತ್ತರ ಪ್ರದೇಶ ಮೂಲದ ಮಹಿಳೆಯೊಬ್ಬರು ಸಾವಿಗೀಡಾಗಿದ್ದಾರೆ. ರಾಜೇಶಾ ಗೋಲಾ ಎಂಬ ಮಹಿಳೆಯು ತನ್ನ ಪತಿಯ ಜೊತೆಗೆ ಇತ್ತೀಚೆಗೆ ನೇಪಾಳ ಪ್ರವಾಸಕ್ಕೆ ಹೋಗಿದ್ದರು. ಆದರೆ, ಕಳೆದ ವಾರ ದಿಢೀರನೆ ಜನಾಕ್ರೋಶ ಭುಗಿಲೆದ್ದಿದ್ದರಿಂದ ಅವರು ನೇಪಾಳದ ಕಠ್ಮಂಡುವಿನಲ್ಲಿ ತಾವು ಉಳಿದಿದ್ದ ಹಯಾತ್ ಲಾಡ್ಜ್‌ನಲ್ಲಿ ಉಳಿಯಬೇಕಾಯಿತು. ಇತ್ತೀಚೆಗೆ, ಗಲಭೆಗಳು ಒಂದೆರಡು ದಿನ ತಣ್ಣಗಾದರೂ ಸಾರಿಗೆ ಸೌಕರ್ಯ ಇಲ್ಲದಿದ್ದರಿಂದ ಅವರು ಹೋಟೆಲ್ ನಲ್ಲಿಯೇ ಉಳಿದುಕೊಂಡಿದ್ದರು. ಆದರೆ, ಕೆಳಕ್ಕೆ ಬಿದ್ದಾಗ ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಹತ್ತಿರದ ಕಠ್ಮಂಡುವಿನ ತ್ರಿಭುವನ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಅವರನ್ನು ಅಸುನೀಗಿದ್ದಾರೆ. ತ್ರಿಭುವನ್ ಆಸ್ಪತ್ರೆಯಲ್ಲಿ ಅವರ ಮರಣೋತ್ತರ ಪರೀಕ್ಷೆ ನಡೆದಾದ ನಂತರ ರಾಜೇಶ್ ಗೋಲಾ ಅವರ ಪಾರ್ಥಿವ ಶರೀರವನ್ನು ಅವರ ಪತಿ ರಾಮ್ ವೀರ್ ಸಿಂಗ್ ಗೋಲಾ ಅವರಿಗೆ ಹಸ್ತಾಂತರಿಸಲಾಗುತ್ತದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ರಾಮಜನ್ಮಭೂಮಿ ಬಗ್ಗೆ ನಾನು ಆಕ್ಷೇಪಾರ್ಹವಾಗಿ ಮಾತನಾಡದಿದ್ದಿದ್ದರೆ ಅಧಿಕಾರದಲ್ಲಿ ಮುಂದುವರಿಯುತ್ತಿದ್ದೆ ಎಂದು ಇತ್ತೀಚೆಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ನೇಪಾಳದ ಪ್ರಧಾನಿ ಕೆ.ಪಿ. ಓಲಿ ಶರ್ಮಾ ಹೇಳಿದ್ದಾರೆ. 2020ರ ಜುಲೈನಲ್ಲಿ ಹೇಳಿಕೆಯೊಂದನ್ನು ನೀಡಿದ್ದ ಓಲಿ, ಶ್ರೀರಾಮನ ನಿಜವಾದ ಜನ್ಮಭೂಮಿ ದಕ್ಷಿಣ ನೇಪಾಳದಲ್ಲಿದೆ. ಅಲ್ಲಿರುವ ಬೀರ್ ಗುಂಜ್ ನಲ್ಲಿರುವ ಥೋರಿ ಎಂಬ ನದಿ ತೀರದಲ್ಲಿರುವ ಪ್ರಾಂತ್ಯದಲ್ಲೇ ಶ್ರೀರಾಮ ಹುಟ್ಟಿದ್ದು. ಆದರೆ, ಭಾರತೀಯರು ಶ್ರೀರಾಮ ಹುಟ್ಟಿದ್ದು ಅಯೋಧ್ಯೆ ಎಂದು ಹೇಳುತ್ತಾರೆ. ಭಾರತದ ಉತ್ತರ ಪ್ರದೇಶದಲ್ಲಿರುವ ಅಯೋಧ್ಯೆಯು ಶ್ರೀರಾಮನ ನಕಲಿ ಜನ್ಮಭೂಮಿ, ದಕ್ಷಿಣ ನೇಪಾಳದಲ್ಲಿರುವುದೇ ಅಸಲಿ ಜನ್ಮಭೂಮಿ ಎಂದು ಹೇಳಿದ್ದರು.


### ಅನೇಕ ಕಟ್ಟಡಗಳಿಗೆ ಬೆಂಕಿ

ಮತ್ತೆ ಹಿಂಸಾಚಾರ ಭುಗಿಲೆದ್ದಿತು. ಆಕ್ರೋಶ ಭರಿತ ಜನರು ಕಠ್ಮಂಡುವಿನ ಅನೇಕ ಕಟ್ಟಡಗಳಿಗೆ ಬೆಂಕಿ ಹಾಕಿದರು. ಅದೇ ಸಂದರ್ಭದಲ್ಲಿ, ರಾಜೇಶಾ ಗೋಲಾ ದಂಪತಿ ಇದ್ದ ಹಯಾತ್ ಲಾಡ್ಜ್ ಗೂ ಬೆಂಕಿಯಿಟ್ಟರು. ಈ ಸಂದರ್ಭದಲ್ಲಿ ಇಡೀ ಹೋಟೆಲ್ ಧಗಧಗಿಸುವಾಗ ರಾಜೇಶಾ ಅವರು ತಮ್ಮ ಕೊಠಡಿಯಿಂದ ಕೆಳಕ್ಕೆ ಜಿಗಿದಿದ್ದರು.

## ಹೃದಯಾಘಾತದಿಂದ ಮೃತಪಟ್ಟ ಸೇನಾಧಿಕಾರಿ

**ಜಬಲ್ಪುರ:** ಹೃದಯಾಘಾತದಿಂದ ಸೇನಾಧಿಕಾರಿಯೊಬ್ಬರು ಸಾವನ್ನಪ್ಪಿರುವ ಘಟನೆ ಜಬಲ್ಪುರದಲ್ಲಿ ವರದಿಯಾಗಿದೆ. ಪಾರ್ಕ್ ಮಾಡಿದ್ದ ಕಾರಿನಲ್ಲಿ ಡ್ರೈವರ್ ಸೀಟಿನಲ್ಲಿ ಕುಳಿತ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ. ಮಿಲಿಟರಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದ ಮೇಜರ್ ಬಿ. ವಿಜಯ್ ಕುಮಾರ್ ಅವರು ಸದರ್ ಬಜಾರ್‌ನಲ್ಲಿರುವ ಇಂಡಿಯನ್ ಕಾಫಿ ಹೌಸ್ ಬಳಿ ತಮ್ಮ ಕಾರಿನಲ್ಲಿ ಶವವಾಗಿ ಪತ್ತೆಯಾಗಿದ್ದಾರೆ.ಅಲ್ಲೇ ಹೋಗುತ್ತಿದ್ದವರು ಅವರು ಚಾಲಕನ ಸೀಟಿನಲ್ಲಿ ತುಂಬಾ ಹೊತ್ತಿನಿಂದ ಅವರು ಕುಳಿತಿರುವುದನ್ನು ಗಮನಿಸಿ ಅನುಮಾನಗೊಂಡು ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಒಳಗಿದ್ದವ್ಯಕ್ತಿ ಮೇಜರ್ ವಿಜಯ್ ಕುಮಾರ್ ಎಂದು ಗುರುತಿಸಲಾಗಿದೆ. ಸೇನಾ ಅಧಿಕಾರಿಗಳಿಗೆ ಮಾಹಿತಿ ನೀಡಲಾಯಿತು ಮತ್ತು ಮೇಜರ್ ಕುಮಾರ್ ಅವರನ್ನು ಆಂಬ್ಯುಲೆನ್ಸ್ ಮೂಲಕ ಮಿಲಿಟರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು, ಅಲ್ಲಿ ವೈದ್ಯರು ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಿದರು. ಪ್ರಾಥಮಿಕ ತನಿಖೆಗಳು ಹೃದಯಾಘಾತದಿಂದ



ಸಾವು ಸಂಭವಿಸಿದೆ ಎಂದು ಸೂಚಿಸುತ್ತವೆ ಎಂದು ಪೊಲೀಸರು ತಿಳಿಸಿದ್ದಾರೆ, ಆದರೆ ಮರಣೋತ್ತರ ಪರೀಕ್ಷೆಯ ವರದಿಯ ನಂತರ ನಿಖರವಾದ ಕಾರಣವನ್ನು ದೃಢಪಡಿಸಲಾಗುವುದು. ಮೇಜರ್ ವಿಜಯ್ ಕುಮಾರ್ ಮೂಲತಃ ಬೆಂಗಳೂರಿನವರಾಗಿದ್ದು, ಜಬಲ್ಪುರದ ಮಿಲಿಟರಿ ಆಸ್ಪತ್ರೆ ಆವರಣದಲ್ಲಿರುವ ಸರ್ಕಾರಿ ಬಂಗಲೆಯಲ್ಲಿ ವಾಸಿಸುತ್ತಿದ್ದರು. ಅವರು ವೈಯಕ್ತಿಕ ಕೆಲಸದ ನಿಮಿತ್ತ ಸದರ್ ಬಜಾರ್‌ಗೆ ಬಂದಿದ್ದಾಗ ಇದ್ದಕ್ಕಿದ್ದಂತೆ ಅವರ ಆರೋಗ್ಯ ಹದಗೆಟ್ಟಿತು. ಕಾರಿನ ಬಾಗಿಲು ತೆರೆದಿತ್ತು ಮತ್ತು ಮೇಜರ್ ಕುಮಾರ್ ಬಹಳ ಹೊತ್ತು ಸುಮ್ಮನೆ ಕುಳಿತಿದ್ದರು ಎಂದು ಸ್ಥಳೀಯರು ಹೇಳಿದ್ದು, ಇದು ಅನುಮಾನಕ್ಕೆ ಕಾರಣವಾಯಿತು ಮತ್ತು ಜನರು ಅಧಿಕಾರಿಗಳಿಗೆ ಮಾಹಿತಿ ನೀಡಿದರು.

## ಮೋದಿ ಬರ್ತ್‌ಡೇ: ಬಿಜೆಪಿ ಸೇವಾ ಪಖ್ವಾಡ ಆಚರಣೆ

**ಜೈಪುರ:** ಅಭಿವೃದ್ಧಿ ಹೊಂದಿದ ಭಾರತ 2047 ಎಂಬ ದೃಷ್ಟಿಕೋನವನ್ನು ಸಾಕಾರಗೊಳಿಸುವತ್ತ ಒಂದು ಹೆಜ್ಜೆಯಾಗಿ, ಪ್ರಧಾನಿ ನರೇಂದ್ರ ಮೋದಿಯವರ ಜನ್ಮದಿನದ ಜೊತೆಜೊತೆಯಾಗಿ ಸೆಪ್ಟೆಂಬರ್ 17 ರಿಂದ ರಾಜಸ್ಥಾನದಲ್ಲಿ ಬಿಜೆಪಿ ಸೇವಾ ಪಖ್ವಾಡ ಆಚರಿಸಲಿದೆ.

ಮಹಾತ್ಮ ಗಾಂಧಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನಗಳನ್ನು ಗುರುತಿಸುವ ಸಲುವಾಗಿ ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 2 ರವರೆಗೆ ಬಿಜೆಪಿಯಿಂದ ಸೇವಾ ಪಖ್ವಾಡವನ್ನು ದೇಶಾದ್ಯಂತ ಆಚರಿಸಲಾಗುವುದು ಎಂದು ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಹೇಳಿದರು. ರಾಜ್ಯಮಟ್ಟದ ಕಾರ್ಯಾಗಾರವನ್ನುದ್ದೇಶಿಸಿ ಮಾತನಾಡಿದ ಶರ್ಮಾ, ಕಾರ್ಮಿಕನಿಂದ ರಾಷ್ಟ್ರದ ನಾಯಕನಾಗುವ ಪ್ರಧಾನಿ ಮೋದಿಯವರ ಪ್ರಯಾಣವು ರಾಷ್ಟ್ರ ಮೊದಲು, ಸಮಗ್ರತೆ, ಕಠಿಣ ಪರಿಶ್ರಮ ಮತ್ತು ಸೇವೆಯ ಮೌಲ್ಯಗಳನ್ನು ಕಲಿಸುತ್ತದೆ ಎಂದು ಹೇಳಿದರು.

ಪ್ರಧಾನಿ ಮೋದಿಯವರು ದೀನದಲಿತರ ಮತ್ತು ಬಡವರ ಉನ್ನತಿಗಾಗಿ ಮಾಡಿದ ಐತಿಹಾಸಿಕ ಪ್ರಯತ್ನಗಳು ಸಾಟಿಯಿಲ್ಲ. ಬಡವರಿಗೆ ಶಾಶ್ವತ ವಸತಿ, ಪ್ರತಿ ಮನೆಗೆ ಶೌಚಾಲಯ, ಪ್ರತಿ ಹಳ್ಳಿಗೆ ವಿದ್ಯುತ್ ಮತ್ತು ಸಾರ್ವತ್ರಿಕ ಆರೋಗ್ಯ ರಕ್ಷಣೆ ಮುಂತಾದ ಅವರ ಉಪಕ್ರಮಗಳು ಅವರ ದೂರದೃಷ್ಟಿ ಮತ್ತು ಸಮರ್ಪಣೆಯನ್ನು ಪ್ರದರ್ಶಿಸುತ್ತವೆ ಎಂದು ಶರ್ಮಾ ಹೇಳಿದರು. ಪ್ರಧಾನಿ ಮೋದಿ ರೂಪಿಸಿರುವ ಅಭಿವೃದ್ಧಿ ಹೊಂದಿದ ಭಾರತ 2047 ದೃಷ್ಟಿಕೋನವು ಪರಿವರ್ತನಾತ್ಮಕ ಗುರಿಯಾಗಿದ್ದು, ಈ ದೃಷ್ಟಿಕೋನವನ್ನು ಸಾಕಾರಗೊಳಿಸುವಲ್ಲಿ ಸೇವಾ ಪಖ್ವಾಡ ಅತ್ಯಗತ್ಯ ಪಾತ್ರವಹಿಸುತ್ತದೆ ಎಂದು ಅವರು ಹೇಳಿದರು.

ರಾಜ್ಯ ವಿಧಾನಸಭೆಯಲ್ಲಿ ಇತ್ತೀಚೆಗೆ ಅಂಗೀಕರಿಸಲಾದ ಮತಾಂತರ ವಿರೋಧಿ ಮಸೂದೆಯ ಬಗ್ಗೆಯೂ ವಿರೋಧ ಪಕ್ಷಗಳನ್ನು ಗುರಿಯಾಗಿಸಿಕೊಂಡು, ಕಾಂಗ್ರೆಸ್ ತುಷ್ಟೀಕರಣ ರಾಜಕೀಯವನ್ನು ಮಾಡುತ್ತಿದೆ ಎಂದು ಆರೋಪಿಸಿದರು.

## ಡಲ್ಲಾಸ್‌ನಲ್ಲಿ ಕರ್ನಾಟಕ ಮೂಲದ ವ್ಯಕ್ತಿಯ ಭೀಕರ ಶಿರಚ್ಛೇದ

**ಹೂಸ್ಟನ್:** ಟೆಕ್ಸಾಸ್‌ನ ಡಲ್ಲಾಸ್‌ನ ಡೌನ್‌ಟೌನ್ ಸೂಟ್ಸ್ ಮೋಟೆಲ್‌ನಲ್ಲಿ ವಾಷಿಂಗ್ ಮೆಷಿನ್‌ಗೆ ಸಂಬಂಧಿಸಿದ ವಿವಾದದ ನಂತರ 50 ವರ್ಷದ ಭಾರತೀಯ ಮೂಲದ ಮೋಟೆಲ್ ಮ್ಯಾನೇಜರ್‌ನನ್ನು ಅವರ ಪತ್ನಿ ಮತ್ತು ಮಗನ ಮುಂದೆಯೇ ಶಿರಚ್ಛೇದ ಮಾಡಲಾಗಿದೆ. ಕರ್ನಾಟಕದ ಮೂಲದ ಚಂದ್ರ ಮೌಳಿ ಬಾಬ್ ನಾಗಮಲ್ಲಯ್ಯ ತನ್ನ ಸಹೋದ್ಯೋಗಿಯಿಂದಲೇ ಕೊಲೆಯಾದ ಭಾರತೀಯ ಎಂದು ಗುರುತಿಸಲಾಗಿದೆ. ಕೊಲೆಗಾರ ಯೋರ್ಡಾನಿಸ್ ಕೋಬೋಸ್-ಮಾರ್ಟಿನೆಜ್ ಅವರೊಂದಿಗೆ ಮುರಿದ ವಾಷಿಂಗ್ ಮೆಷಿನ್ ವಿವಾದದ ನಂತರ ನಾಗಮಲ್ಲಯ್ಯ ಕೊಲ್ಲಲ್ಪಟ್ಟರು ಎಂದು ಡಲ್ಲಾಸ್ ಪೊಲೀಸ್ ಇಲಾಖೆ ತಿಳಿಸಿದೆ.

37 ವರ್ಷದ ಕೋಬೋಸ್-ಮಾರ್ಟಿನೆಜ್, ನಾಗಮಲ್ಲಯ್ಯ ಅವರನ್ನು ನೇರವಾಗಿ ಸಂಬೋಧಿಸುವ ಬದಲು ತನ್ನ ಸೂಚನೆಗಳನ್ನು ಅನುವಾದಿಸಲು ಇನ್ನೊಬ್ಬ ವ್ಯಕ್ತಿಯನ್ನು ಕೇಳಿದಾಗ ಕೋಪಗೊಂಡರು ಎಂದು ವರದಿಯಾಗಿದೆ. ಕಣ್ಗಾವಲು ದೃಶ್ಯಾವಳಿಯಲ್ಲಿ ಕೋಬೋಸ್-ಮಾರ್ಟಿನೆಜ್ ಮಚ್ಚನ್ನು ಹೊರತೆಗೆದು ನಾಗಮಲ್ಲಯ್ಯ ಮೇಲೆ ಹಲ್ಲೆ ನಡೆಸುತ್ತಿರುವುದನ್ನು ತೋರಿಸಲಾಗಿದೆ.



### ಕ್ರಿಮಿನಲ್ ಇತಿಹಾಸ ಹೊಂದಿರುವ ಕೋಬೋಸ್

ಬಲಿಪಶು ತನ್ನ ಹೆಂಡತಿ ಮತ್ತು 18 ವರ್ಷದ ಮಗ ಇದ್ದ ಮೋಟೆಲ್ ಕಚೇರಿಯ ಕಡೆಗೆ ಓಡಿಹೋದನು, ಆದರೆ ಶಂಕಿತನು ಅವನನ್ನು ಹಿಂಬಾಲಿಸಿ, ಅವರು ಮಧ್ಯಪ್ರವೇಶಿಸಲು ಪ್ರಯತ್ನಿಸಿದರೂ ಹಲ್ಲೆ ನಡೆಸಿದನು.ಆಟೋ ಕಳ್ಳತನ ಮತ್ತು ಹಲ್ಲೆಗಾಗಿ ಬಂಧನಗಳು ಸೇರಿದಂತೆ ಹೂಸ್ಟನ್‌ನಲ್ಲಿ ಹಿಂದಿನ ಕ್ರಿಮಿನಲ್ ಇತಿಹಾಸವನ್ನು ಹೊಂದಿರುವ ಕೋಬೋಸ್-ಮಾರ್ಟಿನೆಜ್ ಅವರನ್ನು ಬಾಂಡ್ ಇಲ್ಲದೆ ಬಂಧಿಸಲಾಗಿದೆ.

ಅಪರಾಧ ಸಾಬೀತಾದರೆ, ಅವರು ಪೆರೋಲ್ ಅಥವಾ ಮರಣದಂಡನೆ ಇಲ್ಲದೆ ಜೀವಾವಧಿ ಶಿಕ್ಷೆಯನ್ನು ಎದುರಿಸಬೇಕಾಗುತ್ತದೆ. ಸ್ನೇಹಿತರು ಮತ್ತು ಕುಟುಂಬಕ್ಕೆ ಬಾಬ್ ಎಂದು ಪರಿಚಿತರಾಗಿದ್ದ ನಾಗಮಲ್ಲಯ್ಯ ಅವರನ್ನು ಪ್ರೀತಿಯ ಪತಿ, ಶ್ರದ್ಧಾಭರಿತ ತಂದೆ ಮತ್ತು ಅವರು ತಿಳಿದಿರುವ ಪ್ರತಿಯೊಬ್ಬರ ಜೀವನವನ್ನು ಸ್ಪರ್ಶಿಸಿದ ದಯಾಳು ಎಂದು ಸ್ಮರಿಸಲಾಗುತ್ತದೆ.

ಈ ಊಹಿಸಲಾಗದ ದುರಂತವು ಹಠಾತ್ ಮಾತ್ರವಲ್ಲ, ತೀವ್ರ ಆಘಾತಕಾರಿಯಾಗಿತ್ತು ಎಂದು ಸ್ನೇಹಿತರು ಹೇಳಿದರು. ಬಾಬ್ ಅವರನ್ನು ರಕ್ಷಿಸಲು ಧೈರ್ಯದಿಂದ ಪ್ರಯತ್ನಿಸಿದ ಅವರ ಪತ್ನಿ ಮತ್ತು ಮಗನ ಮುಂದೆ ಸಂಭವಿಸಿದ ಕ್ರೂರ ದಾಳಿಯಲ್ಲಿ ಅವರ ಜೀವ ತೆಗೆಯಲಾಯಿತು. ಈ ಘಟನೆಯ ಆಘಾತಕಾರಿ ಸ್ವರೂಪ ನಮ್ಮ ಸಮುದಾಯವನ್ನು ಬೆಚ್ಚಿಬೀಳಿಸಿದೆ.

## ಹಿಮಾಚಲ ಪ್ರದೇಶ: ವ್ಯಾಪಕ ಮಳೆ ಮುನ್ಸೂಚನೆ

**ಶಿಮ್ಲಾ:** ರಾಜ್ಯದಾದ್ಯಂತ ಕಳೆದ ಎರಡು-ಮೂರು ದಿನಗಳಲ್ಲಿ ಮಾನ್ಸೂನ್‌ನ ತೀವ್ರತೆ ಸ್ವಲ್ಪ ಕಡಿಮೆಯಾಗಿ ಜನರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಆದರೆ ಈಗ ಮಳೆ ಮತ್ತೆ ತೀವ್ರಗೊಳ್ಳಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.

ಸೆಪ್ಟೆಂಬರ್ 15 ರಿಂದ 25 ರವರೆಗಿನ ವಾಡಿಕೆ ಮಳೆಯ ಅವಧಿಯ ನಂತರ, ಸೆಪ್ಟೆಂಬರ್ 25 ರ ಸುಮಾರಿಗೆ ಹಿಮಾಚಲ ಪ್ರದೇಶದಿಂದ ಮಾನ್ಸೂನ್ ಹಿಂದೆ ಸರಿಯುವ ಸಾಧ್ಯತೆಯಿದೆ ಎಂದು ಭಾರತ ಹವಾಮಾನ ಇಲಾಖೆ (ಐಎಂಡಿ) ಭವಿಷ್ಯ ನುಡಿದಿದೆ. ಆದರೆ, ಅಲ್ಲಿಯವರೆಗೆ, ರಾಜ್ಯದಲ್ಲಿ, ವಿಶೇಷವಾಗಿ ಮಧ್ಯ ಮತ್ತು ಎತ್ತರದ ಬೆಟ್ಟ ಪ್ರದೇಶಗಳಲ್ಲಿ ಮಳೆ ಮುಂದುವರಿಯುವ ನಿರೀಕ್ಷೆಯಿದೆ, ಇದಕ್ಕಾಗಿ ಸೆಪ್ಟೆಂಬರ್ 12 ರಿಂದ 14 ರವರೆಗೆ ಹಳದಿ ಎಚ್ಚರಿಕೆ ನೀಡಲಾಗಿದೆ.




### ಹವಾಮಾನ ಇಲಾಖೆ ಎಚ್ಚರಿಕೆ

ಸೆಪ್ಟೆಂಬರ್ 13 ಮತ್ತು 15 ರ ನಡುವೆ ಭಾರೀ ಮಳೆಯಾಗುವ ಬಗ್ಗೆ ಐಎಂಡಿ ಎಚ್ಚರಿಕೆ ನೀಡಿದ್ದು, ಅಧಿಕಾರಿಗಳು ಹೆಚ್ಚಿನ ಎಚ್ಚರಿಕೆ ವಹಿಸುವಂತೆ ಎಚ್ಚರಿಸಿದೆ. ಇಂದಿನಿಂದ ದಿ.14 ರವರೆಗೆ ರಾಜ್ಯದ ಹೆಚ್ಚಿನ ಭಾಗಗಳಲ್ಲಿ ಗುಡುಗು ಸಹಿತ ಭಾರೀ ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆ ಹಳದಿ ಎಚ್ಚರಿಕೆ ನೀಡಿದೆ. ಜಿಲ್ಲಾವಾರು ಮುನ್ಸೂಚನೆಯ ಪ್ರಕಾರ, ಇಂದು ಉನಾ, ಬಿಲಾಸ್ಪುರ್ ಮತ್ತು ಕಾಂಗ್ರಾ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಮಿಂಚು ಮತ್ತು ಗುಡುಗು ಸಹಿತ ಮಳೆಯಾಗುವ ಬಗ್ಗೆ ಹಳದಿ ಎಚ್ಚರಿಕೆ ನೀಡಲಾಗಿದೆ. ಸೆಪ್ಟೆಂಬರ್ 13 ರಂದು ಉನಾ, ಬಿಲಾಸ್ಪುರ್, ಹಮೀರ್ಪುರ್, ಕಾಂಗ್ರಾ, ಮಂಡಿ, ಶಿಮ್ಲಾ, ಸೋಲನ್ ಮತ್ತು ಸಿರ್ಮೌರ್ ಜಿಲ್ಲೆಗಳಲ್ಲಿ ಭಾರೀ ಮಳೆ ಮತ್ತು ಮಿಂಚಿನ ಬಗ್ಗೆ ಹಳದಿ ಎಚ್ಚರಿಕೆ ನೀಡಲಾಗುವುದು. ಸೆಪ್ಟೆಂಬರ್ 14 ರಂದು ಉನಾ, ಬಿಲಾಸ್ಪುರ್, ಹಮೀರ್ಪುರ್, ಜಿಲ್ಲೆಗಳಲ್ಲಿ ಹಳದಿ ಎಚ್ಚರಿಕೆ ಮುಂದುವರಿಯಲಿದೆ.

## ಕಟ್ಟಡದಿಂದ ಬಿದ್ದು ಚೀನಾ ನಟ ಮೆಂಗ್ಲಾಂಗ್ ಸಾವು

**ಮುಂಬೈ:** ಬಹುಮುಖ ಪ್ರತಿಮೆಯ ಚೀನಾದ ಯುವ ನಟ, ಗಾಯಕ ಮತ್ತು ಎಂವಿ ನಿರ್ದೇಶಕ ಅಲನ್ 'ಯು' ಮೆಂಗ್ಲಾಂಗ್ ಕಟ್ಟಡದಿಂದ ಬಿದ್ದು ದುರಂತ ಸಾವನ್ನಪ್ಪಿದ್ದಾರೆ. ಅವರಿಗೆ 37 ವರ್ಷ ವಯಸ್ಸಾಗಿತ್ತು. ಅವರ ಸಾವಿನ ಸುದ್ದಿಯನ್ನು ಅವರ ನಿರ್ವಹಣಾ ತಂಡವು ಸೆಪ್ಟೆಂಬರ್ 11 ರಂದು ಸಾಮಾಜಿಕ ಮಾಧ್ಯಮ ವೇದಿಕೆ ವೀಬೊದಲ್ಲಿ ಹೇಳಿಕೆಯ ಮೂಲಕ ದೃಢಪಡಿಸಿದೆ. ಮೆಂಗ್ಲಾಂಗ್ ಅವರ ಸಾವಿನ ಸುದ್ದಿಗೆ ಅಭಿಮಾನಿಗಳು ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ.



ಮೆಂಗ್ಲಾಂಗ್ 1988 ರಲ್ಲಿ ಕ್ಸಿನ್‌ಜಿಯಾಂಗ್‌ನ ಉರುಮ್ಕಿಯಲ್ಲಿ ಜನಿಸಿದ್ದು ಮೆಂಗ್ಲಾಂಗ್ ಮೊದಲು 2013 ರಲ್ಲಿ ಚೀನೀ ಗಾಯನ ರಿಯಾಲಿಟಿ ಶೋ ಸೂಪರ್ ಬಾಯ್ ನಲ್ಲಿ ಭಾಗವಹಿಸುವ ಮೂಲಕ ಜನಪ್ರಿಯತೆಯನ್ನು ಗಳಿಸಿದ್ದಾರೆ. ಅವರ ಧ್ವನಿ ಮತ್ತು ಪ್ರತಿಭೆ ಅವರಿಗೆ ಮನ್ನಣೆಯನ್ನು ತಂದುಕೊಟ್ಟಿದೆ, ಅದು ಅವರನ್ನು ನಟನೆಯತ್ತ ಕರೆದೊಯ್ಯಿತು. ಗೋ ಪ್ರಿನ್ಸೆಸ್ ಗೋ ವೆಬ್ ಸರಣಿಯಲ್ಲಿ ಅವರು ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ, ಇದು ಅವರ ಜನಪ್ರಿಯತೆಯನ್ನು ಇನ್ನಷ್ಟು ಹೆಚ್ಚಿಸಿದೆ. ಅಲನ್ ಯು ಮೆಂಗ್ಲಾಂಗ್ ಅನೇಕ ಸ್ಮರಣೀಯ ಪಾತ್ರಗಳನ್ನು ನಿರ್ವಹಿಸಿದ್ದಾರೆ. ನಂತರ ಮೆಂಗ್ಲಾಂಗ್ ಎಟರ್ನಲ್ ಲವ್ ಎಂಬ ಜನಪ್ರಿಯ ಫ್ಯಾಂಟಸಿ ಪ್ರಣಯ ಚಿತ್ರದಲ್ಲಿ ಬಾಯಿ ಕಿಯಾನ್ ಪಾತ್ರವನ್ನು ನಿರ್ವಹಿಸಿದ್ದಾರೆ.

ಅವರು ದಿ ಮೂನ್ ಬ್ರೈಟನ್ಸ್ ಫಾರ್ ಯು ನಂತಹ ಅನೇಕ ಚಲನಚಿತ್ರಗಳು ಮತ್ತು ಸರಣಿಗಳಲ್ಲಿ ಸ್ಮರಣೀಯ ಪಾತ್ರಗಳನ್ನು ನಿರ್ವಹಿಸಿದರು. ಅವರ ಪ್ರತಿಭೆಯು ಅವರನ್ನು ಚೀನೀ ಮನರಂಜನಾ ಉದ್ಯಮದಲ್ಲಿ ಉದಯೋನ್ಮುಖ ತಾರೆಯಾಗಿ ಸ್ಥಾಪಿಸಿದೆ. ನಟನೆಯ ಹೊರತಾಗಿ, ಯು ಸಂಗೀತ ವೀಡಿಯೊ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ.

# ನವೋದ್ಯಮಗಳಿಗೆ 100 ಕೋಟಿ ರೂ. ಆರ್ಥಿಕ ನೆರವು : ಸಚಿವ ಜೋಶಿ

## ಎಲೆಕ್ಟ್ರೋಲೈಜರ್ ಉತ್ಪಾದನೆಯಿಂದ ಹಿಡಿದು ಎಐ-ಚಾಲಿತ 25 ನವೋದ್ಯಮಗಳು ನಾವೀನ್ಯತೆ ಪ್ರದರ್ಶಿಸುತ್ತಿವೆ

**ನವದೆಹಲಿ:** ಹಸಿರು ಹೈಡ್ರೋಜನ್ ಸಂಶೋಧನೆ ಮತ್ತು ಅಭಿವೃದ್ಧಿನಿರತ ನವೋದ್ಯಮಗಳಿಗೆ ಕೇಂದ್ರ ಸರ್ಕಾರ ಒಟ್ಟಾರೆ 100 ಕೋಟಿ ರೂ. ಆರ್ಥಿಕ ನೆರವು ನೀಡಲಿದೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ಆಯೋಜಿಸಿದ್ದ ಮೊದಲ ವಾರ್ಷಿಕ ಹಸಿರು ಹೈಡ್ರೋಜನ್ ಸಂಶೋಧನೆ ಮತ್ತು ಅಭಿವೃದ್ಧಿ ಸಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಹಸಿರು ಹೈಡ್ರೋಜನ್ ನಾವೀನ್ಯತೆಯಲ್ಲಿ ನವೋದ್ಯಮಗಳನ್ನು ಬೆಂಬಲಿಸಲು 100 ಕೋಟಿ ರೂ. ಆರ್ಥಿಕ ನೆರವಿಗೆ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ ಎಂದರು.

ನವೀನ ಜಲಜನಕ ಉತ್ಪಾದನೆ, ಸಂಗ್ರಹಣೆ, ಸಾರಿಗೆ ಮತ್ತು ಬಳಕೆಯಲ್ಲಿ ತಂತ್ರಜ್ಞಾನ ಅಳವಡಿಕೆಯ ಪ್ರತಿ ಯೋಜನೆಗೆ 5 ಕೋಟಿ ವರೆಗೆ ಒದಗಿಸುತ್ತದೆ. ಎಲೆಕ್ಟ್ರೋಲೈಜರ್ ಉತ್ಪಾದನೆಯಿಂದ ಹಿಡಿದು ಎಐ-ಚಾಲಿತ 25 ನವೋದ್ಯಮಗಳು ನಾವೀನ್ಯತೆ ಪ್ರದರ್ಶಿಸುತ್ತಿವೆ. ರಸಗೊಬ್ಬರಗಳಲ್ಲಿ ಭಾರತ ಮೊದಲ ಹಸಿರು ಅಮೋನಿಯಾ ಹರಾಜು ನಡೆಸಿದ್ದು, 2024ರಲ್ಲಿ ಪ್ರತಿ ಕೆಜಿಗೆ 100.28ರೂ.ಇದ್ದರೆ, ಇದೀಗ ಪ್ರತಿ ಕೆಜಿಗೆ ಅದರ ಅರ್ಧದಷ್ಟು ಅಂದರೆ ಕೇವಲ 49.75 ರೂ. ಐತಿಹಾಸಿಕವಾಗಿ ಕಡಿಮೆ ಬೆಲೆ ದಾಖಲಾಗಿದೆ. ಒಡಿಶಾದ ಪ್ಯಾರದೀಪ್ ಫಾಸ್ಫೇಟ್‌ಗಳಲ್ಲಿ ಸರಬರಾಜು ಪ್ರಾರಂಭವಾಗಲಿದೆ ಎಂದು ಹೇಳಿದರು.

> ಕೇಂದ್ರ ಸರ್ಕಾರ 2023ರಲ್ಲಿ 19,744 ಕೋಟಿ ರೂ.ವೆಚ್ಚದಲ್ಲಿ ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್‌ಪ್ರಾರಂಭಿಸಿದ ಮೇಲೆ ಭಾರತ ಹಸಿರು ಹೈಡ್ರೋಜನ್‌ಗಾಗಿ ಜಾಗತಿಕ ಕೇಂದ್ರವಾಗಿ ಗುರುತಿಸಿಕೊಳ್ಳುತ್ತಿದೆ. ಹಸಿರು ಅಮೋನಿಯಾ ಸಂಶೋಧನೆ ಮತ್ತು ಅಭಿವೃದ್ಧಿ ಕುರಿತಂತೆ ಮೊದಲ ಸುತ್ತಿನಲ್ಲೇ 23 ಯೋಜನೆಗಳನ್ನು ನೀಡಿದ್ದು, ಐಐಟಿ, ಐಐಎಸ್‌ಇಆರ್, ಸಿಎಸ್‌ಐಆರ್ ಪ್ರಯೋಗಾಲಯ ಮತ್ತು ಕೈಗಾರಿಕಾ ಪಾಲುದಾರರು ಈ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದ್ದಾರೆ.
> -ಸಚಿವ ಜೋಶಿ



ಜುಲೈ 14ರಂದು ಆರಂಭಿಸಿದ 2ನೇ ಸುತ್ತಿನ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಸ್ತಾವನೆಗಳು ಸೆ.15ರವರೆಗೆ ತೆರೆದಿರುತ್ತವೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಹಾಗೂ ಇಯು-ಭಾರತ ವ್ಯಾಪಾರ ಮತ್ತು ತಂತ್ರಜ್ಞಾನ ಮಂಡಳಿ ಸಹಯೋಗ ನೀಡಲಿದೆ. ತ್ಯಾಜ್ಯದಿಂದ ಹೈಡ್ರೋಜನ್ ಉತ್ಪಾದನೆಗೆ 30ಕ್ಕೂ ಹೆಚ್ಚು ಜಂಟಿ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದೆ ಎಂದು ಅವರು ತಿಳಿಸಿದರು.

ವಾರ್ಷಿಕ 5 ಮಿ.ಮೆ. ಟನ್ ಹಸಿರು ಹೈಡ್ರೋಜನ್: ಭಾರತ 2030ರ ವೇಳೆಗೆ ವಾರ್ಷಿಕವಾಗಿ 5 ಮಿಲಿಯನ್ ಮೆಟ್ರಿಕ್ ಟನ್ ಹಸಿರು ಹೈಡ್ರೋಜನ್ ಉತ್ಪಾದನೆ ಗುರಿ ಹೊಂದಿದ್ದು, 125 ಜಿಡಬ್ಲ್ಯು ಹೊಸ ನವೀಕರಿಸಬಹುದಾದ ಸಾಮರ್ಥ್ಯ ಮತ್ತು 8 ಲಕ್ಷ ಕೋಟಿ ರೂ. ಹೂಡಿಕೆಗೆ ಒತ್ತು ನೀಡಲಾಗಿದೆ. ಇದರಿಂದ 6 ಲಕ್ಷ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಪ್ರತಿ ವರ್ಷ 50 ಮಿಲಿಯನ್ ಟನ್ ಸಿಒ2 ಕಡಿತವಾಗಲಿದೆ ಎಂದು ಹೇಳಿದರು.

### ಹೈಡ್ರೋಜನ್ ಪೈಲಟ್ ಯೋಜನೆ

ಭಾರತದ ಮೊದಲ ಬಂದರು ಆಧಾರಿತ ಹಸಿರು ಹೈಡ್ರೋಜನ್ ಪೈಲಟ್ ಯೋಜನೆಯನ್ನು ತಮಿಳುನಾಡಿನ ವಿ.ಒ.ಚಿದಂಬರನಾರ್ ಬಂದರಿನಲ್ಲಿ ಪ್ರಾರಂಭಿಸಲಾಗಿದೆ. ಉಕ್ಕಿನ ವಲಯದಲ್ಲಿ ಐದು ಪೈಲಟ್ ಯೋಜನೆಗಳು ಹೈಡ್ರೋಜನ್ ಆಧಾರಿತ ಡಿಕಾರ್ಬೊನೈಸೇಶನ್ ಪ್ರದರ್ಶಿಸುತ್ತಿವೆ. ಇಂಧನ ಭರ್ತಿ ಸೌಲಭ್ಯ ಅಭಿವೃದ್ಧಿಪಡಿಸಲಾಗುತ್ತಿದೆ.

ಹೈಡ್ರೋಜನ್ ಬಸ್ ಮತ್ತು ಇಂಧನ ತುಂಬುವ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಅವರು ವಿವರಿಸಿದರು.

ಕಾರ್ಯದರ್ಶಿ ಸಂತೋಷ್ ಕುಮಾರ್ ಸಾರಂಗಿ ಮಾತನಾಡಿ, ಹಸಿರು ಹೈಡ್ರೋಜನ್ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮ 400 ಕೋಟಿ ರೂ. ಬಜೆಟ್ ಹೊಂದಿದ್ದು, ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್ ಚಾಲನೆ ಬೆಂಬಲಿಸಲು ಸಿದ್ಧವಾಗಿದೆ ಎಂದರು.

### ಲಕ್ಷಾಂತರ ಉದ್ಯೋಗ ಸೃಷ್ಟಿ

ಭಾರತದ ರಫ್ತು ಬಲಪಡಿಸಲು ಕಾಂಡ್ಲಾ, ಪ್ಯಾರದೀಪ್ ಮತ್ತು ಟುಟಿಕೋರಿನ್ ಬಂದರುಗಳಲ್ಲಿ ಹೈಡ್ರೋಜನ್ ಹಬ್ ಅಭಿವೃದ್ಧಿಪಡಿಸಲಾಗುತ್ತಿದೆ. ಎನ್‌ಟಿಪಿಸಿ, ರಿಲಯನ್ಸ್ ಮತ್ತು ಐಒಸಿಎಲ್ ನಂತಹ ದೊಡ್ಡ ಉದ್ಯಮಗಳು, ಸ್ಟಾರ್ಟ್-ಅಪ್‌ಗಳು ಮತ್ತು ಎಂಎಸ್‌ಎಂಇಗಳು ಹೈಡ್ರೋಜನ್‌ನಲ್ಲಿ ಭಾರಿ ಪ್ರಮಾಣದಲ್ಲಿ ಹೂಡಿಕೆ ಮಾಡುತ್ತಿವೆ. ಇದರಿಂದ ಲಕ್ಷಾಂತರ ಹೊಸ ಉದ್ಯೋಗಗಳನ್ನು ಸೃಷ್ಟಿಸುತ್ತಿವೆ ಎಂದು ಸಚಿವ ಪ್ರಲ್ಹಾದ ಜೋಶಿ ಹೇಳಿದರು.

## ಮಿನಿ ನ್ಯೂಸ್

### ಹೈಕೋರ್ಟ್‌ಗೆ ಬಾಂಬ್ ಬೆದರಿಕೆ

• ಉದಯವಾಹಿನಿ ನವದೆಹಲಿ

ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿರುವ ಹೈಕೋರ್ಟ್‌ಗೆ ಬಾಂಬ್ ಬೆದರಿಕೆ ಪತ್ರ ಬಂದಿದ್ದು, ಆವರಣದಲ್ಲಿರುವ ಎಲ್ಲರನ್ನು ಸ್ಫೋಟಿಸಿ ಕಗ್ಗೊಲೆ ಮಾಡುವುದಾಗಿ ಬೆದರಿಕೆ ಹಾಕಲಾಗಿದೆ.

ಇದನ್ನು ಗಂಭೀರವಾಗಿ ಪರಿಗಣಿಸಿರುವ ದೆಹಲಿ ಪೊಲೀಸರು ಹೈಕೋರ್ಟ್‌ನಲ್ಲಿದ್ದ ನ್ಯಾಯಾಧೀಶರು, ವಕೀಲರು, ದೂರುದಾರರು, ಕಕ್ಷಿದಾರರು, ಸಾರ್ವಜನಿಕರು, ಸಿಬ್ಬಂದಿ ಸೇರಿದಂತೆ ಎಲ್ಲರನ್ನು ಹೊರ ಕಳುಹಿಸಿದ್ದಾರೆ. ನ್ಯಾಯಾಧೀಶರ ಕೊಠಡಿಯಲ್ಲಿ ಮತ್ತು ಆವರಣದ ಇತರ ಸ್ಥಳಗಳಲ್ಲಿ ಮೂರು ಸ್ಫೋಟಕಗಳನ್ನು ಇಡಲಾಗಿದೆ ಎಂದು ಬೆದರಿಕೆ ಪತ್ರದಲ್ಲಿ ಉಲ್ಲೇಖಿಸಲಾಗಿದ್ದು, ಮಧ್ಯಾಹ್ನ 2 ಗಂಟೆಯೊಳಗೆ ಸ್ಥಳಾಂತರ ಪೂರ್ಣಗೊಳಿಸಬೇಕು ಎಂದು ಪತ್ರದಲ್ಲಿ ಎಚ್ಚರಿಸಲಾಗಿದೆ. ನ್ಯಾಯಾಧೀಶರ ಕೊಠಡಿ ಮಧ್ಯಾಹ್ನ ಇಸ್ಲಾಮಿಕ್ ಪ್ರಾರ್ಥನೆಯ ನಂತರ ಸ್ವಲ್ಪ ಸಮಯದ ನಂತರ ಸ್ಫೋಟಗೊಳ್ಳುತ್ತದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಈ ಪತ್ರವು ಪಾಕಿಸ್ತಾನದ ಐಎಸ್‌ಐ ಕೋಶಗಳೊಂದಿಗಿನ ಸಂಪರ್ಕಗಳನ್ನು ಉಲ್ಲೇಖಿಸಿದೆ. ಇಮೇಲ್ ಮೂಲಕವೂ ಬೆದರಿಕೆ ಸಂದೇಶ ಬಂದಿದೆ. ಅದರಲ್ಲಿ ನ್ಯಾಯಾಲಯದ ಬಗ್ಗೆ ಉಲ್ಲೇಖಿಸಲಾಗಿದೆ. ಆದರೆ ನಿಖರವಾದ ಸ್ಥಳವನ್ನು ನಿರ್ದಿಷ್ಟಪಡಿಸಲಾಗಿಲ್ಲ. ಬಾಂಬ್ ಪತ್ತೆ ಮತ್ತು ವಿಲೇವಾರಿ ದಳವನ್ನು ತಕ್ಷಣವೇ ನಿಯೋಜಿಸಲಾಯಿತು ಮತ್ತು ಸಂಪೂರ್ಣ ಶೋಧಕ್ಕಾಗಿ ಪ್ರದೇಶವನ್ನು ಸುತ್ತುವರಿಯಲಾಯಿತು. ಇತ್ತೀಚಿನ ತಿಂಗಳುಗಳಲ್ಲಿ ರಾಷ್ಟ್ರೀಯ ರಾಜಧಾನಿ ಪ್ರದೇಶದ ವಿವಿಧ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ಇದೇ ರೀತಿಯ ವಂಚನೆ ಬೆದರಿಕೆಗಳು ಬಂದಿರುವ ನಡುವೆಯೇ ಈ ಘಟನೆ ನಡೆದಿದೆ.

### ಭೂಕುಸಿತ: ಮೂವರ ದುರ್ಮರಣ

**ಗ್ಯಾಂಗ್ಟಾಕ್:** ಸಿಕ್ಕಿಂನ ಗ್ಯಾಲ್ಶಿಂಗ್ ಜಿಲ್ಲೆಯಲ್ಲಿ ನಿರಂತರ ಮಳೆಯಿಂದಾಗಿ ಉಂಟಾದ ಭೂಕುಸಿತದಲ್ಲಿ ಒಂದೇ ಕುಟುಂಬದ ಮೂವರು ಪ್ರಾಣ ಕಳೆದುಕೊಂಡಿದ್ದಾರೆ. ಅಪ್ಪರ್ ರಿಂಬಿ ಪ್ರದೇಶದಲ್ಲಿ ಮಧ್ಯರಾತ್ರಿಯ ಸುಮಾರಿಗೆ ಭೂಕುಸಿತವಾದಾಗ ಮನೆಯವರು ನಿದ್ರಿಸುತ್ತಿದ್ದರು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಿಕ್ಕಿಂ ಪೊಲೀಸರು ಮತ್ತು ಸಶಸ್ತ್ರ ಸೀಮಾ ಬಲ್ ಸಿಬ್ಬಂದಿ ಮತ್ತು ಸ್ಥಳೀಯರು ಸ್ಥಳಕ್ಕೆ ಧಾವಿಸಿ ಕುಟುಂಬ ಸದಸ್ಯರನ್ನು ರಕ್ಷಿಸಲು ಪ್ರಯತ್ನಿಸಿದರು ಎಂದು ಗ್ಯಾಲ್ಶಿಂಗ್ ಪೊಲೀಸ್ ವರಿಷ್ಠಾಧಿಕಾರಿ ತ್ಸೆರಿಂಗ್ ಶೆರ್ಪಾ ತಿಳಿಸಿದ್ದಾರೆ.

ಕುಟುಂಬದ ಆರು ಸದಸ್ಯರಲ್ಲಿ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಆದರೆ ಇಬ್ಬರು ಗಾಯಗೊಂಡ ಮಹಿಳೆಯರನ್ನು ಗ್ಯಾಲ್ಶಿಂಗ್ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಯಿತು, ಅಲ್ಲಿ ಒಬ್ಬರು ಮೃತಪಟ್ಟಿದ್ದಾರೆ ಎಂದು ಎಸ್ಪಿ ಹೇಳಿದರು. ಕಾರ್ಯಾಚರಣೆಯ ಸಮಯದಲ್ಲಿ ಏಳು ವರ್ಷದ ಬಾಲಕ ಜೀವಂತವಾಗಿ ಪತ್ತೆಯಾಗಿದ್ದು ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ಅವರು ಹೇಳಿದರು. ನಿರಂತರ ಮಳೆಯ ಹೊರತಾಗಿಯೂ, ಸ್ಥಳೀಯ ಸಮುದಾಯದ ಬೆಂಬಲದೊಂದಿಗೆ ಪೊಲೀಸರು ಮತ್ತು ಎಸ್‌ಎಸ್‌ಬಿ ಸಿಬ್ಬಂದಿ ತ್ವರಿತವಾಗಿ ಕಾರ್ಯನಿರ್ವಹಿಸಿದರು.

### ಯುವತಿ ಮೇಲೆ ಅತ್ಯಾಚಾರ

**ಕನೌಜ್:** ವಿಶೇಷಚೇತನ ಯುವತಿ ಮೇಲೆ ಪಕ್ಕದ ಮನೆಯಾತ ಅತ್ಯಾಚಾರ ನಡೆಸಿರುವ ಘಟನೆ ಕನೌಜ್‌ನಲ್ಲಿ ನಡೆದಿದೆ.ಇಲ್ಲಿನ ತಾಲ್‌ಗ್ರಾಮ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಿವುಡ ಮತ್ತು ಮೂಕ ಹದಿಹರೆಯದ ಯುವತಿಯ ಮೇಲೆ ನೆರೆಹೊರೆಯವರು ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ತಾಲ್‌ಗ್ರಾಮ್ ಪೊಲೀಸ್ ಠಾಣೆಯ ಎಸ್‌ಎಚ್‌ಒ ಶಶಿಕಾಂತ್ ಕನೌಜಿಯಾ ಅವರು, ಸುಮಾರು 25 ವರ್ಷ ವಯಸ್ಸಿನ ನಿಖಿಲ್ ಎಂದು ಗುರುತಿಸಲಾದ ಆರೋಪಿಯ ವಿರುದ್ಧ ಪೋಕ್ಸೊ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ. ಆರೋಪಿ ತಲೆ ಮರೆಸಿಕೊಂಡಿದ್ದು, ಆತನನ್ನು ಬಂಧಿಸಲು ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.ಹದಿಹರೆಯದ ತಂದೆಯ ದೂರಿನ ಪ್ರಕಾರ, ನಿಖಿಲ್ ತನ್ನ ಹೊಲದಲ್ಲಿ ಕೆಲಸದಲ್ಲಿ ನಿರತನಾಗಿದ್ದಾಗ, ತನ್ನ ಮಗಳನ್ನು ತನ್ನ ಮನೆಗೆ ಕರೆದೊಯ್ದು, ಅಲ್ಲಿ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾನೆ ಎಂದು ಎಸ್‌ಎಚ್‌ಒ ತಿಳಿಸಿದ್ದಾರೆ.

### ಎನ್‌ಕೌಂಟರ್‌ಗೆ ಇಬ್ಬರು ನಕ್ಸಲರು ಬಲಿ

**ರಾಯ್ಪುರ:** ಛತ್ತೀಸ್‌ಗಢದ ರಾಯ್ಪುರದಿಂದ ದಕ್ಷಿಣಕ್ಕೆ ಸುಮಾರು 400 ಕಿ.ಮೀ ದೂರದಲ್ಲಿರುವ ಸಂಘರ್ಷಪೀಡಿತ ಬಿಜಾಪುರ ಜಿಲ್ಲೆಯ ನೈಋತ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ನಿಷೇಧಿತ ಸಿಪಿಐ(ಮಾವೋವಾದಿ) ಸಂಘಟನೆಯ ಇಬ್ಬರು ಕಾರ್ಯಕರ್ತರು ಸಾವನ್ನಪ್ಪಿದ್ದಾರೆ ಎಂದು ಬಸ್ತಾರ್ ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಬಿಜಾಪುರ ಜಿಲ್ಲೆಯ ನಿರ್ದಿಷ್ಟ ಸ್ಥಳದಲ್ಲಿ ಮಾವೋವಾದಿಗಳ ಉಪಸ್ಥಿತಿಯ ಬಗ್ಗೆ ಗುಪ್ತಚರ ಮಾಹಿತಿಯ ಆಧಾರದ ಮೇಲೆ, ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿದವು. ಭದ್ರತಾ ಪಡೆಗಳು ಮತ್ತು ಮಾವೋವಾದಿಗಳ ನಡುವೆ ಗುಂಡಿನ ಚಕಮಕಿ ನಡೆಯಿತು. ಗುಂಡಿನ ಚಕಮಕಿ ನಿರಂತರವಾಗಿ ಮುಂದುವರೆದಿದೆ. ಎನ್‌ಕೌಂಟರ್ ಸ್ಥಳದಿಂದ ಇಬ್ಬರು ಮಾವೋವಾದಿಗಳ ಮೃತದೇಹಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ಬಿಆರ್‌ಎಸ್ ದೇಶದ ಅತ್ಯಂತ ಶ್ರೀಮಂತ ಪ್ರಾದೇಶಿಕ ಪಕ್ಷ: 4ನೇ ಸ್ಥಾನದಲ್ಲಿ ಟಿಡಿಪಿ

**ವಿಜಯವಾಡ:** ಆಡಳಿತಾರೂಢ ತೆಲುಗು ದೇಶಂ ಪಕ್ಷ(ಟಿಡಿಪಿ) ತನ್ನ ಆದಾಯದಲ್ಲಿ ಮೂರು ಪಟ್ಟು ಹೆಚ್ಚಿಸಿಕೊಂಡಿದ್ದು, 2023-24ರ ಆರ್ಥಿಕ ವರ್ಷದಲ್ಲಿ 285.07 ಕೋಟಿ ರೂ. ಆದಾಯ ಗಳಿಸಿದೆ ಎಂದು ವರದಿ ತಿಳಿಸಿದೆ. ಟಿಡಿಪಿ 2022-23ರ ಆರ್ಥಿಕ ವರ್ಷದಲ್ಲಿ 63.9 ಕೋಟಿ ರೂ. ಆದಾಯ ಗಳಿಸಿತ್ತು. ಅಧಿಕಾರಕ್ಕೆ ಬಂದ ನಂತರ ತನ್ನ ಆದಾಯವನ್ನು ಮೂರು ಪಟ್ಟು ಹೆಚ್ಚಿಸಿಕೊಳ್ಳುವ ಮೂಲಕ ದೇಶದ 4ನೇ ಶ್ರೀಮಂತ ಪ್ರಾದೇಶಿಕ ಪಕ್ಷವಾಗಿ ಹೊರಹೊಮ್ಮಿದೆ. ಅಲ್ಲದೆ ಕೊಡುಗೆಗಳು ಮತ್ತು ದೇಣಿಗೆಗಳನ್ನು ಪಡೆಯುವಲ್ಲಿ ಅಗ್ರಸ್ಥಾನದಲ್ಲಿದೆ. ವಿರೋಧ ಪಕ್ಷವಾದ ವೈಎಸ್‌ಆರ್‌ಸಿಪಿ ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ 191 ಕೋಟಿ ರೂ. ಆದಾಯ ಗಳಿಸಿದೆ.

ಪ್ರಾದೇಶಿಕ ಪಕ್ಷಗಳ ಆದಾಯದ ಡೇಟಾವನ್ನು ಭಾರತದ ಚುನಾವಣಾ ಆಯೋಗ(ಇಸಿಐ)ದಿಂದ ಪಡೆಯಲಾಗಿದೆ ಎಂದು ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್ ತಿಳಿಸಿದೆ. ಆಶ್ಚರ್ಯಕರವಾಗಿ, ರಾಜ್ಯದ ಪ್ರಸ್ತುತ ಉಪಮುಖ್ಯಮಂತ್ರಿ ಕೆ. ಪವನ್ ಕಲ್ಯಾಣ್ ಸ್ಥಾಪಿಸಿದ ಜನ ಸೇನಾ ಪಕ್ಷವು ಇಸಿಐಗೆ ಸಲ್ಲಿಸಿದ ಆದಾಯ ಮತ್ತು ವೆಚ್ಚದ ಬಗ್ಗೆ ಯಾವುದೇ ಉಲ್ಲೇಖವಿಲ್ಲ. 2013 ರಲ್ಲಿ ಸ್ಥಾಪನೆಯಾದ ಈ ಪಕ್ಷವು 2019 ಮತ್ತು 2024 ರಲ್ಲಿ ಎರಡು ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿತ್ತು. ವರದಿಯ ಪ್ರಕಾರ, ಭಾರತೀಯ ರಾಷ್ಟ್ರ ಸಮಿತಿ(ಬಿಆರ್‌ಎಸ್) 685.5 ಕೋಟಿ ರೂ. ಆದಾಯದೊಂದಿಗೆ ಅಗ್ರಸ್ಥಾನದಲ್ಲಿದೆ.

# ಸಲ್ಮಾನ್ ಖಾನ್‌ಗೆ ಸೆಡ್ಡು ಹೊಡೆದ ಅಶ್ನೀರ್



ಸಲ್ಮಾನ್ ಖಾನ್ ಅವರು ಅಶ್ನೀರ್ ಅವರ ಮೇಲೆ ಅಸಮಾಧಾನ ಹೊರಹಾಕಿದ್ದರು. ಈಗ ಅಶ್ನೀರ್ ಒಂದು ರಿಯಾಲಿಟಿ ಶೋ ಹೋಸ್ಟ್ ಆಗಿದ್ದಾರೆ. ಇದನ್ನು ಅನೇಕರು ಸಲ್ಮಾನ್ ಖಾನ್ ವಿರುದ್ಧ ಸೇಡು ತೀರಿಸಿಕೊಳ್ಳುವ ಪ್ರಯತ್ನ ಎಂದು ಪರಿಗಣಿಸಿದ್ದಾರೆ. ಅಶ್ನೀರ್ ಸಲ್ಮಾನ್ ಖಾನ್ ಅವರನ್ನು ನೇರವಾಗಿ ಉಲ್ಲೇಖಿಸದೆ, ರಿಯಾಲಿಟಿ ಶೋಗಳಲ್ಲಿನ ಸ್ಪರ್ಧಿಗಳಿಗಿಂತ ಸೆಲೆಬ್ರಿಟಿಗಳ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸುವುದನ್ನು ಟೀಕಿಸಿದ್ದಾರೆ. ಉದ್ಯಮಿ ಅಶ್ನೀರ್ ಗ್ರೋವರ್ ಹಾಗೂ ನಟ ಸಲ್ಮಾನ್ ಖಾನ್ ಮಧ್ಯೆ ಯಾವುದೂ ಸರಿ ಇಲ್ಲ ಎಂಬುದು ಗೊತ್ತೇ ಇದೆ. ಸಲ್ಮಾನ್ ಖಾನ್ ಅವರು ಅಶ್ನೀರ್ ವಿರುದ್ಧ ನೇರವಾಗಿ ಅಸಮಾಧಾನ ಹೊರಹಾಕಿದ್ದರು. ಈಗ ಸಲ್ಮಾನ್ ಖಾನ್ ವಿರುದ್ಧ ಅಶ್ನೀರ್ ಸೇಡು ತೀರಿಸಿಕೊಂಡಂತೆ ಇದೆ. ಏಕೆಂದರೆ ರಿಯಾಲಿಟಿ ಶೋ ಒಂದಕ್ಕೆ ಅಶ್ನೀರ್ ಹೋಸ್ಟ್ ಆಗಿದ್ದಾರೆ. ಇದು ಸಲ್ಲು ವಿರುದ್ಧ ತೆಗೆದುಕೊಂಡ ರಿವೇಂಜ್ ಎಂದು ಅನೇಕರು ಹೇಳಿದ್ದಾರೆ.

**ಇದಪ್ಪಾ ಸೇಡು ಅಂದ್ರೆ**

**ಜಿದ್ದಿಗೆ ಬಿದ್ದ ಅಶ್ನೀರ್:** ಅಮೇಜಾನ್ ಎಂಎಕ್ಸ್ ಪ್ಲೇಯರ್‌ನಲ್ಲಿ 'ರೈಸ್ ಆಂಡ್ ಫಾಲ್ ಹೆಸರಿನ ಶೋ ಬರುತ್ತಿದೆ. ಇದಕ್ಕೆ ಅಶ್ನೀರ್ ಅವರು ಹೋಸ್ಟ್ ಆಗಿದ್ದಾರೆ. ಅವರು ಸಲ್ಮಾನ್ ಖಾನ್‌ಗೆ ಟಾಂಟ್ ಕೊಟ್ಟಿದ್ದಾರೆ. ಅದು ಕೂಡ ಹೆಸರು ಉಲ್ಲೇಖಿಸದೇ. 'ರಿಯಾಲಿಟಿ ಶೋ ಎಂದರೆ ಅದು ಸ್ಪರ್ಧಿಗಳ ಬಗ್ಗೆ ಆಗಿರಬೇಕು. ಆದರೆ, ಅದೃಷ್ಟವೋ ಅಥವಾ ದುರಾದೃಷ್ಟವೋ ಭಾರತದಲ್ಲಿ ಒಂದು ದೊಡ್ಡ ಶೋ ಇದೆ ಮತ್ತು ಅದರಲ್ಲಿ ದೊಡ್ಡ ಸ್ಟಾರ್ ಇದ್ದಾರೆ. ಹೀಗಾಗಿ ಆ ಶೋ ಅವರ ಬಗ್ಗೆ ಫೋಕಸ್ ಆಗಿದೆಯೇ ಹೊರತು, ಸ್ಪರ್ಧಿಗಳ ಬಗ್ಗೆ ಅಲ್ಲ' ಎಂದಿದ್ದಾರೆ.



**ಡಿಸಿಗೆ ಅರಣ್ಯ ಅಧಿಕಾರಿ ಪತ್ರ**

# ಪತ್ರ ಬರೆದು ಅಭಿಮಾನಿಗಳಿಗೆ ಶಾಕ್ ಕೊಟ್ಟ ಅನುಷ್ಕಾ ಶೆಟ್ಟಿ!

ಇತ್ತೀಚೆಗಷ್ಟೇ ಘಾಟಿ ಸಿನಿಮಾದ ಮೂಲಕ ಸೌಂಡ್ ಮಾಡಿದ್ದ ಅನುಷ್ಕಾ ಶೆಟ್ಟಿ ಇದೀಗ ಸೋಶಿಯಲ್ ಮೀಡಿಯಾ ಫಾಲೋವರ್ಸ್‌ಗಳಿಗೆ ಶಾಕಿಂಗ್ ನ್ಯೂಸ್ ಕೊಟ್ಟಿದ್ದಾರೆ. ಸೋಶಿಯಲ್ ಮೀಡಿಯಾದಿಂದ ದೂರಾಗುವ ಬಗ್ಗೆ ಹ್ಯಾಂಡ್ ರೈಟ್ ಲೆಟರ್ ಬರೆದಿದ್ದು, ಕಾರಣ ಏನು ಅನ್ನೋದನ್ನೂ ಅವರೇ ಹಂಚಿಕೊಂಡಿದ್ದಾರೆ.

ಬೇರೆ ನಟಿಯರಿಗೆ ಹೋಲಿಸಿದರೆ ಅನುಷ್ಕಾ ಶೆಟ್ಟಿ ಸೋಶಿಯಲ್ ಮೀಡಿಯಾಗಳಿಂದ ಅಂತರ ಕಾಯ್ದುಕೊಂಡೇ ಬಂದವರು. ಸಿನಿಮಾಗೆ ಸಂಬಂಧಪಟ್ಟ ಮಾಹಿತಿಯನ್ನಷ್ಟೇ ಆಗಾಗ ಹಂಚಿಕೊಳ್ಳುತ್ತಿದ್ದರು.

ವೈಯಕ್ತಿಕ ಪೋಸ್ಟ್ ಹಾಕುವುದು ವಿರಳಾತಿವಿರಳ. ಇದೀಗ ಸೋಶಿಯಲ್ ಮೀಡಿಯಾದಿಂದ ದೂರಾಗುವ ಕುರಿತು ಮಾಹಿತಿ ಹಂಚಿಕೊಂಡಿರುವ ಅನುಷ್ಕಾ ''ಸೋಶಿಯಲ್ ಮೀಡಿಯಾದಿಂದ ಸ್ವಲ್ಪ ದೂರ ಸರಿಯುತ್ತಿದ್ದೇನೆ. ಮೊಬೈಲ್ ಸ್ಕ್ರೋಲಿಂಗ್ ಹೊರತಾಗಿಯೂ ಜಗತ್ತಿನ ಜೊತೆ ಸಂಪರ್ಕ ಸಾಧಿಸಬೇಕಾಗಿದೆ.'' ಶೀಘ್ರದಲ್ಲೇ ಮತ್ತೆ ನಿಮ್ಮೊಂದಿಗೆ ಸೇರಿಕೊಳ್ಳುತ್ತೇನೆ ಎಂದು ಬರೆದಿದ್ದಾರೆ. ಸಾಮಾನ್ಯವಾಗಿ ಅನುಷ್ಕಾ ಸಿನಿಮಾದ ಹೊರತಾಗಿ ಹೆಚ್ಚು ಸುದ್ದಿಯಾಗೋದಿಲ್ಲ. ಇದೀಗ ಸಿನಿಮಾದಲ್ಲಿ ಕಾಣಿಸಿಕೊಳ್ಳುವುದೂ ಅಪರೂಪವಾಗಿದೆ. ಮತ್ತೆ ಪ್ರಭಾಸ್ ಜೊತೆ ಜೋಡಿಯಾಗಿ ನಟಿಸುವ ಸುದ್ದಿ ಕೇಳಿಬರುತ್ತಿದೆ. ಆದರೆ ಅಂಥಹ ಯಾವ ಪ್ರಾಜೆಕ್ಟ್ ಕೂಡ ಮುನ್ನಲೆಗೆ ಬಂದಿಲ್ಲ. ಇದೀಗ ಸೋಶಿಯಲ್ ಮೀಡಿಯಾದಿಂದ ಕೊಂಚ ಬ್ರೇಕ್ ತೆಗೆದುಕೊಳ್ಳುವ ನಿರ್ಧಾರವನ್ನು ಅವರು ಘೋಷಿಸಿದ್ದಾರೆ.

# ಮಾಂಸಾಹಾರ ಮದ್ಯ ಸೇವನೆ ಬಿಟ್ಟಿದ್ದರಂತೆ ರಣ್‌ಬೀರ್

ಯಶ್ ನಟನೆಯ ರಾಮಾಯಣ ಚಿತ್ರದ ಫಸ್ಟ್ ಗ್ಲಿಂಪ್ಸ್ ರಿಲೀಸ್ ಆದ ಬಳಿಕವಂತೂ ಕುತೂಹಲ ಹೆಚ್ಚಾಗಿದೆ. ಈ ಚಿತ್ರದಲ್ಲಿ ಬಾಲಿವುಡ್ ನಟ ರಣ್‌ಬೀರ್ ಕಪೂರ್ ರಾಮನ ಪಾತ್ರದಲ್ಲಿ ನಟಿಸಿದ್ದರೇ ಸಾಯಿಪಲ್ಲವಿ ಸೀತೆಯ ಪಾತ್ರದಲ್ಲಿ ನಟಿಸಿದ್ದಾರೆ. ಮುಂದಿನ ವರ್ಷ ದೀಪಾವಳಿಗೆ ರಾಮಾಯಣ ಮೊದಲ ಭಾಗ ತೆರೆಕಾಣೋಕೆ ಸಜ್ಜಾಗಿದೆ.

ಮೊದಲ ಭಾಗದ ಚಿತ್ರೀಕರಣವೂ ಮುಕ್ತಾಯವಾಗಿದ್ದು, ಈ ನಡುವೆ ನಟ ರಣ್‌ಬೀರ್ ಕಪೂರ್ (ಕುರಿತಾಗಿ ಹೊಸ ವಿಚಾರವೊಂದು ಬೆಳಕಿಗೆ ಬಂದಿದೆ. ಈ ಚಿತ್ರದಲ್ಲಿ ಶ್ರೀರಾಮನ ಪಾತ್ರಧಾರಿಯಾಗಿರುವ ರಣ್‌ಬೀರ್ ಕಪೂರ್ ಇದೇ ಪಾತ್ರಕ್ಕಾಗಿ ಆಹಾರ ಪದ್ಧತಿಯನ್ನ ಸಂಪೂರ್ಣವಾಗಿ ಬದಲಿಸಿಕೊಂಡಿದ್ದರಂತೆ. ಮಾಂಸಾಹಾರ, ಮದ್ಯಸೇವನೆ ತ್ಯಜಿಸಿ ಸಾತ್ವಿಕ ಆಹಾರ ಪದ್ಧತಿಯ ಮೊರೆ ಹೋಗಿದ್ದರಂತೆ. ಮರ್ಯಾದಾ ಪುರುಷೋತ್ತಮ ರಾಮ ಸಕಲ ಆಸೆಗಳನ್ನ ತ್ಯಜಿಸಿದ್ದ ರಘುಕುಲ ತಿಲಕ. ಇಂಥಹ ದೈವಾಂಶಸಂಭೂತ ಪಾತ್ರ ಮಾಡುವ ಅವಕಾಶ ಸಿಕ್ಕಿದ್ದಕ್ಕಾಗಿ ಆಧ್ಯಾತ್ಮಿಕ ಶಿಸ್ತನ್ನ ರೂಢಿಸಿಕೊಂಡಿದ್ದರಂತೆ ರಣ್‌ಬೀರ್ ಕಪೂರ್. ಮದ್ಯ ಹಾಗೂ ಮಾಂಸಾಹಾರ ಸೇವನೆ ತ್ಯಜಿಸಿದ್ದರಂತೆ. ಧ್ಯಾನ ಹಾಗೂ ಯೋಗದ ಮೂಲಕ ದೇಹ ಹುರಿಗೊಳಿಸಿಕೊಂಡು ರಾಮನ ಪಾತ್ರಕ್ಕಾಗಿ ಬಣ್ಣ ಹಚ್ಚಿದ್ದರಂತೆ.




**ರಾಮನ ಪಾತ್ರಕ್ಕಾಗಿ ಬದಲಾದರು**

ಈ ವಿಚಾರ ಬಾಲಿವುಡ್ ಅಂಗಳದಲ್ಲಿ ಬಹಳವೇ ಚರ್ಚೆಯಾಗುತ್ತಿದೆ. ನಿತೇಶ್ ತಿವಾರಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ರಾಮಾಯಣ ಮಹಾಕಾವ್ಯದಲ್ಲಿ ರಾಮನ ಪಾತ್ರದಲ್ಲಿ ನಟಿಸಲು ರಣಬೀರ್ ಕಪೂರ್ ತಮ್ಮ ಜೀವನಶೈಲಿಯಲ್ಲಿ ಪ್ರಮುಖ ಬದಲಾವಣೆಗಳನ್ನು ಮಾಡಿಕೊಂಡಿರುವ ವಿಚಾರ ಒಂದೊಂದಾಗೇ ಇದೀಗ ರಿವೀಲ್ ಆಗುತ್ತಿದೆ.

# ಲಾರೆನ್ಸ್ ಸಮಾಜ ಮುಖಿ ಕಾರ್ಯ

ರಾಘವ ಲಾರೆನ್ಸ್ ತಮಿಳಿನ ಸ್ಟಾರ್ ನಟರುಗಳಲ್ಲಿ ಒಬ್ಬರು. ಅದ್ಭುತವಾದ ಡ್ಯಾನ್ಸರ್ ಸಹ. ಆದರೆ ರಾಘವ್ ಲಾರೆನ್ಸ್ ಅವರು ತಮ್ಮ ಸಿನಿಮಾಗಳಷ್ಟೆ ತಮ್ಮ ಅದ್ಭುತ ಸಮಾಜ ಮುಖಿ ಕಾರ್ಯದಿಂದ ಹೆಚ್ಚು ಪರಿಚಿತರು. ರಾಘವ್ ಲಾರೆನ್ಸ್ ಅವರು ಹಲವಾರು ಅನಾಥ ಮಕ್ಕಳನ್ನು ದತ್ತು ಪಡೆದು ಶಿಕ್ಷಣ ನೀಡಿದ್ದಾರೆ. ಇದೀಗ ತಮ್ಮ ಸ್ವಂತ ಮನೆಯನ್ನೇ ಉಚಿತ ಶಾಲೆಯನ್ನಾಗಿ ಪರಿವರ್ತನೆ ಮಾಡಿದ್ದಾರೆ ನಟ.

ಭಾರತದಲ್ಲಿ ಹಲವು ಸ್ಟಾರ್ ನಟರುಗಳಿದ್ದಾರೆ. ತೆರೆಯ ಮೇಲೆ ದುಷ್ಟರನ್ನು ಶಿಕ್ಷಿಸುವ, ಶಿಷ್ಟರನ್ನು ರಕ್ಷಿಸುವ, ಬಡವರಿಗೆ ಸಹಾಯ ಮಾಡುವ, ವಿಶಾಲ ಗುಣ ಹೊಂದಿರುವ 'ಹೀರೋ' ಆಗಿ ಕಾಣಿಸಿಕೊಳ್ಳುತ್ತಾರೆ.



ಆದರೆ ಇವರಲ್ಲಿ ಹಲವಾರು ಮಂದಿ ಕೇವಲ ತೆರೆಯ ಮೇಲಷ್ಟೆ ಹೀರೋಗಳು, ತೆರೆಯ ಹಿಂದೆ ಕಾಮ, ಕ್ರೋಧ, ಲೋಭ, ಮದ, ಮತ್ಸರ ತುಂಬಿರುವ ಸಾಮಾನ್ಯ ಮನುಷ್ಯರು. ತೆರೆಯ ಮೇಲೆ ಹಾಗೂ ತೆರೆಯ ಹೊರಗೆಯೂ 'ಹೀರೋ' ಆಗಿ ಬದುಕುತ್ತಿರುವವರು ಬೆರಳೆಣಿಕೆಯಷ್ಟು ನಟರು ಮಾತ್ರ. ಅವರಲ್ಲಿ ಒಬ್ಬರು ನಟ ರಾಘವ್ ಲಾರೆನ್ಸ್. ಸಾಮಾನ್ಯ ಕಾರು ಕ್ಲೀನರ್ ಆಗಿದ್ದವರು ತಮ್ಮ ಸ್ವಂತ ಪ್ರತಿಭೆಯಿಂದಾಗಿ ಇಂದು ತಮಿಳಿನ ಸ್ಟಾರ್ ನಟರುಗಳ ಸಾಲಿನಲ್ಲಿ ನಿಂತಿದ್ದಾರೆ. ಅದ್ಭುತ ಡ್ಯಾನ್ಸರ್ ಅಗಿ ದ್ದ ರಾಘವ್ ಲಾರೆನ್ಸ್, ಸಿನಿಮಾ ಹಾಡುಗಳಲ್ಲಿ ಹಿಂದಿನ ಸಾಲಿನಲ್ಲಿ ಡ್ಯಾನ್ಸ್ ಮಾಡುವವರಾಗಿದ್ದವರು, ಬಳಿಕ ಸ್ವಂತ ಪರಿಶ್ರಮದಿಂದ ಲೀಡ್ ಡ್ಯಾನ್ಸರ್ ಆಗಿ ಬಳಿಕ ಕೊರಿಯಾಗ್ರಫರ್ ಆದರು. ಬಳಿಕ ನಟರಾಗಿಯೂ ಹೆಸರು ಮಾಡಿದರು. ಈಗ ತಮಿಳಿನ ಸ್ಟಾರ್ ನಟ ಮತ್ತು ನಿರ್ದೇಶಕರಾಗಿದ್ದಾರೆ. ಆದರೆ ರಾಘವ್ ಲಾರೆನ್ಸ್ ತಮ್ಮ ನಟನೆಯಷ್ಟೆ ತಾವು ಮಾಡುವ ಸಮಾಜ ಮುಖಿ ಕಾರ್ಯದಿಂದಲೂ ದೊಡ್ಡ ಮಟ್ಟದ ಹೆಸರು ಗಳಿಸಿದ್ದಾರೆ.

# ಬಿಡುಗಡೆಗೆ ಮುಂಚೆಯೇ ಬಂಡವಾಳ ವಾಪಸ್

ರಿಷಬ್ ಶೆಟ್ಟಿ ನಟಿಸಿ, ನಿರ್ದೇಶನ ಮಾಡಿರುವ 'ಕಾಂತಾರ ಚಾಪ್ಟರ್ 1' ಸಿನಿಮಾ ಕೆಲವೇ ದಿನಗಳಲ್ಲಿ ಬಿಡುಗಡೆ ಆಗಲಿದ್ದು, ಹೊಂಬಾಳೆ ಫಿಲಮ್ಸ್‌ನವರು ಸಿನಿಮಾದ ಬ್ಯುಸಿನೆಸ್‌ನಲ್ಲಿ ತೊಡಗಿಕೊಂಡಿದ್ದಾರೆ. ಮಾರ್ಕೆಟಿಂಗ್‌ನಲ್ಲಿ ಶಕ್ತರಾದ ಹೊಂಬಾಳೆ ಫಿಲಮ್ಸ್‌ನವರು ಸಿನಿಮಾ ಬಿಡುಗಡೆ ಆಗುವ ಮುಂಚೆಯೇ ಸಿನಿಮಾಕ್ಕೆ ಹಾಕಿರುವ ಬಂಡವಾಳವನ್ನು ಮರಳಿ ಪಡೆದುಕೊಂಡಿದ್ದಾರೆ. ರಿಷಬ್ ಶೆಟ್ಟಿ ನಟಿಸಿ, ನಿರ್ದೇಶನ ಮಾಡಿರುವ 'ಕಾಂತಾರ ಚಾಪ್ಟರ್ 1' ಸಿನಿಮಾ ಬಿಡುಗಡೆಗೆ ಕೆಲವೇ ದಿನಗಳು ಬಾಕಿ ಇದೆ. ಅಕ್ಟೋಬರ್ 2 ರಂದು ಸಿನಿಮಾ ಬಿಡುಗಡೆ ಆಗಲಿದೆ. ಹೊಂಬಾಳೆ ಫಿಲಮ್ಸ್ ನಿರ್ಮಾಣ ಮಾಡಿರುವ ಈ ಸಿನಿಮಾದ ಪ್ರಿ ರಿಲೀಸ್ ಸೇಲ್ಸ್ ಚಾಲ್ತಿಯಲ್ಲಿದ್ದು, ಸಿನಿಮಾ ಬಿಡುಗಡೆ ಆಗಲು ಇನ್ನೂ ಮೂರು ವಾರಗಳಿರುವಾಗಲೇ ಸಿನಿಮಾಕ್ಕೆ ಹಾಕಿರುವ ಬಂಡವಾಳವನ್ನು ಹೊಂಬಾಳೆ ಮರಳಿ ಪಡೆದುಕೊಂಡಿದೆ.





**ಪ್ರಿ ರಿಲೀಸ್ ಸೇಲ್ಸ್ ಚಾಲ್ತಿ**

ಸಿನಿಮಾದ ವಿತರಣೆ ಹಕ್ಕು ಮಾರಾಟ, ಆಡಿಯೋ ಹಕ್ಕು ಮಾರಾಟ, ಡಿಜಿಟಲ್ ಹಕ್ಕು ಮಾರಾಟಗಳನ್ನು ಹೊಂಬಾಳೆ ಫಿಲಮ್ಸ್ ಈಗಾಗಲೇ ಮಾಡಿದೆ. ಇವುಗಳಿಂದಲೇ ಸಿನಿಮಾಕ್ಕೆ ಹಾಕಿರುವ ಅಷ್ಟೂ ಬಂಡವಾಳವನ್ನು ಈಗಾಗಲೇ ಹೊಂಬಾಳೆ ಫಿಲಮ್ಸ್ ಮರಳಿ ಪಡೆದುಕೊಂಡಿದೆ. ಅದರಲ್ಲೂ ಒಟಿಟಿ ಹಕ್ಕು ಮಾರಾಟ ಒಂದರಿಂದಲೇ ಸಿನಿಮಾಕ್ಕೆ 125 ಕೋಟಿ ರೂಪಾಯಿ ಲಾಭ ಬಂದಿದೆ. ಸಿನಿಮಾದ ಆಡಿಯೋ ಹಕ್ಕುಗಳು ಸಹ ದೊಡ್ಡ ಮೊತ್ತಕ್ಕೆ ಮಾರಾಟ ಆಗಿವೆ ಎನ್ನಲಾಗುತ್ತಿದೆ. ಇದರ ಜೊತೆಗೆ ವಿವಿಧ ರಾಜ್ಯಗಳ ವಿತರಣೆ ಹಕ್ಕುಗಳನ್ನು ಹೊಂಬಾಳೆ ಫಿಲಮ್ಸ್ ಮಾರಾಟ ಮಾಡಿದ್ದು ಅವುಗಳಿಂದಲೂ ಸಹ ದೊಡ್ಡ ಮೊತ್ತದ ಹಣವನ್ನು ಪಡೆದುಕೊಂಡಿದೆ.

## 5+3+3.. ಪಾಕ್ ವಿರುದ್ಧ ಈ ಸೂತ್ರದೊಂದಿಗೆ

# ಕಣಕ್ಕಿಳಿಯಲಿದೆ ಟೀಂ ಇಂಡಿಯಾ

ಏಷ್ಯಾ ಕಪ್ 2025 ರಲ್ಲಿ ಯುಎಇ ವಿರುದ್ಧ ಭಾರತದ ಗೆಲುವಿನ ನಂತರ, ಪಾಕಿಸ್ತಾನದ ವಿರುದ್ಧದ ಹೈ-ವೋಲ್ಟೇಜ್ ಪಂದ್ಯಕ್ಕೆ ಎಲ್ಲರೂ ಕಾತುರರಾಗಿದ್ದಾರೆ. ಮಾಜಿ ಕ್ರಿಕೆಟಿಗ ಅಜಯ್ ಜಡೇಜಾ ಅವರು ಭಾರತದ ಸಂಭಾವ್ಯ ಆಡುವ ಹನ್ನೊಂದರ ಬಳಗವನ್ನು ಊಹಿಸಿದ್ದು, ಐದು ಬ್ಯಾಟ್ಸ್‌ಮನ್‌ಗಳು, ಮೂವರು ಆಲ್‌ರೌಂಡರ್‌ಗಳು ಮತ್ತು ಮೂವರು ಬೌಲರ್‌ಗಳನ್ನು ಒಳಗೊಂಡ ತಂಡವನ್ನು ಹೆಸರಿಸಿದ್ದಾರೆ. ಯುಎಇ ವಿರುದ್ಧ ಆಡಿದ ತಂಡವೇ ಪಾಕಿಸ್ತಾನ ವಿರುದ್ಧವೂ ಆಡಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

2025 ರ ಏಷ್ಯಾಕಪ್‌ನಲ್ಲಿ ಯುಎಇ ವಿರುದ್ಧ ಏಕಪಕ್ಷೀಯ ಗೆಲುವು ಸಾಧಿಸಿರುವ ಟೀಂ ಇಂಡಿಯಾ ಇದೀಗ ಪಾಕಿಸ್ತಾನ ವಿರುದ್ಧದ ಹೈ ವೋಲ್ಟೇಜ್ ಪಂದ್ಯಕ್ಕಾಗಿ ಕಾಯುತ್ತಿದೆ. ಸೂಪರ್ ಸಂಡೇಯಂದು ನಡೆಯಲಿರುವ ಉಭಯ ತಂಡಗಳ ಕದನಕ್ಕೆ ಅಭಿಮಾನಿಗಳು ಕೂಡ ಕಾತುರದಿಂದ ಕಾಯುತ್ತಿದ್ದಾರೆ. ಸೆಪ್ಟೆಂಬರ್ 14 ರಂದು ನಡೆಯಲಿರುವ ಈ ಪಂದ್ಯಕ್ಕಾಗಿ, ಟೀಂ ಇಂಡಿಯಾದ ಪ್ಲೇಯಿಂಗ್ 11 ಹೇಗಿರಲಿದೆ ಎಂಬುದು ಎಲ್ಲರ ಪ್ರಶ್ನೆಯಾಗಿದೆ. ಇದೀಗ ಆ ಪ್ರಶ್ನೆಗೆ ಉತ್ತರ ಸಿಕ್ಕಿದ್ದು, ಬದ್ಧವೈರಿಯ ವಿರುದ್ಧ ಟೀಂ ಇಂಡಿಯಾ ಐವರು ಬ್ಯಾಟ್ಸ್‌ಮನ್‌ಗಳು, ಮೂವರು ಆಲ್‌ರೌಂಡರ್‌ಗಳು ಮತ್ತು ಮೂವರು ಬೌಲರ್‌ಗಳೊಂದಿಗೆ ಕಣಕ್ಕಿಳಿಯಲಿದೆ ಎಂದು ಭಾರತದ ಮಾಜಿ ಕ್ರಿಕೆಟಿಗ ಅಜಯ್ ಜಡೇಜಾ ಹೇಳಿದ್ದಾರೆ.

ಅಜಯ್ ಜಡೇಜಾ ಅವರ ಪ್ರಕಾರ, ಯುಎಇ ವಿರುದ್ಧ ಆಡಿದ ಅದೇ ತಂಡವು ಪಾಕಿಸ್ತಾನದ ವಿರುದ್ಧವೂ ಆಡುವುದನ್ನು ಕಾಣಬಹುದು. ಅಂದರೆ, ತಂಡದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಯುಎಇ ವಿರುದ್ಧದ ಪಂದ್ಯ ಪ್ರಾರಂಭವಾಗುವ ಸ್ವಲ್ಪ ಮೊದಲು ಏಷ್ಯಾಕಪ್ ಪ್ರಸಾರ ಚಾನೆಲ್ ಸೋನಿ ನೆಟ್‌ವರ್ಕ್‌ನಲ್ಲಿ ಅಜಯ್ ಜಡೇಜಾ ಈ ವಿಷಯವನ್ನು ಹೇಳಿದ್ದರು.



ಯುಎಇ ವಿರುದ್ಧ ಭಾರತದ ಆಡುವ ಹನ್ನೊಂದರ ಬಳಗದ ಬಗ್ಗೆ ಚರ್ಚಿಸುವಾಗ ಅಜಯ್ ಜಡೇಜಾ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದರು. ಯುಎಇ ವಿರುದ್ಧ ಭಾರತ 8 ಬ್ಯಾಟ್ಸ್‌ಮನ್‌ಗಳನ್ನು ಆಡಿಸಬಾರದಿತ್ತು. ಆದಾಗ್ಯೂ, ತಂಡದಲ್ಲಿ 8 ಬ್ಯಾಟ್ಸ್‌ಮನ್‌ಗಳನ್ನು ಕಣಕ್ಕಿಳಿಸಿರುವುದರಿಂದ ಇದೇ ತಂಡವೇ ಪಾಕಿಸ್ತಾನ ವಿರುದ್ಧ ಕಣಕ್ಕಿಳಿಯಲಿದೆ. ಅಂದರೆ, ಯುಎಇ ವಿರುದ್ಧ ಆಡಿದ ಅದೇ ತಂಡ ಪಾಕಿಸ್ತಾನದ ವಿರುದ್ಧವೂ ಆಡುತ್ತದೆ ಎಂಬುದು ಅಜಯ್ ಜಡೇಜಾ ಅಭಿಪ್ರಾಯವಾಗಿದೆ.

ಬ್ಯಾಟ್ಸ್‌ಮನ್‌ಗಳು- ಶುಭ್‌ಮನ್ ಗಿಲ್, ಅಭಿಷೇಕ್ ಶರ್ಮಾ, ಸೂರ್ಯಕುಮಾರ್ ಯಾದವ್ (ನಾಯಕ), ತಿಲಕ್ ವರ್ಮಾ, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್)

ಆಲ್‌ರೌಂಡರ್‌ಗಳು- ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್

ಬೌಲರ್‌ಗಳು- ಕುಲ್ದೀಪ್ ಯಾದವ್, ವರುಣ್ ಚಕ್ರವರ್ತಿ, ಜಸ್ಪ್ರೀತ್ ಬುಮ್ರಾ.

# ಭಾರತ- ಪಾಕ್ ಪಂದ್ಯಕ್ಕೂ ಫ್ಯಾನ್ಸ್ ಬರ

2025ರ ಏಷ್ಯಾಕಪ್‌ನಲ್ಲಿ ಅಭಿಮಾನಿಗಳ ಸಂಖ್ಯೆ ಕಡಿಮೆಯಾಗಿದ್ದು, ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಅನುಪಸ್ಥಿತಿಯೇ ಇದಕ್ಕೆ ಕಾರಣ ಎಂದು ಮಾಜಿ ಕ್ರಿಕೆಟಿಗ ಆಕಾಶ್ ಚೋಪ್ರಾ ಹೇಳಿದ್ದಾರೆ. ಭಾರತ-ಪಾಕಿಸ್ತಾನ ಪಂದ್ಯದ ಟಿಕೆಟ್‌ಗಳು ಅರ್ಧಕ್ಕಿಂತ ಕಡಿಮೆ ಮಾರಾಟವಾಗಿವೆ. ಕೊಹ್ಲಿ ಮತ್ತು ರೋಹಿತ್ ಅವರ ಉಪಸ್ಥಿತಿಯಿಂದ ಅಭಿಮಾನಿಗಳ ಸಂಖ್ಯೆ ಹೆಚ್ಚಾಗುತ್ತಿತ್ತು ಎಂದು ಅವರು ತಿಳಿಸಿದ್ದಾರೆ.

2025 ರ ಏಷ್ಯಾಕಪ್‌ನಲ್ಲಿ ಇಲ್ಲಿಯವರೆಗೆ 3 ಪಂದ್ಯಗಳು ನಡೆದಿವೆ. ಆದರೆ ಈ ಮೂರು ಪಂದ್ಯಗಳಲ್ಲೂ ಅಭಿಮಾನಿಗಳ ಕೊರತೆ ಎದ್ದು ಕಾಣುತ್ತಿತ್ತು. ಬೇರೆ ತಂಡಗಳ ಜೊತೆಗೆ ಟೀಂ ಇಂಡಿಯಾ ಪಂದ್ಯಕ್ಕೂ ಅಭಿಮಾನಿಗಳು ಕ್ರೀಡಾಂಗಣಕ್ಕೆ ಬಂದಿರಲಿಲ್ಲ. ಇದು ಏಷ್ಯನ್ ಕ್ರಿಕೆಟ್ ಕೌನ್ಸಿಲ್‌ನ ಉದ್ವಿಗ್ನತೆಯನ್ನು ಹೆಚ್ಚಿಸಿದೆ.





ಆದಾಗ್ಯೂ, ಸೆಪ್ಟೆಂಬರ್ 14 ರಂದು ನಡೆಯಲಿರುವ ಭಾರತ ಮತ್ತು ಪಾಕಿಸ್ತಾನ ನಡುವಿನ ಪಂದ್ಯದ ಬಳಿಕ ಅಭಿಮಾನಿಗಳ ಕೊರತೆ ನೀಗಲಿದೆ ಎಂದು ಆಯೋಜಕರು ಭಾವಿಸಿದ್ದರು. ಆದರೆ ಪಂದ್ಯ ನಡೆಯಲು ಇನ್ನೇರಡು ದಿನಗಳು ಬಾಕಿ ಉಳಿದಿದ್ದರೂ ಅಭಿಮಾನಿಗಳು ಈ ಪಂದ್ಯದ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿಲ್ಲ. ಅಂದರೆ ಈ ಪಂದ್ಯದ ಅರ್ಧದಷ್ಟು ಟಿಕೆಟ್‌ಗಳು ಇನ್ನೂ ಮಾರಾಟವಾಗಿಲ್ಲ.

**ರೋಹಿತ್ ಕೊಹ್ಲಿ ಆಡದಿರುವುದು ದೊಡ್ಡ ವ್ಯತ್ಯಾಸ**

ವಾಸ್ತವವಾಗಿ ಭಾರತ ಹಾಗೂ ಪಾಕಿಸ್ತಾನ ನಡುವಿನ ಕ್ರಿಕೆಟ್ ಪಂದ್ಯವೆಂದರೆ ಇಡೀ ಕ್ರೀಡಾಂಗಣವೇ ಅಭಿಮಾನಿಗಳಿಂದ ತುಂಬಿ ತುಳುಕುವುದು ಸರ್ವೆ ಸಾಮಾನ್ಯ, ಆದರೆ ಉಭಯ ತಂಡಗಳು ಸೆಣಸಲಿರುವ ಏಷ್ಯಾಕಪ್ ಪಂದ್ಯದ ಮೇಲೆ ಅಭಿಮಾನಿಗಳು ನಿರುತ್ಸಾಹ ತೋರಿದ್ದಾರೆ ಎಂದು ವರದಿಯಾಗುತ್ತಿದೆ. ಇದೀಗ ಅಭಿಮಾನಿಗಳ ನಿರುತ್ಸಾಹಕ್ಕೆ ಕಾರಣ ತಿಳಿಸಿರುವ ಭಾರತದ ಮಾಜಿ ಕ್ರಿಕೆಟಿಗರೊಬ್ಬರು, ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಈ ಪಂದ್ಯಾವಳಿಯಲ್ಲಿ ಆಡದ ಕಾರಣ ಅಭಿಮಾನಿಗಳು ಕ್ರೀಡಾಂಗಣಕ್ಕೆ ಬರುತ್ತಿಲ್ಲ ಎಂದು ಹೇಳಿಕೊಂಡಿದ್ದಾರೆ.

**ಆಕಾಶ್ ಚೋಪ್ರಾ ಹೇಳಿದ್ದೇನು**

ಏಷ್ಯಾಕಪ್‌ನಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಿನ ಪಂದ್ಯದ ಟಿಕೆಟ್‌ಗಳು ನಿರೀಕ್ಷಿಸಿದಷ್ಟು ಬೇಗ ಮಾರಾಟವಾಗುತ್ತಿಲ್ಲ ಎಂದು ಭಾರತದ ಮಾಜಿ ಕ್ರಿಕೆಟಿಗ ಮತ್ತು ವೀಕ್ಷಕ ವಿವರಣೆಗಾರ ಆಕಾಶ್ ಚೋಪ್ರಾ ದೊಡ್ಡ ಆರೋಪ ಮಾಡಿದ್ದಾರೆ. ಟೀಂ ಇಂಡಿಯಾದ ಲೆಜೆಂಡರಿ ಬ್ಯಾಟ್ಸ್‌ಮನ್‌ಗಳಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅನುಪಸ್ಥಿತಿಯೇ ಇದಕ್ಕೆ ಪ್ರಮುಖ ಕಾರಣ ಎಂದು ಅವರು ಉಲ್ಲೇಖಿಸಿದ್ದಾರೆ. ಈ ಪಂದ್ಯದ ಟಿಕೆಟ್‌ಗಳಲ್ಲಿ ಇಲ್ಲಿಯವರೆಗೆ ಶೇಕಡಾ 50 ರಷ್ಟು ಕೂಡ ಮಾರಾಟವಾಗಿಲ್ಲ. ಈ ಇಬ್ಬರೂ ಆಟಗಾರರು ಬಹಳಷ್ಟು ಅಭಿಮಾನಿಗಳನ್ನು ಆಕರ್ಷಿಸುತ್ತಾರೆ. ಅವರು ಆಡದ ಕಾರಣ, ಈ ಪಂದ್ಯಾವಳಿಯ ಮೇಲೆ ಪರಿಣಾಮ ಬೀರಿದೆ. ವಿರಾಟ್ ರಣಜಿ ಟ್ರೋಫಿ ಪಂದ್ಯ ಆಡಲು ಹೋದಾಗಲೂ ಕ್ರೀಡಾಂಗಣ ಬಹುತೇಕ ತುಂಬಿತ್ತು. ಅವರ ಅನುಪಸ್ಥಿತಿಯು ಟಿಕೆಟ್‌ಗಳು ಮಾರಾಟವಾಗದಿರಲು ಒಂದು ದೊಡ್ಡ ಕಾರಣವಾಗಿದೆ ಎಂದು ಆಕಾಶ್ ಹೇಳಿದ್ದಾರೆ.

# ಪಾಕ್ ವೇಗಿಯ ದಾಖಲೆ ಮುರಿದ ಸ್ಪಿನ್ನರ್

ಭಾರತ ತಂಡವು ಯುಎಇಯನ್ನು 9 ವಿಕೆಟ್‌ಗಳಿಂದ ಸೋಲಿಸುವ ಮೂಲಕ 2025 ರ ಏಷ್ಯಾಕಪ್‌ನಲ್ಲಿ ಉತ್ತಮ ಆರಂಭವನ್ನು ಪಡೆದುಕೊಂಡಿದೆ. ಟೀಂ ಇಂಡಿಯಾ ಪರ ಅದ್ಭುತ ಪ್ರದರ್ಶನ ನೀಡಿದ ಸ್ಟಾರ್ ಸ್ಪಿನ್ನರ್ ಕುಲ್ದೀಪ್ ಯಾದವ್ 2.1 ಓವರ್‌ಗಳಲ್ಲಿ ಏಳು ರನ್ ನೀಡಿ ನಾಲ್ಕು ವಿಕೆಟ್‌ಗಳನ್ನು ಪಡೆದರು. ಕುಲ್ದೀಪ್ ತಮ್ಮ ಒಂದು ಓವರ್‌ನಲ್ಲಿ ಮೂರು ವಿಕೆಟ್‌ಗಳನ್ನು ಪಡೆದಿದ್ದು ಪಂದ್ಯದ ಹೈಲೆಟ್ಸ್ ಆಗಿತ್ತು. ತಮ್ಮ ಈ ಅತ್ಯುತ್ತಮ ಪ್ರದರ್ಶನಕ್ಕಾಗಿ ಪಂದ್ಯಶ್ರೇಷ್ಠರಾಗಿಯೂ ಆಯ್ಕೆಯಾದ ಕುಲ್ದೀಪ್ ಇದರೊಂದಿಗೆ ದೊಡ್ಡ ಸಾಧನೆ ಮಾಡಿದರು.

ಕುಲ್ದೀಪ್ ಯಾದವ್ 13 ಎಸೆತಗಳಲ್ಲಿ ನಾಲ್ಕು ವಿಕೆಟ್‌ಗಳನ್ನು ಕಬಳಿಸಿದರು, ಇದು ಏಷ್ಯಾಕಪ್‌ನಲ್ಲಿ ಹೊಸ ದಾಖಲೆಯಾಗಿದೆ. ಟಿ20 ಏಷ್ಯಾಕಪ್ ಇತಿಹಾಸದಲ್ಲಿ ಎರಡನೇ ಅತ್ಯುತ್ತಮ ಬೌಲಿಂಗ್ ಪ್ರದರ್ಶನ ನೀಡಿದ ಕುಲ್ದೀಪ್ ಈ ಪಂದ್ಯಾವಳಿಯಲ್ಲಿ ನಾಲ್ಕು ವಿಕೆಟ್ ಪಡೆದ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಈ ಮೂಲಕ ಕುಲ್ದೀಪ್ ಯಾದವ್ ಪಾಕಿಸ್ತಾನದ ಶಾದಾಬ್ ಖಾನ್ ಅವರ ದಾಖಲೆಯನ್ನು ಮುರಿದರು. 2022 ರ ಏಷ್ಯಾಕಪ್‌ನಲ್ಲಿ ಹಾಂಗ್ ಕಾಂಗ್ ವಿರುದ್ಧದ ಪಂದ್ಯದಲ್ಲಿ ಶಾದಾಬ್ 17 ಎಸೆತಗಳಲ್ಲಿ 4 ವಿಕೆಟ್‌ಗಳನ್ನು ಕಬಳಿಸಿದ್ದರು.

ಅದು ಮಾತ್ರವಲ್ಲದೆ ಕುಲ್ದೀಪ್ ಈಗ ಭಾರತದ ಪರ ತವರಿನ ಹೊರಗೆ ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಅತಿ ಹೆಚ್ಚು ವಿಕೆಟ್ ಪಡೆದವರ ಪಟ್ಟಿಯಲ್ಲಿ ರವಿಚಂದ್ರನ್ ಅಶ್ವಿನ್ ಅವರನ್ನು ಹಿಂದಿಕ್ಕಿದ್ದಾರೆ. ಕುಲ್ದೀಪ್ ಇದುವರೆಗೆ ತವರಿನ ಹೊರಗೆ 25 ಟಿ20 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದು, ಇದರಲ್ಲಿ ಅವರು 11.15 ರ ಸರಾಸರಿಯಲ್ಲಿ ಒಟ್ಟು 52 ವಿಕೆಟ್ಸ್ ಕಬಳಿಸಿದ್ದಾರೆ. ಈ ಹಿಂದೆ ಎರಡನೇ ಸ್ಥಾನದಲ್ಲಿದ್ದ ಅಶ್ವಿನ್ 50 ವಿಕೆಟ್‌ಗಳನ್ನು ಕಬಳಿಸಿದ್ದರು. ಭಾರತದ ಹೊರಗೆ ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಇದುವರೆಗೆ ಒಟ್ಟು 71 ವಿಕೆಟ್‌ಗಳನ್ನು ಕಬಳಿಸುವಲ್ಲಿ ಯಶಸ್ವಿಯಾಗಿರುವ ಅರ್ಶ್‌ದೀಪ್ ಸಿಂಗ್ ಅವರ ಹೆಸರು ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.



**ಅತ್ಯಧಿಕ ಮೊತ್ತಕ್ಕೆ ಹರಾಜು**

# ಒಮಾನ್ ವಿರುದ್ಧ 93 ರನ್‌ಗಳಿಂದ ಗೆದ್ದ ಪಾಕಿಸ್ತಾನ

ಏಷ್ಯಾಕಪ್‌ನ ನಾಲ್ಕನೇ ಪಂದ್ಯವು ಪಾಕಿಸ್ತಾನ ಮತ್ತು ಓಮನ್ ನಡುವೆ ನಡೆಯಿತು. ಈ ಪಂದ್ಯದಲ್ಲಿ ಪಾಕಿಸ್ತಾನ ತಂಡ ಒಮಾನ್ ತಂಡವನ್ನು 93 ರನ್‌ಗಳಿಂದ ಸೋಲಿಸಿ ಟೂರ್ನಿಯಲ್ಲಿ ಗೆಲುವಿನ ಆರಂಭ ಮಾಡಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದ ಪಾಕಿಸ್ತಾನ ನಾಯಕ ಸಲ್ಮಾನ್ ಅಲಿ ಅಘಾ ಮೊದಲು ಬ್ಯಾಟಿಂಗ್ ಮಾಡಲು ನಿರ್ಧರಿಸಿದರು. ಸ್ಫೋಟಕ ಬ್ಯಾಟರ್ ಮೊಹಮ್ಮದ್ ಹ್ಯಾರಿಸ್ ಅವರ ಅರ್ಧಶತಕದ ಆಧಾರದ ಮೇಲೆ ಪಾಕ್ ತಂಡ 20 ಓವರ್‌ಗಳಲ್ಲಿ ಏಳು ವಿಕೆಟ್‌ಗಳಿಗೆ 160 ರನ್ ಗಳಿಸಿತು. ಈ ಗುರಿ ಬೆನ್ನಟ್ಟಿದ ಒಮಾನ್ ತಂಡ ನಿಯಮಿತ ಅಂತರದಲ್ಲಿ ವಿಕೆಟ್ ಕಳೆದುಕೊಂಡು ಕೇವಲ 60 ರನ್‌ಗಳಿಗೆ ಆಲೌಟ್ ಆಯಿತು. ಈ ಮೂಲಕ ಪಾಕ್ ತಂಡ ತನ್ನ ಮೊದಲ ಪಂದ್ಯದಲ್ಲಿ 93 ರನ್‌ಗಳ ಭರ್ಜರಿ ಜಯ ದಾಖಲಿಸಿತು.

**ಪಾಕಿಸ್ತಾನಕ್ಕೆ ಆರಂಭಿಕ ಆಘಾತ:** ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನದ ಆರಂಭ ಕೆಟ್ಟದಾಗಿತ್ತು. ಮೊದಲ ಓವರ್‌ನ ಎರಡನೇ ಎಸೆತದಲ್ಲಿ ಆರಂಭಿಕ ಸೈಮ್ ಅಯೂಬ್ ಎಲ್‌ಬಿಡಬ್ಲ್ಯೂ ಔಟ್ ಆದರು. ಅವರು ಖಾತೆ ತೆರೆಯಲೂ ಸಾಧ್ಯವಾಗಲಿಲ್ಲ. ಇದಾದ ನಂತರ, ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಲು ಬಂದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಮೊಹಮ್ಮದ್ ಹ್ಯಾರಿಸ್, ಸಾಹಿಬ್‌ಜಾದಾ ಫರ್ಹಾನ್ ಜೊತೆ ಸೇರಿ ಎರಡನೇ ವಿಕೆಟ್‌ಗೆ 63 ಎಸೆತಗಳಲ್ಲಿ 85 ರನ್‌ಗಳ ಜೊತೆಯಾಟ ನಡೆಸಿದರು. ಆದರೆ 29 ಎಸೆತಗಳಲ್ಲಿ 29 ರನ್ ಬಾರಿಸಿದ ಫರ್ಹಾನ್ ಔಟ್ ಆಗುವ ಮೂಲಕ ಈ ಜೊತೆಯಾಟ ಮುರಿದು ಬಿತ್ತು.

**ಮೊಹಮ್ಮದ್ ಹ್ಯಾರಿಸ್ ಅರ್ಧಶತಕ:** ಆದಾಗ್ಯೂ, ತಂಡದ ಪರ ಸ್ಫೋಟಕ ಬ್ಯಾಟಿಂಗ್ ಮಾಡಿದ ಮೊಹಮ್ಮದ್ ಹ್ಯಾರಿಸ್ ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ತಮ್ಮ ಮೊದಲ ಅರ್ಧಶತಕವನ್ನು ಪೂರೈಸಿದರು. 43 ಎಸೆತಗಳಲ್ಲಿ ಏಳು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳ ಸಹಾಯದಿಂದ 66 ರನ್ ಗಳಿಸಿ ಔಟಾದರು. ಆ ನಂತರ ಬಂದ ನಾಯಕ ಸಲ್ಮಾನ್ ಅಗಾ ಖಾತೆ ತೆರೆಯದೆ ವಿಕೆಟ್ ಒಪ್ಪಿಸಿದರು. ಮೊಹಮ್ಮದ್ ನವಾಜ್ 19 ರನ್ ಗಳಿಸಿ ಔಟಾದರೆ, ಫಹೀಮ್ ಅಶ್ರಫ್ ಎಂಟು ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಫಖರ್ ಜಮಾನ್ 23 ರನ್ ಗಳಿಸಿ ಅಜೇಯರಾಗಿ ಉಳಿದರೆ, ಶಾಹೀನ್ ಶಾ ಅಫ್ರಿದಿ ಎರಡು ರನ್ ಗಳಿಸಿ ಅಜೇಯರಾಗಿ ಉಳಿದರು. ಒಮಾನ್ ಪರ ಶಾ ಫೈಸಲ್ ಮತ್ತು ಆಮಿರ್ ಕಲೀಮ್ ತಲಾ ಮೂರು ವಿಕೆಟ್ ಪಡೆದರೆ, ಮೊಹಮ್ಮದ್ ನದೀಮ್ ಒಂದು ವಿಕೆಟ್ ಪಡೆದರು.



**ಪಾಕ್ ಬೌಲಿಂಗ್‌ಗೆ ತತ್ತರಿಸಿದ ಒಮಾನ್**

**ಗುರಿ ಬೆನ್ನಟ್ಟಿದ ಒಮಾನ್ ತಂಡ ಕೂಡ ಮೊದಲ ಓವರ್‌ನಲ್ಲೇ ಆಘಾತ ಎದುರಿಸಿತು. ನಾಯಕ ಜತೀಂದರ್ ಸಿಂಗ್ ಕೇವಲ ಒಂದು ರನ್ ಗಳಿಸಿ ಔಟಾದರು. ಮತ್ತೊಬ್ಬ ಆರಂಭಿಕ ಆಮಿರ್ ಕಲೀಮ್ ಕೂಡ ಕೇವಲ 13 ರನ್ ಗಳಿಸಿ ಪೆವಿಲಿಯನ್‌ಗೆ ಮರಳಿದರು. ಮೂರನೇ ಕ್ರಮಾಂಕದಲ್ಲಿ ಬಂದ ಹಮ್ಮದ್ ಮಿರ್ಜಾ ತಂಡದ ಪರ ಅತ್ಯಧಿಕ 27 ರನ್‌ಗಳ ಇನ್ನಿಂಗ್ಸ್ ಆಡಿದನ್ನು ಬಿಟ್ಟರೆ, ಉಳಿದವರಿಗೆ ಒಂದಂಕಿ ಕೂಡ ದಾಟಲು ಸಾಧ್ಯವಾಗಲಿಲ್ಲ.**


Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news



ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966